ವಾರ್ಷಿಕ ವರದಿ
ANNUAL REPORT
2022-23

# 58ನೇ ವಾರ್ಷಿಕ ವರದಿ

*(ಏಪ್ರಿಲ್ 1, 2022 ರಿಂದ ಮಾರ್ಚ್ 31, 2023)*

# 58TH ANNUAL REPORT

**(April 1, 2022 to March 31, 2023)**




## ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

## UNIVERSITY OF AGRICULTURAL SCIENCES BANGALORE

**2023**




ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರು 2022 ರ ನವೆಂಬರ್ 3–6 ರವರೆಗೆ ಜಿಕೆವಿಕೆ ಕ್ಯಾಂಪಸ್ ಬೆಂಗಳೂರಿನಲ್ಲಿ ಆಯೋಜಿಸಲಾದ ಕೃಷಿಮೇಳ–2022 ಅನ್ನು 'ಕೃಷಿಯಲ್ಲಿ ನವೋದ್ಯಮಗಳು' ಎಂಬ ವಿಷಯದೊಂದಿಗೆ ಉದ್ಘಾಟಿಸುತ್ತಿದ್ದಾರೆ

Hon'ble Governor of Karnataka Inaugurating the Krishimela - 2022 organized at GKVK campus Bengaluru for 3-6 November 2022 with the theme 'Startups in Agriculture'



ವಿಶ್ವವಿದ್ಯಾನಿಲಯದ ಆರಂಭದ ಜ್ಞಾಪಕಾರ್ಥವಾಗಿ 11ನೇ ಅಕ್ಟೋಬರ್ 2022 ರಂದು ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ತನ್ನ 57ನೇ ಸಂಸ್ಥಾಪನಾ ದಿನವನ್ನು ಆಚರಿಸಿಕೊಂಡಿತು

University of Agricultural Sciences, Bangalore celebrated its 57th Foundation Day on 11th October, 2022 Reminisce the beginning of University

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

# UNIVERSITY OF AGRICULTURAL SCIENCES
# BANGALORE

## 58ನೇ ವಾರ್ಷಿಕ ವರದಿ

(ಏಪ್ರಿಲ್ 1, 2022 ರಿಂದ ಮಾರ್ಚ್ 31, 2023)

## *58TH ANNUAL REPORT*

***(April 1, 2022 to March 31, 2023)***

**2022-23**

ಪ್ರಕಾಶಕರು, ಸಂಕಲನ, ಪ್ರಕ್ರಿಯೆ ಹಾಗೂ ಸಂಪಾದನೆ
Published, Compiled, Processed & Edited by

**ಡಾ. ಕೆ. ಹೆಚ್. ನಾಗರಾಜ್**
ಸಂಪಾದಕರು ಮತ್ತು ಪ್ರಾಧ್ಯಾಪಕರು (ಕೃಷಿ ವಿಸ್ತರಣೆ)
ಸಂವಹನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು

**Dr. K. H. Nagaraj**
Editor & Professor of Agril. Extension
Communication Centre
UAS, GKVK, Bengaluru-560 065

**ಡಾ. ರೂಪಾ ಬಿ. ಪಾಟೀಲ್**
ಸಹ ಸಂಪಾದಕರು, ಸಂವಹನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು

**Dr. Roopa B. Patil**
Assoc. Editor, Communication Centre
UAS, GKVK, Bengaluru-560 065

ಅಕ್ಷರ ಜೋಡಣೆ, ವಿನ್ಯಾಸ
Design, Layout & Typing

**ಶ್ರೀ ಎನ್. ರಾಮಕೃಷ್ಣ**
**ಶ್ರೀಮತಿ ಎಸ್. ಉಮಾದೇವಿ**
**ಶ್ರೀ ಜೆ. ಚಂದ್ರಶೇಖರ್**
ಸಂವಹನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು

**Mr. N. Ramakrishna**
**Mrs. S. Umadevi**
**Mr. J. Chandra Shekar**
Communication Centre
UAS, GKVK, Bengaluru-560 065

ಮಾಹಿತಿ ಒದಗಿಸಿದವರು

ವಿಶ್ವವಿದ್ಯಾನಿಲಯದ ಕುಲಪತಿಗಳ ಕಛೇರಿ, ಶಿಕ್ಷಣ ನಿರ್ದೇಶಕರ ಕಛೇರಿ, ಕುಲಸಚಿವರ ಕಛೇರಿ, ಸಂಶೋಧನಾ ನಿರ್ದೇಶಕರ ಕಛೇರಿ, ವಿಸ್ತರಣಾ ನಿರ್ದೇಶಕರ ಕಛೇರಿ, ವಿವಿಧ ಕೃಷಿ ಮಹಾವಿದ್ಯಾಲಯಗಳ ಡೀನ್‌ರವರು, ಡೀನ್ (ವಿದ್ಯಾರ್ಥಿ ಕಲ್ಯಾಣ), ಡೀನ್ (ಸ್ನಾತಕೋತ್ತರ), ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ, ಆಡಳಿತಾಧಿಕಾರಿಗಳ ಕಛೇರಿ, ಆಸ್ತಿ ಅಧಿಕಾರಿಗಳ ಕಛೇರಿ, ಗ್ರಂಥಾಲಯ, ಸಂವಹನ ಕೇಂದ್ರ, ವಿಶ್ವವಿದ್ಯಾನಿಲಯದ ಪರೀಕ್ಷಾ ಘಟಕ, ಕನ್ನಡ ಅಧ್ಯಯನ ವಿಭಾಗ ಮತ್ತು ಪ್ರಾಯೋಜನೆ ಯೋಜನೆ ಮತ್ತು ಮೇಲುಸ್ತುವಾರಿ ಘಟಕ.

Source of Information

Vice-Chancellor's Office, Directorate of Education, Office of Registrar, Directorate of Research, Directorate of Extension, Deans of constituent Colleges, Dean of Student Welfare, Dean (PGS), Comptroller Office, Administrative Office, Estate Office, Library, Communication Centre, Examination Cell, Department of Kannada Studies and PPMC of UAS, Bangalore.

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

## ಮುನ್ನುಡಿ



ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 58ನೇ ವಾರ್ಷಿಕ ವರದಿಯನ್ನು ಮಂಡಿಸುತ್ತಿರುವುದು ನನಗೆ ಬಹಳ ಸಂತೋಷದ ವಿಷಯವಾಗಿದೆ. ಮೈಸೂರು (ಕರ್ನಾಟಕ) ಸರ್ಕಾರದ ವಿಶ್ವವಿದ್ಯಾಲಯ ಕಾಯ್ದೆಯ ಅನ್ವಯ 6ನೇ ಜೂನ್ 1963ರಂದು ಸ್ಥಾಪಿತವಾದ ವಿಶ್ವವಿದ್ಯಾನಿಲಯವು ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳ ಕ್ಷೇತ್ರಗಳಲ್ಲಿನ ಮೂಲ ಆಧಾರ ಸ್ಥಂಭಗಳಂತಿರುವ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಗಳಿಗೆ ತನ್ನನ್ನು ಸಮರ್ಪಿಸಿ ಕೊಂಡಿದೆ. ಪ್ರಸ್ತುತ ವರದಿಯು 2022-23ರ ಅವಧಿಯಲ್ಲಿ (1ನೇ ಏಪ್ರಿಲ್, 2022 ರಿಂದ 31ನೇ ಮಾರ್ಚ್, 2023 ರವರೆಗೆ) ಶಿಕ್ಷಣ, ಸಂಶೋಧನೆ, ವಿಸ್ತರಣೆ ಮತ್ತು ಆಡಳಿತದಲ್ಲಿ ಉತ್ಕೃಷ್ಟತೆಯನ್ನು ತರಲು ವಿಶ್ವವಿದ್ಯಾನಿಲಯವು ತೋರಿದ ಅಚಲವಾದ ಬದ್ಧತೆಯನ್ನು ಪ್ರದರ್ಶಿಸುತ್ತದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳಿಗೂ ರೈತರಿಗೂ ಸಲ್ಲಿಸುವ ಸೇವೆಯಲ್ಲಿ ಶ್ರೀಮಂತ ಇತಿಹಾಸವನ್ನು ಹೊಂದಿದೆ. ಜೊತೆಗೆ ಸಾಧನೆಯ ಹಾದಿಯಲ್ಲಿ ಪ್ರಭಾವಿ ಹಾಗೂ ಪ್ರಶಂಸಾರ್ಹ ದಾಖಲೆಯನ್ನು ಹೊಂದಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ನೀಡಿರುವ ಅಸಾಧಾರಣ ಬೆಂಬಲ ಹಾಗೂ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಕ್ಷೇತ್ರಗಳಲ್ಲಿ ಹಲವಾರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳೊಂದಿಗೆ ಬೆಳೆದಿರುವ ಸಹಯೋಗಕ್ಕೆ ನಾವು ಕೃತಜ್ಞರಾಗಿರುತ್ತೇವೆ.

ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಯಲ್ಲಿ ಪ್ರಮುಖ ಸಂಸ್ಥೆಯಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಮಹಾವಿದ್ಯಾಲಯಗಳ ರಚನೆಯನ್ನು ಅನುಸರಿಸುತ್ತಿದೆ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ಗುಣಮಟ್ಟವನ್ನು ಹೆಚ್ಚಿಸಲು ನಿರಂತರವಾಗಿ ಪ್ರಯತ್ನಿಸುತ್ತಿದೆ. ಹೊಸ ಶೈಕ್ಷಣಿಕ ಕಾರ್ಯಕ್ರಮಗಳ ಪರಿಚಯ ಮತ್ತು ನವೀನ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುವುದೂ ಸೇರಿದಂತೆ ನಾವು ಹಲವಾರು ಮಹತ್ವದ ಕ್ರಮಗಳನ್ನು ಕೈಗೊಂಡಿದ್ದೇವೆ. ಪ್ರಸ್ತುತದಲ್ಲಿ ನಾವು ಕೃಷಿ, ರೇಷ್ಮೆಕೃಷಿ, ಆಹಾರ ತಂತ್ರಜ್ಞಾನ, ಕೃಷಿ-ವ್ಯವಹಾರ ನಿರ್ವಹಣೆ, ಜೈವಿಕ ತಂತ್ರಜ್ಞಾನ, ಕೃಷಿ ಇಂಜಿನಿಯರಿಂಗ್ ಹಾಗೂ ಆಹಾರ ಪೋಷಣೆ ಮತ್ತು ಪತ್ಯದಂತಹ ವೈವಿಧ್ಯಮಯವಾದ ವಿಷಯಗಳಲ್ಲಿ ಸ್ನಾತಕ ಶಿಕ್ಷಣ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಇದರೊಂದಿಗೆ, ನಾವು ವಿಶ್ವವಿದ್ಯಾನಿಲಯದ ಐದು ಆವರಣಗಳಲ್ಲಿ 26 ಸ್ನಾತಕೋತ್ತರ ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು 17 ಡಾಕ್ಟರೇಟ್ ಶೈಕ್ಷಣಿಕ ಕಾರ್ಯಕ್ರಮಗಳನ್ನು ನೀಡುತ್ತಿದ್ದೇವೆ. ವಿಶೇಷ ಕೌಶಲ್ಯ ಮತ್ತು ಪ್ರಾಯೋಗಿಕ ಅನುಭವವನ್ನು ಒದಗಿಸಲು ನಮ್ಮ ವಿಶ್ವವಿದ್ಯಾನಿಲಯವು ಕ್ರಿಯಾತ್ಮಕ ಪಠ್ಯಕ್ರಮಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ. ಮಂಡ್ಯದ ಕೃಷಿ ಮಹಾವಿದ್ಯಾಲಯ ಮತ್ತು ಚಿಂತಾಮಣಿಯ ರೇಷ್ಮೆಕೃಷಿ ಮಹಾವಿದ್ಯಾಲಯಗಳಲ್ಲಿ ಕ್ರಮವಾಗಿ ಕೃಷಿ ಹಾಗೂ ರೇಷ್ಮೆಕೃಷಿ ವಿಷಯಗಳಲ್ಲಿ ಎರಡು ವರ್ಷಗಳ ಡಿಪ್ಲೊಮೊ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ಸೆಮಿಸ್ಟರ್ ಪದ್ಧತಿಯಡಿಯಲ್ಲಿಯೂ ಸಹ ನಾವು ನಡೆಸುತ್ತಿದ್ದೇವೆ. ಇದಲ್ಲದೆ, ವಿಸ್ತರಣಾ ನಿರ್ದೇಶನಾಲಯವು ದೂರ ಶಿಕ್ಷಣದ ಮೂಲಕ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಕೈಗೊಳ್ಳುತ್ತಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಪ್ರತಿಷ್ಠಿತ 'ಸರ್ದಾರ್ ಪಟೇಲ್ ಅತ್ಯುತ್ತಮ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಸಾಂಸ್ಥಿಕ ಪ್ರಶಸ್ತಿ' ಯನ್ನು ಎರಡು ಬಾರಿ ಮುಡಿಗೇರಿಸಿಕೊಂಡಿದ ಸಂಗತಿಯನ್ನು ಹಂಚಿಕೊಳ್ಳಲು ಹೆಮ್ಮೆ ಎನಿಸುತ್ತದೆ. ಇದಲ್ಲದೆ, 2023ರಲ್ಲಿ ವಿಶ್ವವಿದ್ಯಾನಿಲಯವು ಭಾರತ ಸರ್ಕಾರದ ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟು (NIRF) ಪ್ರಕಟಿಸುವ ಕೃಷಿ ಮತ್ತು ಸಂಬಂಧಿತ ವರ್ಗದಡಿಯಲ್ಲಿ 11ನೇ ಶ್ರೇಣಿಯನ್ನು ಪಡೆದುಕೊಂಡಿದೆ. ಕಳೆದ ದಶಕದಲ್ಲಿ, ಕಿರಿಯ ಸಂಶೋಧಕರ ಸಂಶೋಧನಾ ಫೆಲೋಶಿಪ್ (ಜೂನಿಯರ್ ರಿಸರ್ಚ್ ಫೆಲೋಶಿಪ್) ಪಡೆದ ಪಟ್ಟಿಯಲ್ಲಿ ನಮ್ಮ ವಿಶ್ವವಿದ್ಯಾನಿಲಯವು ಸತತವಾಗಿ ಅಗ್ರ ಮೂರು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿ ಸ್ಥಾನವನ್ನು ಪಡೆದಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ರಾಜ್ಯದ 10 ದಕ್ಷಿಣ ಜಿಲ್ಲೆಗಳಲ್ಲಿ 13 ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ನಮ್ಮ ಸಂಶೋಧನಾ ಕಾರ್ಯಕ್ರಮಗಳನ್ನು ತಂತ್ರಬದ್ಧವಾಗಿ ಯೋಜಿಸಲಾಗಿದೆ. ವೈಜ್ಞಾನಿಕ ಕೃಷಿ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಮೂಲಕ, ನಾವು ರೈತ ಸಮುದಾಯದ ಸವಾಲುಗಳು ಮತ್ತು ಅಗತ್ಯಗಳನ್ನು ಪೂರೈಸುತ್ತಾ, ರೈತರನ್ನು ಸಬಲೀಕರಣಗೊಳಿಸುವ ಮತ್ತು ಸಮೃದ್ಧ ಜೀವನ ವಿಧಾನವನ್ನು ಪೋಷಿಸುವ ಗುರಿಯನ್ನು ಹೊಂದಿದ್ದೇವೆ. ವಿಸ್ತರಣಾ ನಿರ್ದೇಶನಾಲಯವು ದಕ್ಷಿಣ ಕರ್ನಾಟಕದ 10 ಜಿಲ್ಲೆಗಳಲ್ಲಿ ವಿಸ್ತರಣಾ ಸೇವೆಗಳನ್ನು ಕೈಗೊಳ್ಳುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದೆ. ಸಂಬಂಧಪಟ್ಟ ಎಲ್ಲರನ್ನೂ ಭಾಗಿಯಾಗಿಸಿಕೊಂಡು ತಂತ್ರಜ್ಞಾನದ ಪ್ರಸರಣ ಮಾಡುತ್ತಿದೆ ಮತ್ತು ತಾಂತ್ರಿಕ ಮಧ್ಯಸ್ಥಿಕೆಗಳ ಅಗತ್ಯವಿರುವ ಸಮಸ್ಯೆಗಳನ್ನು ಗುರುತಿಸುತ್ತಿದೆ.

ಕರ್ನಾಟಕ ಸರ್ಕಾರದ ಬೆಂಬಲ ಹಾಗೂ ಸಹಕಾರ ಮತ್ತು ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಪರಿಷತ್ ಮತ್ತು ಇತರ ಸಹಯೋಗಗಳು ನೀಡಿರುವ ಆರ್ಥಿಕ ಸಹಾಯವನ್ನು ನಾವು ಕೃತಜ್ಞತಾ ಪೂರ್ವಕವಾಗಿ ಸ್ಮರಿಸುತ್ತೇವೆ. ನಮ್ಮ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಆಡಳಿತ ಮಂಡಳಿ, ಶೈಕ್ಷಣಿಕ ಮಂಡಳಿ, ಸಂಶೋಧನಾ ಮಂಡಳಿ, ವಿಸ್ತರಣಾ ಶಿಕ್ಷಣ ಮಂಡಳಿ, ಹಣಕಾಸು ಸಮಿತಿ ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಅಧ್ಯಯನ ಮಂಡಳಿಯ ಸದಸ್ಯರ ಬದ್ಧತೆ ಮತ್ತು ಪ್ರಾಮಾಣಿಕ ಕೊಡುಗೆಗಳು ಅಚ್ಚುಮೆಚ್ಚಿನವಾಗಿವೆ. ನಮ್ಮ ಅಧಿಕಾರಿಗಳು, ಅಧ್ಯಾಪಕರು, ಸಹಾಯಕ ಸಿಬ್ಬಂದಿ ಮತ್ತು ಕಾರ್ಮಿಕರು, ನಮ್ಮ ರಾಜ್ಯದ ಮತ್ತು ಒಂದು ಹಂತಕ್ಕೆ ನಮ್ಮ ದೇಶದ ವಿದ್ಯಾರ್ಥಿ ಮತ್ತು ರೈತ ಸಮುದಾಯಕ್ಕೆ ಸೇವೆ ಸಲ್ಲಿಸುವ ನಿಟ್ಟಿನಲ್ಲಿ ನಮ್ಮ ಆದೇಶಗಳನ್ನು ಪೂರೈಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ, ನಮ್ಮ ಸಾಧನೆಯಲ್ಲಿ ನಾವು ಅನೇಕ ಗಮನಾರ್ಹ ಮೈಲಿಗಲ್ಲುಗಳನ್ನು ನೆಟ್ಟಿದ್ದೇವೆ ಮತ್ತು ಮುಂದೆಯೂ ಸಹ ಇದೇ ರೀತಿ ನಮ್ಮ ಶ್ರೇಷ್ಠತೆ ಹಾಗೂ ಯಶಸ್ಸಿನ ಪಯಣವು ಮುಂದುವರಿಯುತ್ತದೆ ಎಂಬ ವಿಶ್ವಾಸ ನನಗಿದೆ.

ಮೇ, 2023
ಬೆಂಗಳೂರು

(ಎಸ್.ವಿ. ಸುರೇಶ)
ಕುಲಪತಿಗಳು

# UNIVERSITY OF AGRICULTURAL SCIENCES BANGALORE



## FOREWORD

It is with great pleasure that I present the 58th Annual Report of the University of Agricultural Sciences, Bangalore. Established on 6th June 1963, through an Act of the Government of Mysore (Karnataka), our University is dedicated to the essential pillars of Teaching, Research and Extension in the fields of Agriculture and Allied Sciences. This report showcases our unwavering commitment to excellence in Education, Research, Extension and Administration during the period of 2022-23 (from 1st April, 2022 to 31st March, 2023).

The University of Agricultural Sciences, Bangalore (UAS-B) holds a rich history of serving students and farmers, accompanied by an impressive track record of accomplishments. We are grateful for the exceptional support received from the State and Central Governments, as well as the collaborations established with numerous National and International institutions in the realms of teaching, research, and extension.

As a prominent institution in Agricultural Education, Research, and Outreach, the UAS-B follows a collegiate structure and consistently endeavors to enhance the quality of our academic programmes. We have taken significant steps, including the introduction of new academic programmes and the adoption of innovative teaching methods. Currently, we offer a diverse range of Undergraduate Degree programmes in Agriculture, Sericulture, Food Technology, Agri-Business Management, Biotechnology, Agricultural Engineering, and Food Nutrition & Dietetics. Additionally, we provide 26 postgraduate programmes and 17 doctoral degree programmes across five campuses. To ensure specialized skills and practical experience, our University places great emphasis on a dynamic curriculum. We also offer a two-year Diploma in Agriculture and Sericulture under the semester system, taught in Kannada medium at the College of Agriculture, Mandya, and the College of Sericulture, Chintamani respectively. Further, the Directorate of Extension offers Diploma and Certificate Courses through Distance Education mode.

UAS-B takes pride in being honored twice with the prestigious 'Sardar Patel Outstanding ICAR Institution Awards'. Moreover, University secured 11th rank under Agriculture and Allied Category in National Institutional Ranking Framework (NIRF), Government of India during 2023. Over the past decade, our University has consistently been among the top three State Agricultural Universities (SAUs) in terms of the number of Junior Research Fellowships (JRFs) awarded.

Our research programmes are strategically planned across 13 Agricultural Research Stations situated in 10 Southern Districts of the state, falling under the jurisdiction of UAS-B. By developing scientific agricultural technologies, we address the challenges and needs of the farming community, aiming to empower farmers and foster a prosperous way of life. The Directorate of Extension plays a vital role in carrying out extension services in 10 districts of Southern Karnataka, engaging all stakeholders for the dissemination of technology and identifying problems requiring technological interventions.

We gratefully acknowledge the support and cooperation of the Government of Karnataka, the Indian Council of Agricultural Research, New Delhi and other collaborators for their financial assistance. The commitment and contributions of the Members of the Board of Management, the Academic Council, the Research Council, the Extension Education Council, the Finance Committee and the Board of Studies (Undergraduate and Postgraduate) in implementing our teaching, research and extension programmes are sincerely appreciated. Our officers, faculty, supporting staff and karmikas have played a crucial role in fulfilling our mandates, serving the students and farming community of the State and the Nation at large.

Together, we have achieved many remarkable milestones and I am confident that our journey of excellence will continue into the future.

May, 2023
Bengaluru

**(S.V. Suresha)**
Vice-Chancellor

# ವಿಷಯಾನುಕ್ರಮ / CONTENTS


| ಅಧ್ಯಾಯ ಸಂಖ್ಯೆ/ Chapter number | | ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title | | ಪುಟ ಸಂಖ್ಯೆ Page no. |
|---|---|---|---|---|
| | | ಕಾರ್ಯಕಾರಿ ವರದಿ / Executive Summary | ... | i-vi |
| ಅಧ್ಯಾಯ I | **ವಿಶ್ವವಿದ್ಯಾನಿಲಯದ ಆಡಳಿತ / University Administration** | | | |
| **Chapter I** | 1.1 | ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮತ್ತು ನಿಗಮನ<br>Establishment and Incorporation of the Universities | ... | 2 |
| | 1.2 | ಕಾರ್ಯವ್ಯಾಪ್ತಿ ಪ್ರದೇಶ<br>Jurisdiction | ... | 2 |
| | 1.3 | ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳು<br>Objectives of the University | ... | 2 |
| | 1.4 | ವಿಶ್ವವಿದ್ಯಾನಿಲಯದ ಪ್ರಾಧಿಕಾರ<br>Authorities of the University | ... | 2 |
| | 1.5 | ಆಡಳಿತ ನಿರ್ವಹಣಾ ಮಂಡಳಿ ಮತ್ತು ಅದರ ಸಂರಚನೆ<br>The Board of Management and its Constitution | ... | 4 |
| | 1.6 | ವಿಶ್ವವಿದ್ಯಾನಿಲಯದ ಅಧಿಕಾರಿಗಳು<br>Officers of the University | ... | 6 |
| | 1.7 | ವಿಶ್ವವಿದ್ಯಾನಿಲಯದ ಗುರಿ, ಧ್ಯೇಯೋದ್ಧೇಶ ಮತ್ತು ಆಧ್ಯಾದೇಶ<br>University Vision, Mission and Mandates | ... | 10 |
| | 1.8 | ವಿಶ್ವವಿದ್ಯಾನಿಲಯದ ಆಡಳಿತ<br>University Governance | ... | 10 |
| | 1.9 | ಮಾಹೆಯಾನ ಕುಲಪತಿಗಳು ಭಾಗವಹಿಸಿದ ಪ್ರಮುಖ ಕಾರ್ಯಕ್ರಮಗಳು ಹಾಗೂ ಸಭೆಗಳು<br>Month-wise important Programmes and Meetings participated by the Vice-Chancellor | ... | 12 |
| | 1.10 | ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಭೆಗಳು<br>Meetings of the Authorities of the University | ... | 28 |
| ಅಧ್ಯಾಯ II | **ಶೈಕ್ಷಣಿಕ ಆಡಳಿತ / Academic Administration** | | | |
| **Chapter II** | 2.1 | ಶೈಕ್ಷಣಿಕ ಕಾರ್ಯಕ್ರಮಗಳು<br>Academic Programmes | ... | 30 |
| | 2.2 | ಆಡಳಿತ ನಿರ್ವಹಣಾ ವ್ಯವಸ್ಥೆ ಮತ್ತು ಕಾರ್ಯಗಳು<br>Administrative Management System and Functions | ... | 30 |
| | 2.3 | ಕೈಗೊಂಡ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು<br>Functions and Activities Performed | ... | 33 |
| | 2.3.1 | ಸ್ನಾತಕ ಪದವಿ ಕಾರ್ಯಕ್ರಮಗಳಿಗೆ ಪ್ರವೇಶಾತಿ<br>Admission to Bachelor Degree Programmes | ... | 33 |
| | 2.3.2 | ಸ್ನಾತಕೋತ್ತರ ಮತ್ತು ಡಾಕ್ಟೋರಲ್ ಪದವಿ ಕಾರ್ಯಕ್ರಮಗಳಿಗೆ ಪ್ರವೇಶಾತಿ<br>Admission to Masters and Doctoral Degree Programmes | ... | 33 |
| | 2.3.3 | ಡಿಪ್ಲೊಮಾ ಕಾರ್ಯಕ್ರಮಗಳಿಗೆ ಪ್ರವೇಶಾತಿ<br>Admission to Diploma Programmes | ... | 34 |
| | 2.3.4 | ಪ್ರವೇಶ ಸಮಿತಿ<br>Admission Committee | ... | 34 |
| | 2.3.5 | ಪ್ರವೇಶ ಸಾಧ್ಯ ಸಂಖ್ಯೆ, ಪ್ರವೇಶ ಪಡೆದ ವಿದ್ಯಾರ್ಥಿಗಳು ಮತ್ತು ಹಾಜರಾಗಿದ್ದ ವಿದ್ಯಾರ್ಥಿಗಳು<br>Admission Intake, Admissions made and Students on Roll | ... | 35 |

| ಅಧ್ಯಾಯ ಸಂಖ್ಯೆ/ Chapter number | ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title | ಪುಟ ಸಂಖ್ಯೆ Page no. |
|---|---|---|
| 2.3.5.1 | ಸ್ನಾತಕ ಪದವಿಗಳು ... Bachelor Degrees | 35 |
| 2.3.5.2 | ಸ್ನಾತಕೋತ್ತರ ಮತ್ತು ಡಾಕ್ಟೋರಲ್ ಪದವಿಗಳು ... Master and Doctoral Degrees | 37 |
| 2.3.5.3 | ಕೃಷಿಯಲ್ಲಿ ಮತ್ತು ರೇಷ್ಮೆಕೃಷಿಯಲ್ಲಿ ಡಿಪ್ಲೊಮಾ ... Diploma in Agriculture & Sericulture | 37 |
| 2.3.5.4 | ಸ್ನಾತಕ, ಸ್ನಾತಕೋತ್ತರ ಮತ್ತು ಡಾಕ್ಟೋರಲ್ ಪದವಿಗಳಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳ ಸಂಖ್ಯೆ ... Number of Students passed out in Bachelors', Masters' and Doctoral degree | 40 |
| 2.3.6 | ನೀಡಲಾಗುತ್ತಿರುವ ಕೋರ್ಸ್‌ಗಳು, ಬೋಧಕ ಸಿಬ್ಬಂದಿಯ ಸಂಖ್ಯೆ ಮತ್ತು ನಡೆಸಿದ ಪರೀಕ್ಷೆಗಳು ... Courses offered, Faculty strength and Examination conducted | 40 |
| 2.3.7 | ವಿದ್ಯಾರ್ಥಿ 'ರೆಡಿ' (ಗ್ರಾಮೀಣ ಉದ್ಯಮಶೀಲತೆ ಜಾಗೃತಿ ಅಭಿವೃದ್ಧಿ ಯೋಜನೆ) ... ಕಾರ್ಯಕ್ರಮದ ಅಳವಡಿಕೆ ಮತ್ತು ಅನುಷ್ಠಾನ Adoption and Implementation of Student READY (Rural Entrepreneurship Awareness Develoment Yojana) | 40 |
| 2.3.8 | ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದ ಅನುಷ್ಠಾನ ... Implementation of RAWEP | 41 |
| 2.4 | ಪ್ರಾಯೋಗಿಕ ತರಬೇತಿ ... Hands on Training | 49 |
| 2.5 | ಬಾಹ್ಯ ಪರೀಕ್ಷೆಗಳು, ಮೌಲ್ಯಮಾಪನ ನಡೆಸುವಿಕೆ ಮತ್ತು ಫಲಿತಾಂಶಗಳ ಘೋಷಣೆ ... Conduct of External Examinations, Evaluation and Declaration of Results | 53 |
| 2.6 | ಕನ್ನಡ ಅಧ್ಯಯನ ವಿಭಾಗ ಮತ್ತು ಸಂವಹನ ಕೇಂದ್ರ ... Department of Kannada Studies and Communication Centre | 56 |
| 2.7 | ವಿದ್ಯಾರ್ಥಿಗಳಿಗೆ ಆರ್ಥಿಕ ಬೆಂಬಲ ... Financial support provided to Students | 58 |
| 2.8 | ವಿದ್ಯಾರ್ಥಿಗಳಿಗೆ ಕ್ರೀಡೆ, ಆಟೋಟ ಮತ್ತು ಪಠ್ಯೇತರ ಚಟುವಟಿಕೆಗಳ ಆಯೋಜನೆ ... Organizing Sports, Games and Co-curricular Activities for Students | 58 |
| 2.9 | ಉದ್ಯೋಗ ಕೋಶ ... Placement Cell | 63 |
| 2.10 | ರಾಷ್ಟ್ರೀಯ ಸೇವಾ ಯೋಜನೆ ... National Service Scheme | 63 |
| 2.11 | ಯುವ ರೆಡ್‌ಕ್ರಾಸ್ ಸೊಸೈಟಿ ... Youth Red Cross Society | 67 |
| 2.12 | ವೈದ್ಯಕೀಯ ಸೇವೆ ನೀಡುವಿಕೆ ... Medical Services Provided | 67 |
| 2.13 | ಅಂತರಾಷ್ಟ್ರೀಯ ಕೇಂದ್ರ ... International Centre | 68 |
| 2.14 | ಗ್ರಂಥಾಲಯ ಸಂಪನ್ಮೂಲಗಳು ಮತ್ತು ಮಾಹಿತಿ ವ್ಯವಸ್ಥೆ ... Library Resources and Information System | 69 |
| 2.15 | 57ನೇ ವಾರ್ಷಿಕ ಘಟಿಕೋತ್ಸವ ಮತ್ತು ಪದವಿ ಗೌರವ 2023 ... Conferment of Degree and Presentation of Medals in 57th Convocation 2023 | 78 |

| ಅಧ್ಯಾಯ ಸಂಖ್ಯೆ/ Chapter number | | ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title | | ಪುಟ ಸಂಖ್ಯೆ Page no. |
|---|---|---|---|---|
| **ಅಧ್ಯಾಯ III** | **ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿ / Agricultural Research and Development** | | | |
| **Chapter III** | 3.1 | ಕೃಷಿ ಸಂಶೋಧನಾ ಕೇಂದ್ರಗಳು ಮತ್ತು ಹವಾಮಾನ ವಲಯಗಳು<br>Agricultural Research Stations and Climatic Zones | ... | 79 |
| | 3.2 | ಕಾರ್ಯಾಚರಣೆಯಲ್ಲಿರುವ ಪ್ರಾಯೋಜನೆಗಳು<br>Projects in Operation | ... | 80 |
| | 3.3 | ಇತರೆ ಸಂಸ್ಥೆಗಳ ಜೊತೆ ಮಾಡಿಕೊಂಡ ಒಡಂಬಡಿಕೆಗಳು / ಒಪ್ಪಂದಗಳು<br>MoUs Signed with other Institutions | ... | 81 |
| | 3.4 | ಪರೀಕ್ಷಿಸಿದ ಹೊಸ ರಾಸಾಯನಿಕಗಳು/ತಳಿಗಳು/ಅಣುಗಳು<br>New Chemicals/Varieties/Molecules Tested | ... | 81 |
| | 3.5 | ಹೊಸ ಸಂಶೋಧನೆಗೆ ಹಕ್ಕು ಪತ್ರ/Patent for Invention | ... | 82 |
| | 3.6 | ಪ್ರಮುಖ ಸಂಶೋಧನೆಗಳು / Break-through Research | ... | 82 |
| | 3.7 | ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದ ಹೊಸ ತಂತ್ರಜ್ಞಾನಗಳು<br>New Technologies Developed and Released | ... | 83 |
| | 3.8 | ಪ್ರಗತಿಯಲ್ಲಿರುವ (ಮುಖ್ಯ ತಾಂತ್ರಿಕತೆಗಳು) ಸಂಶೋಧನೆಗಳು<br>Research in Progress | ... | 91 |
| | 3.9 | ಬುಡಕಟ್ಟು ಜನಾಂಗ / ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉಪಯೋಜನೆಗಳು<br>Tribal Sub Plan / Scheduled Caste / Schedule Tribes Sub Plan | ... | 135 |
| | 3.10 | ಭಾರತೀಯ ಕೃಷಿ ಅನುಸಂಧಾನ ಪರಿಷತ್–ಉನ್ನತ ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕೇಂದ್ರ<br>Indian Council for Agriculture Research-Centre for Advanced Agricultural Science & Technology (CAAST) | ... | 141 |
| | 3.11 | ಕೇಂದ್ರೀಯ ಉಪಕರಣ ಸೌಲಭ್ಯ<br>Central Instrumentation Facility | ... | 141 |
| **ಅಧ್ಯಾಯ IV** | **ಕೃಷಿ ವಿಸ್ತರಣಾ ಶಿಕ್ಷಣ ಮತ್ತು ಸೇವೆಗಳು / Agricultural Extension Education & Services** | | | |
| **Chapter IV** | 4.1 | ಆಧ್ಯಾದೇಶಗಳು/Mandates | ... | 143 |
| | 4.2 | ಉದ್ದೇಶಗಳು/Objectives | ... | 143 |
| | 4.3 | ಕಾರ್ಯಚಟುವಟಿಕೆಗಳು/Functions | ... | 143 |
| | 4.4 | ವಿಸ್ತರಣಾ ನಿರ್ದೇಶನಾಲಯದ ಘಟಕ / ವಿಭಾಗಗಳು<br>Units of Directorate of Extension | ... | 144 |
| | 4.4.1 | ಸಿಬ್ಬಂದಿ ತರಬೇತಿ ಘಟಕ/Staff Training Unit (STU) | ... | 144 |
| | 4.4.2 | ರಾಜ್ಯ ಕೃಷಿ ವಿಸ್ತರಣಾ ನಿರ್ವಹಣೆ ಹಾಗೂ ವಿಸ್ತರಣಾ ತರಬೇತಿ ಸಂಸ್ಥೆ (ಸಮೇತಿ)<br>State Agricultural Management and Extension Training Institute (SAMETI) | ... | 145 |
| | 4.4.3 | ಬೇಕರಿ ತರಬೇತಿ ಘಟಕ/Bakery Training Unit (BTU) | ... | 145 |
| | 4.4.4 | ರೈತ ತರಬೇತಿ ಸಂಸ್ಥೆ/Farmers Training Institute (FTI) | ... | 146 |
| | 4.4.5 | ಕೃಷಿ ಮಾಹಿತಿ ಘಟಕ/Farm Information Unit (FIU) | ... | 148 |
| | 4.4.6 | ದೂರ ಶಿಕ್ಷಣ ಘಟಕ/Distance Education Unit (DEU) | ... | 149 |
| | 4.4.7 | ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ/Agricultural Technology Information Centre | ... | 149 |
| | 4.4.8 | ಕೃಷಿ ವಿಜ್ಞಾನ ವಸ್ತುಸಂಗ್ರಹಾಲಯ/Agricultural Sciences Museum (ASM) | ... | 150 |
| | 4.4.9 | ವಿಸ್ತರಣಾ ಶಿಕ್ಷಣ ಘಟಕ/Extension Education Units (EEUs) | ... | 151 |

| ಅಧ್ಯಾಯ ಸಂಖ್ಯೆ/ Chapter number | | ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title | | ಪುಟ ಸಂಖ್ಯೆ Page no. |
|---|---|---|---|---|
| | 4.4.10 | ರಾಷ್ಟ್ರೀಯ ಕೃಷಿ ವಿಸ್ತರಣಾ ಪ್ರಾಯೋಜನೆ/National Agricultural Extension Project | ... | 156 |
| | 4.4.11 | ಕೃಷಿ ವಿಜ್ಞಾನ ಕೇಂದ್ರಗಳು/Krishi Vigyan Kendras (KVKs) | ... | 159 |
| | 4.4.12 | ಕೃಷಿ ಮೇಳ–2022/Krishimela-2022 | ... | 173 |
| | 4.4.13 | ಮಹತ್ವದ ಸಾಧನೆಗಳು/Significant Achievements | ... | 174 |
| | 4.4.14 | ವಿಸ್ತರಣಾ ಪ್ರಾಯೋಜನೆ/Extension Projects | ... | 176 |
| **ಅಧ್ಯಾಯ V**<br>**Chapter V** | | **ಪಡೆದ ಪ್ರಶಸ್ತಿ ಮತ್ತು ಮನ್ನಣೆಗಳು, ಆಚರಣೆಗಳು, ಸಾಮರ್ಥ್ಯವರ್ಧನಾ ಚಟುವಟಿಕೆಗಳು ಹಾಗೂ ಪ್ರಕಟಣೆಗಳು**<br>**Awards & Recognitions, Events organised, Capacity building programmes and Publications** | | |
| | 5.1 | ವಿಶ್ವವಿದ್ಯಾನಿಲಯ ಗಳಿಸಿದ ಪ್ರಶಸ್ತಿಗಳು, ಮಾನ್ಯತೆಗಳು ಮತ್ತು ಮಹತ್ವದ ಸಾಧನೆಗಳು<br>Awards, Recognitions and Significant Achievements of the University | ... | 179 |
| | 5.2 | ಆಚರಿಸಿದ ರಾಜ್ಯ, ರಾಷ್ಟ್ರೀಯ, ಅಂತರಾಷ್ಟ್ರೀಯ ದಿನಗಳು ಮತ್ತು ವಿಶ್ವವಿದ್ಯಾನಿಲಯದ ಆಚರಣೆಗಳು<br>Celebration of State, National, International Days and Events of the University | ... | 182 |
| | 5.3 | ಭಾಗವಹಿಸಿದ ಸಮಾವೇಶ/ವಿಚಾರ ಸಂಕಿರಣ/ಕಾರ್ಯಾಗಾರ/ಇತರ ಚಟುವಟಿಕೆಗಳು<br>Participation in Conferences/Seminars/Workshops/Other activities | .. | 185 |
| | 5.4 | ಬೋಧಕರು, ಬೋಧಕೇತರು ಮತ್ತು ವಿದ್ಯಾರ್ಥಿಗಳಿಗೆ ದೊರೆತ ಪ್ರಶಸ್ತಿ ಹಾಗೂ ಮನ್ನಣೆಗಳು<br>Recognitions/Awards Conferred on Faculty, Non-Teaching and Students | ... | 188 |
| | 5.5 | ಸರ್ಕಾರದ ಮತ್ತು ಇತರೆ ಸಂಸ್ಥೆಗಳಿಗೆ ಅಧ್ಯಾಪಕರ ನಾಮ ನಿರ್ದೇಶನಗಳು<br>Nominations of Teachers for different assignment in Government and other Agencies | ... | 191 |
| | 5.6 | ಆಯೋಜಿಸಿದ / ಭಾಗವಹಿಸಿದ ಇತರ ಕಾರ್ಯಕ್ರಮಗಳು, ಕೈಗೊಂಡ ವಿಸ್ತರಣಾ ಚಟುವಟಿಕೆಗಳು ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಯ ಪ್ರಕಟಣೆಗಳು<br>Abstract of different programmes organised/participated, extension activities carried out and number of publications brought out by the faculty of UAS-B | ... | 196 |
| **ಅಧ್ಯಾಯ VI**<br>**Chapter VI** | | **ಆರ್ಥಿಕ ಸಂಪನ್ಮೂಲ, ಹಂಚಿಕೆ, ಲೆಕ್ಕಪತ್ರ ಮತ್ತು ನಿರ್ವಹಣೆ**<br>**Financial Resources, Allocation, Accounting and Management** | | |
| | 6.1 | ಆರ್ಥಿಕ ಸಂಪನ್ಮೂಲ<br>Source of Finance | ... | 202 |
| | 6.2 | ಅನುದಾನಗಳ ಸ್ವೀಕೃತಿ 2022–23<br>Receipts 2022-23 | ... | 202 |
| | 6.3 | 2022–23ನೇ ಸಾಲಿನ ವೆಚ್ಚ<br>Expenditure during 2022-23 | ... | 204 |
| | 6.4 | ನಿವೃತ್ತಿ ಸೌಲಭ್ಯದ ವಿವರಗಳು<br>Details of Retirement Benefits | ... | 207 |
| | 6.5 | ಸಾಲ ಮತ್ತು ಮುಂಗಡಗಳ ವಿವರಗಳು<br>Details of Loans and Advances | ... | 208 |
| | 6.6 | ಶಾಸನಬದ್ಧ ಲೆಕ್ಕ ಪರಿಶೋಧಕರಿಂದ ಖಾತೆಗಳ ಲೆಕ್ಕ ಪರಿಶೋಧನೆ<br>Audit of Accounts by the Statutory Auditors | ... | 209 |

| ಅಧ್ಯಾಯ ಸಂಖ್ಯೆ/ Chapter number | | ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title | | ಪುಟ ಸಂಖ್ಯೆ Page no. |
|---|---|---|---|---|
| **ಅಧ್ಯಾಯ VII Chapter VII** | **ಮಾನವ ಸಂಪನ್ಮೂಲ ಅಭಿವೃದ್ಧಿ / Human Resource Development** | | | |
| | 7.1 | ನೇಮಕಾತಿಗಳು<br>Appointments | ... | 210 |
| | 7.2 | 2022–23ನೇ ಸಾಲಿನಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವಿವರ<br>Staff Position of Teaching and Service Personnel during the year 2022-23 | ... | 210 |
| | 7.3 | ನಿವೃತ್ತಿ<br>Retirement | ... | 212 |
| | 7.4 | ವಿಶ್ವವಿದ್ಯಾನಿಲಯದ ಮುಖ್ಯಸ್ಥರು ಹಾಗೂ ವಿಭಾಗಗಳ ಮುಖ್ಯಸ್ಥರುಗಳು<br>University Heads and Heads of the Departments | ... | 216 |
| **ಅಧ್ಯಾಯ VIII Chapter VIII** | **ಸಂಶೋಧನಾ ಪೀಠಗಳು, ಸಿ.ಎ.ಆರ್.ಡಿ.ಎಸ್., ಕೃಷಿ–ಆವಿಷ್ಕಾರ ಕೇಂದ್ರ ಹಾಗೂ ಕೌಶಲ್ಯ ಅಭಿವೃದ್ಧಿ ಕೇಂದ್ರ<br>Research Chairs, CARDS,Agri-Innovation Centre and Skill Development Centre** | | | |
| | 8.1 | ಪ್ರೊ. ಎಂ.ಡಿ. ನಂಜುಡಸ್ವಾಮಿ ಸಂಶೋಧನಾ ಪೀಠ<br>Prof. M.D. Nanjundaswamy Research Chair | ... | 218 |
| | 8.2 | ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿಯ ಪೀಠ<br>Karnataka State Agricultural Marketing Board (KSAMB) Chair | ... | 220 |
| | 8.3 | ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಅಧ್ಯಯನ ಕೇಂದ್ರದ (ಸಿ.ಎ.ಆರ್.ಡಿ.ಎಸ್.) ವಾರ್ಷಿಕ ಪ್ರಗತಿ ವರದಿ<br>Centre for Agriculture and Rural Development Studies (CARDS) | ... | 221 |
| | 8.4 | ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಕೃಷಿ ನಾವಿನ್ಯತೆ ಕೇಂದ್ರ<br>Agri Innovation Centre of UAS-B | ... | 223 |
| | 8.5 | ಕೌಶಲ್ಯ ಅಭಿವೃದ್ಧಿ ಕೇಂದ್ರ<br>Skill Development Centre | ... | 225 |
| **ಅಧ್ಯಾಯ IX Chapter IX** | **ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಿರ್ವಹಣೆ<br>Infrastructure Development and Maintenance** | | | |
| | 9.1 | ಕರ್ನಾಟಕ ಸರ್ಕಾರದ ಅನುದಾನಗಳು<br>State Grants | ... | 226 |
| | 9.2 | ಭಾರತ ಸರ್ಕಾರದ ಅನುದಾನಗಳು<br>Government of India Grants | ... | 228 |
| | 9.3 | ಆರ್.ಕೆ.ವಿ.ವೈ. ಅನುದಾನಗಳು<br>Under RKVY Grants | ... | 229 |
| **ಛಾಯಾ ಚಿತ್ರಗಳು / PHOTOGRAPHS** | | | ... | 231 |
| **ಅನುಬಂಧಗಳು / ANNEXURES** | | | ... | 245 |

## ಕಾರ್ಯಕಾರಿ ವರದಿ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವನ್ನು ಆಗಿನ ಮೈಸೂರು ಸರ್ಕಾರವು 1963ರಲ್ಲಿ ಅಧಿನಿಯಮ 22ರನ್ವಯ ಸ್ಥಾಪಿಸಿತು. ವಿಶ್ವವಿದ್ಯಾನಿಲಯವು 1964ರ ಆಗಸ್ಟ್ 21ರಂದು ಅಸ್ತಿತ್ವಕ್ಕೆ ಬಂದಿತು, ಆದರೆ ಅದರ ಸ್ಥಾಪನೆಯ ಪರಿಕಲ್ಪನೆಯು 1899ರಲ್ಲೇ 30 ಎಕರೆ ಜಾಗದಲ್ಲಿ ಒಂದು ಪ್ರಾಯೋಗಿಕ ಕ್ಷೇತ್ರ ಸ್ಥಾಪನೆಯೊಂದಿಗೆ ಪ್ರಾರಂಭವಾಗಿತ್ತು. ಆ ಕ್ಷೇತ್ರವನ್ನು 202 ಎಕರೆಗಳಿಗೆ ಹೆಚ್ಚಿಸಿ 1913ರಲ್ಲಿ ಬೆಂಗಳೂರಿನ ಹೆಬ್ಬಾಳದಲ್ಲಿ ಒಂದು ಕೃಷಿ ಶಾಲೆಯನ್ನು ಸ್ಥಾಪಿಸಲಾಯಿತು ಹಾಗೂ ಅದು ಈಗ 'ಮುಖ್ಯ ಸಂಶೋಧನಾ ಕೇಂದ್ರ'ವಾಗಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ರಾಜ್ಯದ 10 ಜಿಲ್ಲೆಗಳನ್ನು ಮಾತ್ರ ಕಾರ್ಯಾಚರಣೆಯ ಭೌಗೋಳಿಯ ವ್ಯಾಪ್ತಿಯಲ್ಲಿ ಹೊಂದಿದೆ. ವಿಶ್ವವಿದ್ಯಾನಿಲಯವು ಆರು ಕಾಲೇಜುಗಳನ್ನು ಹೊಂದಿದ್ದು ಕೃಷಿ ವಿಜ್ಞಾನ, ತಂತ್ರಜ್ಞಾನ ಹಾಗೂ ಸಂಬಂಧಿತ ವಿಜ್ಞಾನ ಕ್ಷೇತ್ರಗಳಲ್ಲಿ ಶಿಕ್ಷಣ ನೀಡುವ ತನ್ನ ಆಧ್ಯಾದೇಶದ ಕಾರ್ಯವನ್ನು ಕೈಗೊಳ್ಳಲು ತನ್ನ ವ್ಯಾಪ್ತಿಯಲ್ಲಿ ಕರ್ನಾಟಕದ 10 ದಕ್ಷಿಣ ಜಿಲ್ಲೆಗಳನ್ನು ಹೊಂದಿದೆ. ಪ್ರಸ್ತುತ ವಿಶ್ವವಿದ್ಯಾನಿಲಯವು ಬಿ.ಎಸ್ಸಿ. (ಆನರ್ಸ್) ಕೃಷಿ, ಬಿ.ಎಸ್ಸಿ. (ಆನರ್ಸ್) ರೇಷ್ಮೆಕೃಷಿ, ಬಿ.ಎಸ್ಸಿ. (ಆನರ್ಸ್) ಕೃಷಿ ವ್ಯವಹಾರ ನಿರ್ವಹಣೆ, ಬಿ.ಎಸ್ಸಿ. (ಆನರ್ಸ್) ಆಹಾರ ಪೋಷಣೆ ಮತ್ತು ಪಥ್ಯ ಪದ್ಧತಿ, ಬಿ.ಟೆಕ್. (ಜೈವಿಕ ತಂತ್ರಜ್ಞಾನ), ಬಿ.ಟೆಕ್. (ಕೃಷಿ ಇಂಜಿನಿಯರಿಂಗ್) ಮತ್ತು ಬಿ.ಟೆಕ್. (ಆಹಾರ ತಂತ್ರಜ್ಞಾನ) ಎಂಬ 07 ಸ್ನಾತಕ ಪದವಿ ಕಾರ್ಯಕ್ರಮಗಳನ್ನು 26 ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು 17 ವಿಷಯಗಳಲ್ಲಿ ಡಾಕ್ಟೊರಲ್ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಮಂಡ್ಯದ ಕೃಷಿ ಮಹಾವಿದ್ಯಾಲಯದಲ್ಲಿ ಎರಡು ವರ್ಷಗಳ ಕೃಷಿಯಲ್ಲಿ ಡಿಪ್ಲೊಮಾ ಹಾಗೂ ಚಿಂತಾಮಣಿ ರೇಷ್ಮೆಕೃಷಿ ಮಹಾವಿದ್ಯಾಲಯದಲ್ಲಿ ಎರಡು ವರ್ಷಗಳ ರೇಷ್ಮೆಕೃಷಿಯಲ್ಲಿ ಡಿಪ್ಲೊಮಾವನ್ನು ನಡೆಸಲಾಗುತ್ತಿದ್ದು ಇದರ ಜೊತೆಗೆ, ವಿಸ್ತರಣಾ ನಿರ್ದೇಶನಾಲಯವು ದೂರ ಶಿಕ್ಷಣದ ಮೂಲಕ ಹಲವಾರು ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುತ್ತಿದೆ. ಈ ಮೊದಲು ಬಿ.ಎಸ್ಸಿ. (ಕೃಷಿ ಮಾರುಕಟ್ಟೆ ಮತ್ತು ಸಹಕಾರ) ಎಂದು ನೀಡಲಾಗುತ್ತಿದ್ದ ಪದವಿಯ ಹೆಸರನ್ನು 2022–23 ರಿಂದ ಬಿ.ಎಸ್ಸಿ. (ಆನರ್ಸ್) ಕೃಷಿ ವ್ಯವಹಾರ ನಿರ್ವಹಣೆ ಎಂದು ನೀಡಲಾಗುತ್ತದೆ.

ಕೃ.ವಿ.ವಿ., ಬೆಂಗಳೂರು ರಾಷ್ಟ್ರಮಟ್ಟದ ಅಕ್ರೆಡಿಟೇಶನ್‌ನಲ್ಲಿ ಒಟ್ಟಾರೆ 3.261 ಸ್ಕೋರ್ ಪಡೆದುಕೊಂಡಿದೆ, ಇದು ಗ್ರೇಡ್ 'ಎ' ಗೆ ಸಮಾನ ಹಾಗೂ 5 ವರ್ಷಗಳ ಅವಧಿಗೆ ಮಾರ್ಚ್, 2022 ರಿಂದ ಸಿಂಧುತ್ವ ಪಡೆದಿರುತ್ತದೆ. 2022ನೇ ಸಾಲಿನಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳ ಪೈಕಿ ಕೃ.ವಿ.ವಿ., ಬೆಂಗಳೂರಿಗೆ 6ನೇ ಸ್ಥಾನವನ್ನು ಕೃಷಿ ಅನುಸಂಧಾನ ಪರಿಷತ್ತು ನೀಡಿರುತ್ತದೆ.

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕ ಪದವಿಗಳಿಗೆ ಪ್ರವೇಶ ಸಾಧ್ಯ ಸಂಖ್ಯೆಯು 1096 ಇದ್ದು ಒಟ್ಟು 953 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕೋತ್ತರ ಮತ್ತು ಡಾಕ್ಟೊರಲ್ ಪದವಿಗಳಿಗೆ ಪ್ರವೇಶ ಸಾಧ್ಯ ಸಂಖ್ಯೆಯು 598 ಇದ್ದು ಒಟ್ಟು 458 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಸ್ನಾತಕ, ಸ್ನಾತಕೋತ್ತರ ಮತ್ತು ಡಿಪ್ಲೊಮಾ ಪದವಿ ಕಾರ್ಯಕ್ರಮಗಳ ಒಟ್ಟಾರೆ ಪ್ರವೇಶ ಸಾಧ್ಯತೆ 1764 ಇದ್ದು ಪ್ರವೇಶಾತಿ ಪಡೆದವರ ಸಂಖ್ಯೆ

## EXECUTIVE SUMMARY

The University of Agricultural Sciences, Bangalore (UAS-B) was established by the Act No. 22 of the then Mysore Government in the year 1963. The University came into existence on 21st August, 1964, but its conception took birth in 1899 with the establishment of experimental farm on 30 acres, followed by an Agricultural School in the expanded farm area of 202 acres during 1913, which is now the 'Main Research Station (MRS)' located at Hebbal, Bengaluru. The University of Agricultural Sciences, Bangalore has operational geographical jurisdiction of 10 Southern districts in the State. Presently, the University offers 07 Bachelor Degree programmes *viz.,* B.Sc. (Hons.) Agriculture, B.Sc. (Hons.) Sericulture), B.Sc. (Hons.) Agri-Business Management, B.Sc. (Hons.) Food Nutrition & Dietetics, B.Tech. (Biotechnology), B.Tech. (Agri. Engineering) and B.Tech. (Food Technology). University also offers Masters' degree programme in 26 disciplines and Ph.D. programme in 17 disciplines. Two year diploma in Agriculture is being offered at College of Agriculture, Mandya and Two year diploma in Sericulture is being offered at College of Sericulture, Chintamani. Further, the Directorate of Extension offers various Diploma and certificate courses on Distance Education mode. B.Sc. (Hons.) Agricultural Marketing & Co-operation degree nomenclature is changed as B.Sc. (Hons.) Agri-Business Management during 2022-23.

UAS, Bangalore has obtained Overall Accreditation score of 3.261 which is equivalent to Grade 'A' for all constituent colleges, UG, PG and Doctoral degree programmes, which is valid for a period of five years from March, 2022. UAS, Bangalore has achieved sixth rank among Agricultural Universities during 2022 ranked by ICAR, New Delhi.

During the academic year 2022-23, the intake strength for Bachelor's degree was 1096, however 953 students were admitted. The intake for Master's and Doctoral degree programme was 598 and admitted was 458 students. The overall admission intake for the Bachelor, Postgraduate degree programmes and diploma programme was 1764 while 1473 students

1473 ಆಗಿದೆ. ಪ್ರಸ್ತುತ ವರ್ಷ ಹಾಜರಾತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 4675. ವಿಶ್ವವಿದ್ಯಾನಿಲಯದ ಪರೀಕ್ಷಾ ಕೇಂದ್ರವು ಶೈಕ್ಷಣಿಕ ವರ್ಷ 2021–22ರ ಮೊದಲ ಹಾಗೂ ಎರಡನೇ ಸೆಮಿಸ್ಟರ್‌ಗಳಲ್ಲಿ ಅನುಕ್ರಮವಾಗಿ 270 ಮತ್ತು 297 ಪಠ್ಯ ವಿಷಯಗಳಲ್ಲಿ ತನ್ನ ಎಲ್ಲಾ ಆರು ಸ್ನಾತಕ ಪದವಿ ಕಾರ್ಯಕ್ರಮಗಳ ಅಂತಿಮ ಬಾಹ್ಯ ಸೈದ್ಧಾಂತಿಕ ಪರೀಕ್ಷೆಗಳನ್ನು ನಡೆಸಿದೆ. ಪ್ರಸ್ತುತ ವರ್ಷದಲ್ಲಿ ವಿಶ್ವವಿದ್ಯಾನಿಲಯವು ತನ್ನ ಎಲ್ಲಾ ಆರು ಸ್ನಾತಕ ಪದವಿ ಕಾರ್ಯಕ್ರಮಗಳಲ್ಲಿ ಒಟ್ಟು 51514 ಗ್ರೇಡ್‌ಗಳನ್ನು ಅಧಿಸೂಚನೆ ಮಾಡಿದೆ.

ಆಹಾರ ಭದ್ರತೆಯನ್ನು ಖಾತರಿಪಡಿಸುವುದರ ಜೊತೆಗೆ ಉತ್ಪಾದಕತೆಯನ್ನು ಹೆಚ್ಚಿಸಿ ಮತ್ತು ಯಾವುದೇ ವ್ಯತಿರಿಕ್ತ ಪರಿಣಾಮಗಳಿಲ್ಲದೆ ಕೃಷಿ ಸಂಪನ್ಮೂಲಗಳ ದಕ್ಷತೆಯನ್ನು ಹೆಚ್ಚಿಸುವ ಹಾಗೂ ರೈತರ ಆದಾಯ ಮತ್ತು ಸಾಮಾಜಿಕ ಸ್ಥಿತಿಯ ಗುಣಮಟ್ಟವನ್ನು ಸುಧಾರಿಸುವಂತಹ ಹಾಗು ಸಣ್ಣ ಹಿಡುವಳಿದಾರರು ಮತ್ತು ಅತಿ ಸಣ್ಣ ರೈತರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯವು 10 ಜಿಲ್ಲೆಗಳಲ್ಲಿರುವ ತನ್ನ 13 ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ಸ್ಥಳ ನಿರ್ದಿಷ್ಟ, ಕಾರ್ಯತಂತ್ರವನ್ನು ಮತ್ತು ನಿರೀಕ್ಷಿತ ಸಂಶೋಧನಾ ಕಾರ್ಯಕ್ರಮಗಳನ್ನು ರೂಪಿಸಿದೆ.

ಪ್ರಸ್ತುತ ಒಟ್ಟು 198 ಸಂಶೋಧನಾ ಪ್ರಾಯೋಜನೆಗಳು ಕಾರ್ಯಾಚರಣೆ ಯಲ್ಲಿದ್ದು ಒಟ್ಟು 6114.67 ಲಕ್ಷ ರೂ.ಗಳ ಆಯವ್ಯಯದಲ್ಲಿ ವಿವಿಧ ಅನುದಾನದ ಏಜೆನ್ಸಿಗಳು ವಿಶ್ವವಿದ್ಯಾನಿಲಯಕ್ಕೆ 29 ಹೊಸ ಬಾಹ್ಯ ಪ್ರಾಯೋಜಿತ ಸಂಶೋಧನಾ ಪ್ರಾಯೋಜನೆಗಳನ್ನು ಮಂಜೂರು ಮಾಡಿವೆ. ಪ್ರಸ್ತುತ ವರ್ಷದಲ್ಲಿ ವಿಶ್ವವಿದ್ಯಾನಿಲಯವು 416 ಹೊಸ ತಳಿಗಳು/ಸಾಲುಗಳು/ ರಾಸಾಯನಿಕಗಳು/ಅಣುಗಳನ್ನು ಪೀಡೆ/ ರೋಗ/ ಕಳೆ ನಿಯಂತ್ರಣಕ್ಕಾಗಿ/ಮಣ್ಣು ವಿಶ್ಲೇಷಣೆಗಾಗಿ ಹಾಗೂ ಕೃಷಿ ಉಪಕರಣಗಳನ್ನು ಪರೀಕ್ಷಿಸಿದ್ದು ಅವುಗಳಿಂದ ಒಟ್ಟು ರೂ.530 ಲಕ್ಷ ಆದಾಯವನ್ನು ಗಳಿಸಿದೆ. ವಿವಿಧ ಸಂಸ್ಥೆಗಳೊಂದಿಗೆ ಪರಸ್ಪರ ಆಸಕ್ತಿಯ ಸಹಯೋಜಿತ ಸಂಶೋಧನೆ ಯನ್ನು ಕೈಗೊಳ್ಳಲು ಒಟ್ಟು 10 ಒಪ್ಪಂದದ ದಸ್ತಾವೇಜುಗಳು /ಎಂ.ಓ.ಎ.ಗಳು / ಎಂ.ಟಿ.ಎ.ಗಳಿಗೆ ಸಹಿ ಮಾಡಲಾಗಿದೆ. ವಿಶ್ವವಿದ್ಯಾನಿಲಯವು ಐದು ಹೊಸ ಬೆಳೆ {ರಾಗಿ: ಎಂ.ಎಲ್–322; ಸಾವೆ: ಜಿ.ಪಿ.ಯು.ಎಲ್.11; ಬರಗು– ಜಿ.ಪಿ.ಯು.ಪಿ.32; ಸೂರ್ಯಕಾಂತಿ: ಕೆ.ಬಿ.ಎಸ್.ಹೆಚ್–85; ಹಲಸು ಜಿ.ಕೆ.ವಿ.ಕೆ. ಕೆಂಪು ಹಲಸು} ತಳಿಗಳನ್ನು ಅಭಿವೃದ್ಧಿಪಡಿಸಿದೆ ಮತ್ತು 32 ಹೊಸ ತಂತ್ರಜ್ಞಾನಗಳನ್ನು ರೈತರ ಬಳಕೆಗಾಗಿ ಬಿಡುಗಡೆ ಮಾಡಲಾಗಿದೆ.

ದಕ್ಷಿಣದ 10 ಜಿಲ್ಲೆಗಳಲ್ಲಿ ವಿಸ್ತರಣಾ ಸೇವೆ ಒದಗಿಸುವ ಜವಾಬ್ದಾರಿಯನ್ನು ವಿಸ್ತರಣಾ ನಿರ್ದೇಶನಾಲಯಕ್ಕೆ ವಹಿಸಲಾಗಿದೆ. ಕೃಷಿ ಅಭಿವೃದ್ಧಿಗೆ ಸಂಶೋಧನಾ ಆವಿಷ್ಕಾರಗಳ ಆಧಾರಿತ ತಂತ್ರಜ್ಞಾನವು ರೈತರಿಗೆ ಲಭಿಸಬೇಕೆಂದು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳು ತಂತ್ರಜ್ಞಾನ ಆವಿಷ್ಕಾರ, ಸುಧಾರಣೆ ಮತ್ತು ತಂತ್ರಜ್ಞಾನ ಅಳವಡಿಕೆಯನ್ನು ಕೇಂದ್ರಿಕರಿಸುತ್ತವೆ. ಪ್ರಶಸ್ತಿ ವಿಜೇತ ರೈತರಿಂದ ಇತರ ರೈತರ ತರಬೇತಿ, ರೈತರ ಆದಾಯ ದುಪ್ಪಟ್ಟುಗೊಳಿಸುವುದು, ಬೀಜ ಕೇಂದ್ರ ಮತ್ತು ಹವಾಮಾನ ಸಹಿಷ್ಣು ಸಮಗ್ರ ಬೇಸಾಯ ವ್ಯವಸ್ಥೆಯ ಪ್ರಾತ್ಯಕ್ಷಿಕೆ, ಕೌಶಲ್ಯ ಅಭಿವೃದ್ಧಿ ಮುಂತಾದ ಹೊಸ ಕಾರ್ಯಕ್ರಮಗಳನ್ನು ವಿಸ್ತರಣಾ ನಿರ್ದೇಶನಾಲಯವು ಕೈಗೊಂಡಿದೆ. ವಿಸ್ತರಣಾ ನಿರ್ದೇಶನಾಲಯವು 144 ಮುಂಚೂಣಿ ಪ್ರಾತ್ಯಕ್ಷಿಕೆಗಳು, 24 ಕ್ಷೇತ್ರ ಪರೀಕ್ಷೆಗಳು, 319 ತಪಾಸಣಾ ಕ್ಷೇತ್ರ ಭೇಟಿಗಳು, 95 ಕ್ಷೇತ್ರೋತ್ಸವಗಳು ಮತ್ತು 755 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. 27 ರೇಡಿಯೋ

were admitted. The number of students on roll during the year was 4675. The University Examination Centre has conducted final theory external examinations for all the six Under Graduate degree programmes in the University covering 270 and 297 courses during I & II Semester of academic year 2021-22, respectively. During 2022-23, totally 51514 grades were notified for all the six UG degree programmes in the University.

The University also coordinates location specific, strategic and anticipatory research programmes in 13 Agricultural Research Stations situated in 10 Southern districts of the state, mainly to address issues of small and marginal farmers to improve their standard of living while ensuring food security by enhancing productivity and enhancing agricultural resources efficiency with no adverse effects.

In total, 198 research projects are in operation and a total of 29 new research projects have been sanctioned to the University during 2022-23 by various funding agencies with a total outlay of Rs. 6114.67 lakhs. During the year, the University has tested 416 new varieties / lines/chemicals/molecules for control of pests /diseases / weeds / soil analysis and agricultural equipment and generated revenue of Rs.530 lakhs. A total of 10 MoUs / MoAs / MTA have been signed with different institutions for conducting collaborative research of mutual interest. University has developed five new crop varieties {Ragi:ML 322; Little Millet:GPUL 11; Proso millet : GPUP 32; Sunflower: KBSH 85 and Jackfruit : GKVK Red Jack} and 32 new technologies were released for adoption by the farmers.

The Directorate of Extension is vested with the responsibility to carry out the extension services in 10 districts of Southern Karnataka. Extension education programmes focuses on technology assessment & refinement and facilitating adoption of technology by the farmers & extension functionaries based on research findings for accelerated agricultural growth. The Directorate of Extension has taken up new initiatives such as capacity building of farmers on profitable dairying and livestock management, petroleum conservation in agriculture, doubling farmers' income, demonstrations of climate resilient integrated farming system, seed hub, dissemination

ಭಾಷಣಗಳನ್ನು ಮತ್ತು 14 ದೂರದರ್ಶನ ಕಾರ್ಯಕ್ರಮಗಳನ್ನು ಸಹ ನೀಡಲಾಗಿದೆ/ಆಯೋಜಿಸಲಾಗಿದೆ.

ವಿಶ್ವವಿದ್ಯಾನಿಲಯವು 1055 ಸಮಾವೇಶ / ವಿಚಾರ ಸಂಕಿರಣ / ಕಾರ್ಯಾಗಾರ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಅನೇಕ ಪ್ರಾಧ್ಯಾಪಕರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹಲವಾರು ಸಮಿತಿಗಳಿಗೆ ಸದಸ್ಯರಾಗಿ ನಾಮಕರಣಗೊಂಡಿದ್ದಾರೆ. ಬೋಧಕ ಸಿಬ್ಬಂದಿ ಸುಮಾರು 58 ರೇಡಿಯೋ ಭಾಷಣ, 48 ದೂರದರ್ಶನ ಕಾರ್ಯಕ್ರಮಗಳು ಮತ್ತು 698 ತಪಾಸಣಾ ಕ್ಷೇತ್ರ ಭೇಟಿ, 189 ಕ್ಷೇತ್ರೋತ್ಸವ ಹಾಗೂ 926 ತರಬೇತಿ ಕಾರ್ಯಕ್ರಮಗಳು 43 ವೆಬಿನಾರ್ / ಕಾರ್ಯಾಗಾರಗಳು ಮತ್ತು 1761 ಇತರೆ ಚಟುವಟಿಕೆಗಳನ್ನು ಆಯೋಜಿಸಿರುತ್ತಾರೆ. ಕನ್ನಡ ಅಧ್ಯಯನ ವಿಭಾಗವು ಕೃಷಿ ಮತ್ತು ಸಂಬಂಧಿತ ವಿಷಯ ಕುರಿತ ಕನ್ನಡ ಪುಸ್ತಕಗಳ ಸಂಪಾದನೆ, ಅನುವಾದ ಹಾಗೂ ಪ್ರಕಟಣಾ ಕಾರ್ಯದ ಜವಾಬ್ದಾರಿಯನ್ನು ಹೊತ್ತಿದೆ. ಕನ್ನಡ ಅಧ್ಯಯನ ವಿಭಾಗವು ಪ್ರಸ್ತುತ ವರ್ಷದಲ್ಲಿ 22 ಪುಸ್ತಕಗಳನ್ನು ಪ್ರಕಟಿಸಿದೆ. ಸಂವಹನ ಕೇಂದ್ರವು ವಿಶ್ವವಿದ್ಯಾನಿಲಯ ಆಡಳಿತ, ಸಂಶೋಧನೆ, ಬೋಧನೆ ಮತ್ತು ವಿಸ್ತರಣಾ ಅಂಗಗಳ ಪ್ರಕಟಣೆ ಮತ್ತು ಇತರ ಮುದ್ರಣ ಕಾರ್ಯಗಳ ಸಂಯೋಜನಾ ಕೇಂದ್ರವಾಗಿದೆ. ವಿಶ್ವವಿದ್ಯಾನಿಲಯದಿಂದ ಒಟ್ಟು 1479 ಪ್ರಕಟಣೆಗಳನ್ನು ಹೊರತರಲಾಗಿದ್ದು ಅವುಗಳಲ್ಲಿ 827 ಸಂಶೋಧನಾ ಪ್ರಬಂಧಗಳು, 191 ಜನಪ್ರಿಯ ಲೇಖನಗಳು, 184 ಪುಸ್ತಕಗಳು / ಬುಲೆಟಿನ್‌ಗಳು, 181 ಕರಪತ್ರಗಳು/ಫೋಲ್ಡರ್‌ಗಳು ಹಾಗೂ 243 ಇತರ ಸಾಹಿತ್ಯವಾಗಿದೆ.

ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿ ಮತ್ತು ಬೆಂಬಲ ಸಿಬ್ಬಂದಿಯ ನೇಮಕಾತಿಯಿಂದ ನಿವೃತ್ತಿ ಹೊಂದುವವರೆಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳನ್ನು ಆಡಳಿತ ಕಚೇರಿಯ ಮುಖ್ಯಸ್ಥರಾಗಿ ಆಡಳಿತಾಧಿಕಾರಿಗಳು ನೋಡಿಕೊಳ್ಳುತ್ತಾರೆ. ವಿಶ್ವವಿದ್ಯಾನಿಲಯವು ಮಂಜೂರಾದ 55 ಪ್ರಾಧ್ಯಾಪಕರ, 144 ಸಹ ಪ್ರಾಧ್ಯಾಪಕರ ಮತ್ತು 387 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಹೊಂದಿದೆ. ಒಟ್ಟು 586 ಮಂಜೂರಾದ ಹುದ್ದೆಗಳಲ್ಲಿ, 357 ಭರ್ತಿಯಾಗಿದ್ದು 229 ಖಾಲಿ ಇವೆ. ವಿಶ್ವವಿದ್ಯಾನಿಲಯವು ಮಂಜೂರಾದ 1564 ಬೋಧಕೇತರ ಸಿಬ್ಬಂದಿಯ ಹುದ್ದೆಗಳನ್ನು ಹೊಂದಿದ್ದು ಅವುಗಳಲ್ಲಿ 538 ಭರ್ತಿಯಾಗಿವೆ ಮತ್ತು 1026 ಖಾಲಿ ಇವೆ. ವರದಿಯ ಅವಧಿಯಲ್ಲಿ, 5 ಅಧಿಕಾರಿಗಳು, 19 ಬೋಧಕ ಸಿಬ್ಬಂದಿ ಮತ್ತು 36 ಬೋಧಕೇತರ ಸಿಬ್ಬಂದಿ ನಿವೃತ್ತಿ ಹೊಂದಿದ್ದಾರೆ.

ಕರ್ನಾಟಕ ಸರ್ಕಾರವು ಯೋಜನೇತರ ಅನುದಾನದಡಿ ಪ್ರಗತಿಯಲ್ಲಿರುವ ಬದ್ಧತೆಗಳ ಮುಂದುವರಿಕೆಗೆ ನಿರ್ವಹಣಾ ಅನುದಾನ ನೀಡಿದೆ. ಚಾಲನೆಯಲ್ಲಿರುವ ಯೋಜನೆಗಳ ಮುಂದುವರಿಕೆಗೆ ಹಾಗೂ ಹೊಸ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ ಶಿಕ್ಷಣ ಕಾರ್ಯಕ್ರಮಗಳಿಗಾಗಿ ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಮಂಡಳಿಯು ಅನುದಾನವನ್ನು ನೀಡಿದೆ. ಅಖಿಲ ಭಾರತ ಸಹಯೋಜಿತ ಸಂಶೋಧನಾ ಯೋಜನೆಗಳಿಗೆ ಮತ್ತು ತಾತ್ಕಾಲಿಕ ಸಂಶೋಧನಾ ಕಾರ್ಯಕ್ರಮಗಳಿಗೆ ಸಹ ಅನುದಾನವನ್ನು

of information through district agro met units, etc. The Directorate of Extension has organised 144 Front Line Demonstrations, 24 On-farm testing's, 319 Diagnostic field visits, 95 Field days and 755 Training programmes. As many as 27 Radio talks and 14 TV programmes were also given / arranged.

The University has organized 1055 Conferences / Seminars / Workshops / Training Programmes / Winter & Summer Schools. Several Professors have been nominated as Members for various committees at State and National Level. As many as 58 radio talks, 48 TV programmes and 698 diagnostic field visits, 189 Field Days, 926 training programmes, 43 Seminar/ Workshops and 1761 other activities (as resource persons and etc.) were organized / performed by the faculty members. The Communication Centre is coordinating with the University Administration, Research, Teaching and Extension wings in respect of publications and other printing works. The Department of Kannada Studies is vested with the responsibility of translating, editing, proof reading and publication of books in Kannada pertaining to agriculture and allied subjects. During the year, 22 books on various agricultural and allied subjects in Kannada were published. In total, 1479 publications have been brought out by the University, of which 827 were research papers, 191 popular articles, 184 leaflets / folders and 243 other publications.

The University has Administrative Office headed by Administrative Officer looking after the Human Resource Developmental activities from recruitment to retirement of teaching faculty and supporting staff of the University. There are 55 Professors, 144 Associate Professors and 387 Assistant Professors sanctioned posts for the University. Out of 586 sanctioned posts, 357 are filled and 229 are vacant. The University has 1564 sanctioned supporting staff positions, of which 538 are filled and 1026 are vacant. During the period, five officers, 19 teaching faculty and 36 supporting staff have been superannuated.

The State Government provided maintenance grants under non-plan to continue the on-going commitments under establishment. Indian Council of Agricultural Research, New Delhi provided funds for the continuation of the existing schemes and to start new teaching, research and extension education programmes. Grants were also provided under All India Co-ordinated Research Schemes and Ad-hoc

ಒದಗಿಸಲಾಗಿದೆ. ಕೃಷಿಯಲ್ಲಿ ನಿರ್ದಿಷ್ಟ ಸಂಶೋಧನೆಗಳನ್ನು ಕೈಗೊಳ್ಳಲು ಭಾರತ ಸರ್ಕಾರದ ಹಲವಾರು ಇಲಾಖೆಗಳು ಸಹ ಹಣಕಾಸು ಸೌಲಭ್ಯ ಒದಗಿಸಿವೆ. ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳನ್ನು ಕೈಗೊಳ್ಳಲು ಹಲವಾರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆ/ಏಜೆನ್ಸಿಗಳು ಅನುದಾನ ಒದಗಿಸುತ್ತಿವೆ. ಬೆಳೆ ಬೇಸಾಯ, ಬೀಜೋತ್ಪಾದನೆ ಮತ್ತು ಸಸಿಮಡಿ ಚಟುವಟಿಕೆಗಳು, ವಿದ್ಯಾರ್ಥಿ ಶುಲ್ಕ ಸಂಗ್ರಹಣೆ ಮುಂತಾದವುಗಳ ಮೂಲಕ ಆಂತರಿಕ ಆದಾಯವನ್ನು ಸಹ ಗಳಿಸಲಾಗುತ್ತಿದೆ. 2022–23ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯಕ್ಕೆ ಒಟ್ಟು ಸ್ವೀಕೃತಿ ರೂ.42190.36 ಲಕ್ಷಗಳಾಗಿದ್ದು ಅದರಲ್ಲಿ ರೂ.41334.28 ಲಕ್ಷಗಳು ಖರ್ಚಾಗಿರುತ್ತದೆ.

Research programmes. Several Departments of Government of India also provided financial assistance to conduct specific research in agriculture. Grants are being provided by several National and International Organizations / Agencies to conduct research and extension programmes in the University. Revenue was also generated by utilizing the internal resources through crop cultivation, seed production & nursery activities, collection of student's fee, etc. During, 2022-23, the total receipts for the University was Rs.42190.36 lakhs out of which the expenditure was Rs.41334.28 lakhs.

ಆಸ್ತಿ ಕಚೇರಿಯು ವಿವಿಧ ಅನುದಾನದಡಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಮತ್ತು ನವೀಕರಣ ಕಾರ್ಯಗಳೆಂದರೆ, ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿದ್ಯಾರ್ಥಿನಿಯರ ವಸತಿ ನಿಲಯವನ್ನು ನಿರ್ಮಾಣ ಮಾಡುವ ಕೆಲಸ, ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಬೇಕರಿ ತರಬೇತಿ ಘಟಕವನ್ನು ನಿರ್ಮಾಣ ಮಾಡುವ ಕೆಲಸ, ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಈಜು ಕೊಳ ನಿರ್ಮಾಣ, ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಜೇನು ಸಾಕಣೆ ವಿಭಾಗಕ್ಕೆ ಜೇನು ಪರೀಕ್ಷಾ ಪ್ರಯೋಗಾಲಯ, ಗುಂಜೇವು ಕೃಷಿ ಸಂಶೋಧನಾ ಕೇಂದ್ರದಲ್ಲಿ ಅತಿಥಿ ಗೃಹವನ್ನು ನಿರ್ಮಾಣ ಮಾಡುವ ಕೆಲಸ, ಕೃಷಿ ವಿಶ್ವವಿದ್ಯಾನಿಲಯದ ಹಾಸನ ಕೃಷಿ ಕಾಲೇಜಿನಲ್ಲಿ ಆಹಾರ ಸಂಸ್ಕರಣಾ ಘಟಕದ ನಿರ್ಮಾಣ ಮಾಡುವ ಕೆಲಸ, ಕೃಷಿ ವಿಶ್ವವಿದ್ಯಾನಿಲಯದ ಚಾಮರಾಜನಗರ ಕೃಷಿ ಕಾಲೇಜಿನಲ್ಲಿ ವಸತಿ ನಿಲಯವನ್ನು ನಿರ್ಮಾಣ ಮಾಡುವ ಕೆಲಸ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಸೆಂಟರ್ ಆಫ್ ಎಕ್ಸಲೆನ್ಸ್ ಕಟ್ಟಡದ (ಮೊದಲನೇ ಮಹಡಿ) ಆಧುನೀಕರಣ ಮಾಡುವ ಕೆಲಸ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಸೆಂಟರ್ ಆಫ್ ಎಕ್ಸಲೆನ್ಸ್ ಕಟ್ಟಡಕ್ಕೆ ವಿದ್ಯುತ್ತೀಕರಣ, ಹವಾನಿಯಂತ್ರಣ ವ್ಯವಸ್ಥೆ ಮತ್ತು ಆಡಿಯೋ ವಿಡಿಯೋ ವ್ಯವಸ್ಥೆಯನ್ನು ಒದಗಿಸುವ ಕೆಲಸ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಅಸ್ತಿತ್ವದಲ್ಲಿರುವ ಮೂಲಸೌಕರ್ಯಗಳ (ಜೈವಿಕ ರಸಗೊಬ್ಬರ ಮಿಶ್ರಣ ಘಟಕದ) ನವೀಕರಣ, ಉನ್ನತೀಕರಣ ಮತ್ತು ವಿಸ್ತರಣೆ ಮಾಡುವ ಕೆಲಸ, ಕುಣಿಗಲ್ ಕೃಷಿ ಸಂಶೋಧನಾ ಕೇಂದ್ರದಲ್ಲಿರುವ ಮೇವಿನ ಗುಣಮಟ್ಟ ವಿಶ್ಲೇಷಣೆ ಮಾಡುವ ಪ್ರಯೋಗಾಲಯದ ಮೇಲೆ ಮೊದಲನೇ ಮಹಡಿ ಮತ್ತು ಎರಡನೇ ಮಹಡಿ ನಿರ್ಮಾಣ ಮಾಡುವ ಕೆಲಸ ಹಾಗೂ ಇತರೆ.

Infrastructure developed and renovation undertaken by the Estate Office under State grants includes; Construction of Girls Hostel at GKVK, Construction of Raitha Bhavan at ZARS, VC. Farm, Mandya, Construction of Bakery Training Unit at GKVK campus, Construction of swimming pool at GKVK, Establishment of Honey Testing Lab and Holistic Entrepreneurial Skilled Development Centre in Bee Keeping at Dept. of Apiculture, GKVK campus, Construction of Guest House at ARS, Gunjevu, Construction of Food Processing Unit at Agri. College, Hassan, Construction of Quarters at Agri. College, Chamarajanagara, Modernization of Centre of Excellence building (First Floor) at GKVK, Providing electrification, Air conditioning system & Audio-video systems to the Centre of Excellence building at GKVK, Renovation, Up-gradation and Extension of existing Infrastructure of Bio Fertilizer Mixing Unit at GKVK, Construction of First Floor & Second Floor to Fodder Quality Analysis Laboratory at ARS, Kunigal, and others

ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾದ ಐಸಿಎಆರ್‌ನ ರಾಷ್ಟ್ರೀಯ ಕೃಷಿ ಉನ್ನತ ಶಿಕ್ಷಣ ಯೋಜನೆಯ ಸೆಂಟರ್ ಫಾರ್ ಅಡ್ವಾನ್ಸ್ ಅಗ್ರಿಕಲ್ಚರಲ್ ಸೈನ್ಸಸ್ ಅಂಡ್ ಟೆಕ್ನಾಲಜಿ (ಸಿ.ಎ.ಎ.ಎಸ್ಟಿ) ಕಾರ್ಯಕ್ರಮದ ಆಶ್ರಯದಲ್ಲಿ ಕೇಂದ್ರ ಸಲಕರಣೆ ಸೌಲಭ್ಯ (ಸಿಐಎಫ್), ಪ್ರೊಫೆಸರ್ ಎಂ.ಡಿ. ನಂಜುಂಡಸ್ವಾಮಿ ಸಂಶೋಧನಾ ಪೀಠ, ಕೃಷಿ & ಗ್ರಾಮೀಣಾಭಿವೃದ್ಧಿ ಅಧ್ಯಯನ ಕೇಂದ್ರ (ಸಿ.ಎ.ಆರ್.ಡಿ.ಎಸ್), ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿಯ ಸಂಶೋಧನಾ ಪೀಠ ಹಾಗೂ ಇತ್ತೀಚಿಗೆ ಸ್ಥಾಪಿಸಲಾದ ಬಯೋ–ನೆಸ್ಟ್ ಅಗ್ರಿ–ಇನ್ನೋವೇಷನ್ ಸೆಂಟರ್‌ಗಳು ತಮ್ಮ ವ್ಯಾಪ್ತಿಯಲ್ಲಿ ವಿವಿಧ ಚಟುವಟಿಕೆಗಳನ್ನು ಕೈಗೊಂಡು ಗಣನೀಯ ಕೊಡುಗೆ ನೀಡಿವೆ.

The Central Instrumentation Facility (CIF) under the aegis of the Centre for Advanced Agricultural Sciences and Technology (CAAST) program of the National Agricultural Higher Education Project (NAHEP) of ICAR; Professor M.D. Nanjundaswamy Research Chair; Centre for Agriculture and Rural Development Studies (CARDS); Karnataka State Agricultural Marketing Board (KSAMB) Chair and Bio-Nest Agri Innovation Centre established at UAS-B have significantly contributed for undertaking various activities under their purview.

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

# ವಾರ್ಷಿಕ ವರದಿ
# Annual Report
## 2022-23

## University of Agricultural Sciences, Bangalore

ಅಧ್ಯಾಯ I

# 1. ವಿಶ್ವವಿದ್ಯಾನಿಲಯದ ಆಡಳಿತ

## 1.1 ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮತ್ತು ನಿಗಮನ (ಪರಿಚ್ಛೇದ 3)

ಕರ್ನಾಟಕ ಕೃಷಿ ವಿಶ್ವವಿದ್ಯಾನಿಲಯಗಳ ಅಧಿನಿಯಮ 1963ರ (1963ರ ಕರ್ನಾಟಕ ಅಧಿನಿಯಮ 22) ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳು ಈ ಅಧಿನಿಯಮದಡಿ ಸ್ಥಾಪಿತವಾಗಿದೆಯೆಂದು ಪರಿಗಣಿಸಲಾಗುವುದು ಹಾಗೂ ಅವುಗಳ ಕಾರ್ಯವ್ಯಾಪ್ತಿ ಪ್ರದೇಶವನ್ನು ಈ ಮುಂದಿನಂತೆ ನಿಗದಿಪಡಿಸಲಾಗಿದೆ – ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೇಂದ್ರ ಸ್ಥಾನವು ಬೆಂಗಳೂರಿನಲ್ಲಿದ್ದು ಅದರ ಕಾರ್ಯವ್ಯಾಪ್ತಿ ಪ್ರದೇಶವು ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು (ಗ್ರಾಮೀಣ), ಬೆಂಗಳೂರು (ನಗರ), ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಮತ್ತು ತುಮಕೂರು ಜಿಲ್ಲೆಗಳನ್ನೊಳಗೊಂಡಿದೆ (ಪರಿಚ್ಛೇದ 3ಎ).

## 1.2 ಕಾರ್ಯವ್ಯಾಪ್ತಿ ಪ್ರದೇಶ (ಪರಿಚ್ಛೇದ 4)

1) ಪ್ರತಿಯೊಂದು ವಿಶ್ವವಿದ್ಯಾನಿಲಯವು ಕೃಷಿ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ ಕೃಷಿ ಹಾಗೂ ಅರಣ್ಯ ತರಬೇತಿ ಅಥವಾ ಶಿಕ್ಷಣ ಕೇಂದ್ರಗಳು ಮತ್ತು ಸಂಶೋಧನೆ ಹಾಗೂ ಪ್ರಯೋಗ ಕೇಂದ್ರಗಳನ್ನು ಮತ್ತು ಕ್ಷೇತ್ರ ವಿಸ್ತರಣಾ ಕಾರ್ಯಕರ್ತರ ತರಬೇತಿ ಮತ್ತು ತನ್ನ ವ್ಯಾಪ್ತಿಯ ಪ್ರದೇಶದ ವಿವಿಧ ಭಾಗಗಳಲ್ಲಿ ಅವಶ್ಯಕವಿರುವಂತೆ ಅಂತಹ ಕೇಂದ್ರಗಳ ಸ್ಥಾಪನೆ, ಅಭಿವೃದ್ಧಿ ಹಾಗೂ ಕಾರ್ಯನಿರ್ವಹಣಾ ಜವಾಬ್ದಾರಿಯನ್ನು ಹೊಂದಿರುತ್ತದೆ

2) ವಿಶ್ವವಿದ್ಯಾನಿಲಯ ಅಥವಾ ಇತರೆ ಸಂಸ್ಥೆಗಳ ನಿರ್ವಹಣೆಯಡಿಯಿರುವ ಎಲ್ಲಾ ಕಾಲೇಜುಗಳು, ಸಂಶೋಧನೆ ಮತ್ತು ಪ್ರಾಯೋಗಿಕ ಕೇಂದ್ರಗಳು, ಕೃಷಿ ವಿಜ್ಞಾನ ಕೇಂದ್ರಗಳು, ವಿಸ್ತರಣಾ ಶಿಕ್ಷಣ ಮತ್ತು ತರಬೇತಿ ಕೇಂದ್ರಗಳು ತಾವಿರುವ ಪ್ರತಿಯೊಂದು ವಿಶ್ವವಿದ್ಯಾನಿಲಯದ ವ್ಯಾಪ್ತಿ ಹಾಗೂ ಅಧಿಕಾರದಡಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಆಯಾ ವಿಶ್ವವಿದ್ಯಾನಿಲಯದ ಘಟಕಗಳಾಗಿರುತ್ತವೆ ಮತ್ತು ಆ ವಿಶ್ವವಿದ್ಯಾನಿಲಯದ ನಿರ್ವಹಣೆ ಹಾಗೂ ನಿಯಂತ್ರಣದಲ್ಲಿರುತ್ತವೆ. ವಿಶ್ವವಿದ್ಯಾನಿಲಯವು ತನ್ನ ಅಂಗ ಸಂಸ್ಥೆ ಮಹಾವಿದ್ಯಾಲಯವೆಂದು ಪರಿಗಣಿಸದ ಹೊರತು ಯಾವುದೇ ಘಟಕವನ್ನು ಅಂಗ ಸಂಸ್ಥೆ ಘಟಕವೆಂದು ಪರಿಗಣಿಸಲಾಗುವುದಿಲ್ಲ.

3) ಪ್ರತಿಯೊಂದು ವಿಶ್ವವಿದ್ಯಾನಿಲಯವು ಶೈಕ್ಷಣಿಕ ಕಾರ್ಯಕ್ರಮಗಳ ಮತ್ತು ಬಹುಶಿಸ್ತೀಯ ವಿಧಾನದ ಸಂಶೋಧನೆ ಪ್ರಾಯೋಜನೆಗಳ ಕುರಿತಂತೆ ದೇಶ ವಿದೇಶಗಳ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಹಯೋಗ ಹೊಂದಬಹುದಾಗಿದೆ

4) ವಿಶ್ವವಿದ್ಯಾನಿಲಯವು ತನ್ನ ವ್ಯಾಪ್ತಿಯ ಪ್ರದೇಶದಲ್ಲಿ ಮತ್ತು ವಿದೇಶಗಳಲ್ಲಿ ಅವಶ್ಯಕವಿದ್ದಂತೆ ತನ್ನ ಅಂಗಸಂಸ್ಥೆಗಳನ್ನು ಸ್ಥಾಪಿಸುವ, ಅಭಿವೃದ್ಧಿಪಡಿಸುವ ಹಾಗೂ ಅದರ ಕಾರ್ಯನಿರ್ವಹಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಬಹುದಾಗಿದೆ

## 1.3 ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳು (ಪರಿಚ್ಛೇದ 5)

ಪ್ರತಿಯೊಂದು ವಿಶ್ವವಿದ್ಯಾನಿಲಯವನ್ನು ಈ ಮುಂದಿನ ಧ್ಯೇಯೋದ್ದೇಶಗಳೊಂದಿಗೆ ಸ್ಥಾಪಿಸಿ ನಿಗಮನಗೊಳಿಸಲಾಗಿದೆಯೆಂದು ಪರಿಗಣಿಸಲಾಗಿದೆ: (ಅ) ಪರಿಚ್ಛೇದ 2ರ ಉಪಪರಿಚ್ಛೇದ (3) ರಲ್ಲಿ ನಿರ್ದಿಷ್ಟಪಡಿಸಲಾದ ವಿವಿಧ ಅಧ್ಯಯನ ಶಾಖೆಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಶಿಕ್ಷಣ ಒದಗಿಸುವ ವ್ಯವಸ್ಥೆ ಮಾಡುವುದು (ಅ) ವಿಶೇಷವಾಗಿ ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳಲ್ಲಿ ಕಲಿಕೆ ಮತ್ತು ಸಂಶೋಧನೆಯ ಅಭಿವೃದ್ಧಿಗೆ ಒತ್ತು ನೀಡುವುದು (ಇ) ರಾಜ್ಯದ ವಿಶೇಷವಾಗಿ ಗ್ರಾಮೀಣ ಜನತೆಗೆ ಅಂತಹ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕುರಿತಂತೆ ವಿಸ್ತರಣಾ ಶಿಕ್ಷಣ ಒದಗಿಸುವುದು (ಈ) ಕಾಲಕಾಲಕ್ಕೆ ರಾಜ್ಯ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸುವ ಇತರ ಕಾರ್ಯಗಳನ್ನು ಕೈಗೊಳ್ಳುವುದು ಮತ್ತು (ಉ) ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಶೈಕ್ಷಣಿಕ, ಕೈಗಾರಿಕೆ, ಸಂಶೋಧನೆ ಮತ್ತು ಇತರ ಸಂಸ್ಥೆಗಳಲ್ಲಿ ಪಾಲುಗಾರಿಕೆ ಮತ್ತು ಸಂಬಂಧಗಳನ್ನು ಪ್ರೋತ್ಸಾಹಿಸುವುದು.

## 1.4 ವಿಶ್ವವಿದ್ಯಾನಿಲಯದ ಪ್ರಾಧಿಕಾರ (ಪರಿಚ್ಛೇದ 11)

ವಿಶ್ವವಿದ್ಯಾನಿಲಯವು ಈ ಕೆಳಗಿನ ಪ್ರಾಧಿಕಾರವನ್ನು ಹೊಂದಿರುತ್ತದೆ:

(1) ಆಡಳಿತ ನಿರ್ವಹಣಾ ಮಂಡಳಿ

(2) ಶೈಕ್ಷಣಿಕ ಪರಿಷತ್

(3) ಸಂಶೋಧನಾ ಪರಿಷತ್

(4) ವಿಸ್ತರಣಾ ಶಿಕ್ಷಣ ಪರಿಷತ್

(5) ಸ್ನಾತಕೋತ್ತರ ಅಧ್ಯಯನ ಮತ್ತು ಅದರ ಅಧ್ಯಯನ ಮಂಡಳಿಯನ್ನೊಳಗೊಂಡಂತೆ ಬೋಧಕ ಸಿಬ್ಬಂದಿ ಮತ್ತು

(6) ವಿಶ್ವವಿದ್ಯಾನಿಲಯದ ಪ್ರಾಧಿಕಾರದ ಪರಿನಿಯಮಗಳು ಘೋಷಿಸುವಂತಹ ಇತರ ಅಂತಹ ವಿಶ್ವವಿದ್ಯಾನಿಲಯದ ನಿಕಾಯಗಳು

Chapter I

# 1. University Administration

### 1.1 Establishment and Incorporation of the Universities (Sec.3)

The Universities established under Section 3 of the Karnataka Universities of Agricultural Sciences Act, 1963, (Karnataka Act 22 of 1963) shall be deemed to have been established under this Act with their territorial jurisdictions as herein after provided. The University of Agricultural Sciences, Bangalore having head quarter at Bengaluru functions with territorial jurisdiction extending over the districts of Kolar, Chikkaballapur, Bengaluru (Rural), Bengaluru (Urban), Ramanagara, Mandya, Tumkuru, Mysuru, Chamarajanagara and Hassan (Sec.3a).

### 1.2 Jurisdiction (Sec.4)

1) Each University shall be responsible for the maintenance of Agriculture, Animal Husbandry, Fishery, Sericulture, Forestry Training or Educational Centres, Research & Experimental Stations, Training of field extension workers and for the Establishment, Development & Operation of such centres as may be required in various parts within its territorial jurisdiction

2) All Colleges, Research and Experimental Stations, KVKs and Extension Education Units and other Training Centres under the management of the University or other institutions, which are under the jurisdiction and authority of each University, shall be constituent units of that University and under the management and control of the University. No unit shall be recognized as affiliated unit unless otherwise recognized as affiliated college by the University.

3) Each University may have collaboration of academic programmes and for research projects having multi-disciplinary approach and academic programmes with other Universities or reputed institutes in India and abroad

4) The University may assume responsibility for establishment, development and operation of its constituent bodies in the territorial jurisdiction and abroad as may be required

### 1.3 Objectives of the University (Sec.5)

Each University shall be deemed to have been established and incorporated for the following purposes, namely:- (a) Making provision for imparting education towards development of quality human resource in different branches of study specified in sub-section (3) of section 2; (b) Furthering the advancement of learning and conducting of research, particularly in agriculture and other allied sciences; (c) Undertaking the extension education of such science and technologies, specially for the rural people of the State; (d) Such other purposes as the State Government may by notification in the official Gazette specify from time to time and (e) Promoting partnership and linkages with National and International educational, industries, research and other institutions.

### 1.4 Authorities of the University (Sec.11)

The following shall be the authorities of the University.;

(1) Board of Management

(2) Academic Council

(3) Research Council

(4) Extension Education Council

(5) Faculties including post graduate studies and their Board of Studies and

(6) Such other Bodies of University as may be declared by the Statutes to be authorities of the University

## 1.5 ಆಡಳಿತ ನಿರ್ವಹಣಾ ಮಂಡಳಿ ಮತ್ತು ಅದರ ಸಂರಚನೆ (ಪರಿಚ್ಛೇದ 11)

{ದಿನಾಂಕ: 9-9-2014ರ ಕರ್ನಾಟಕ ಅಧಿನಿಯಮ 37ರ ತಿದ್ದುಪಡಿ ಮಾಡಿದ ಅಧಿನಿಯಮ 12(2)}

(1) ಕುಲಾಧಿಪತಿಗಳು ಆದಷ್ಟು ಬೇಗ ಆಡಳಿತ ನಿರ್ವಹಣಾ ಮಂಡಳಿಯನ್ನು ರಚಿಸಬೇಕು

(2) ಆಡಳಿತ ನಿರ್ವಹಣಾ ಮಂಡಳಿಯು ಈ ಮುಂದಿನವರನ್ನು ಹೊಂದಿರಬೇಕು:

**ಆಡಳಿತ ನಿರ್ವಹಣಾ ಮಂಡಳಿ 31-3-2023ರಂತೆ**

| | | | |
|---|---|---|---|
| i. | ವಿಶ್ವವಿದ್ಯಾಲಯದ ಕುಲಪತಿಯವರು | ಅಧ್ಯಕ್ಷರು | ಡಾ. ಎಸ್. ರಾಜೇಂದ್ರ ಪ್ರಸಾದ್ (17.09.2018 ರಿಂದ 17.09.2022 ವರೆಗೆ)<br>ಡಾ. ಕೆ.ಸಿ. ನಾರಾಯಣಸ್ವಾಮಿ (17.09.2022 ರಿಂದ 28.10.2022 ವರೆಗೆ)<br>ಡಾ. ಎಸ್.ವಿ. ಸುರೇಶ (28.10.2022 ರಿಂದ) |
| ii. | ಕೃಷಿ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಅಥವಾ ಅವರಿಂದ ನಾಮ ನಿರ್ದೇಶಿತರಾದ ಜಂಟಿ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ವ್ಯಕ್ತಿ | ಸದಸ್ಯರು | ಶ್ರೀ ಎಸ್.ಆರ್. ಉಮಾಶಂಕರ್, ಭಾಆಸೇ (01.11.2021 ರಿಂದ 19.04.2022 ವರೆಗೆ)<br>ಶ್ರೀ ಶಿವಯೋಗಿ ಸಿ. ಕಳಸದ್, ಭಾಆಸೇ (19.04.2022 ರಿಂದ) |
| iii. | ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಅಥವಾ ಅವರಿಂದ ನಾಮನಿರ್ದೇಶಿತರಾದ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ವ್ಯಕ್ತಿ | ಸದಸ್ಯರು | ಶ್ರೀ ಐ.ಎಸ್.ಎನ್. ಪ್ರಸಾದ್, ಭಾಆಸೇ (01-04-2020 ರಿಂದ) |
| iv. | ತೋಟಗಾರಿಕೆ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಅಥವಾ ಅವರಿಂದ ನಾಮನಿರ್ದೇಶಿತರಾದ ಜಂಟಿ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ವ್ಯಕ್ತಿ | ಸದಸ್ಯರು | ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ, ಭಾಆಸೇ (01.04.2020 ರಿಂದ) |
| v. | ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯಲ್ಲಿನ ಮೂವರು ಪ್ರಗತಿಪರ ರೈತರು, ಅವರಲ್ಲಿ ಕನಿಷ್ಠ ಒಬ್ಬರು ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಯಾಗಿರತಕ್ಕದ್ದು | ಸದಸ್ಯರು | ಶ್ರೀ ದಯಾನಂದ, ಓ.ಎಸ್.<br>ಶ್ರೀ ಸುರೇಶ, ಎಂ.<br>ಶ್ರೀ ಶ್ರೀರಾಮ, ಆರ್.<br>(09.07.2020 ರಿಂದ) |
| vi. | ಸುತ್ತು ಸರದಿಯ ಆಧಾರದ ಮೇಲೆ, ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿದ ಕರ್ನಾಟಕ ರಾಜ್ಯ ವಿಧಾನ ಸಭೆಯ ಮೂವರು ಸದಸ್ಯರು ಅಥವಾ ಸಭಾಪತಿಯವರು ನಾಮನಿರ್ದೇಶನ ಮಾಡಿದ ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಒಬ್ಬರು ಸದಸ್ಯರು | ಸದಸ್ಯರು | ಶ್ರೀ ಎಂ. ಕೃಷ್ಣಪ್ಪ, ಮಾನ್ಯ ವಿಧಾನಸಭಾ ಸದಸ್ಯರು (01.09.2020 ರಿಂದ) |
| vii. | ಕುಲಾಧಿಪತಿಯವರು ನಾಮನಿರ್ದೇಶನ ಮಾಡುವ ಕೃಷಿ ವಲಯದಲ್ಲಿನ ಒಬ್ಬರು ಖ್ಯಾತ ಶಿಕ್ಷಣ ತಜ್ಞರು ಅಥವಾ ತಜ್ಞರು | ಸದಸ್ಯರು | ಡಾ. ರಾಮಾಂಜಿನಿ ಗೌಡ, ಪಿ.ಹೆಚ್. (06.05.2020 ರಿಂದ) |
| viii. | ಕುಲಾಧಿಪತಿಯವರು ನಾಮನಿರ್ದೇಶನ ಮಾಡುವ ಒಬ್ಬರು ಕೃಷಿ-ಕೈಗಾರಿಕೋದ್ಯಮಿ ಅಥವಾ ಮಹಿಳಾ ಸಮಾಜ ಸೇವಕಿ | ಸದಸ್ಯರು | ಶ್ರೀ ಅರವಿಂದ್, ಟಿ.ಎಂ. (06.05.2020 ರಿಂದ) |
| ix. | ಮಹಾನಿರ್ದೇಶಕರು ನಾಮನಿರ್ದೇಶನ ಮಾಡುವ ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನಿಂದ ಒಬ್ಬರು ಪ್ರತಿನಿಧಿ | ಸದಸ್ಯರು | ಡಾ. ಪಿ.ಎಸ್. ಪಾಂಡೆ, ಎ.ಡಿ.ಜಿ (ಇಪಿಹೆಚ್‌ಎಸ್.) (01.06.2016 ರಿಂದ 04.09.2022)<br>ಡಾ. ರಾಘವೇಂದ್ರ ಭಟ್ಟ, ನಿರ್ದೇಶಕರು, ರಾಪಪೊಶವಿಸಂಸ್ಥೆ. (26.10.2022 ರಿಂದ) |
| x. | ಎರಡು ವರ್ಷದ ಅವಧಿಗೆ ಸುತ್ತು ಸರದಿಯ ಮೂಲಕ ಕುಲಪತಿ-ಯವರು ನಾಮನಿರ್ದೇಶನ ಮಾಡುವ ಒಬ್ಬರು ಡೀನ್ | ಸದಸ್ಯರು | ನಾಮ ನಿರ್ದೇಶನ ಖಾಲಿ ಇರುತ್ತದೆ |
| xi. | ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ | ಸದಸ್ಯ - ಕಾರ್ಯದರ್ಶಿಗಳು | ಡಾ. ಬಸವೇಗೌಡ (01.09.2021 ರಿಂದ) |

### 1.5 The Board of Management and its Constitution (Sec.11)

{Amended Section 12(2) vide Karnataka Act 37 of 2014 dated 9.9.2014)}

(1) The Chancellor shall, as soon as may constitute the Board of Management

(2) The Board of Management shall consist of the following:

**Board of Management as on 31.03.2023**

| | | | |
|---|---|---|---|
| i. | The Vice-Chancellor of the University | Chairman | Dr. S. Rajendra Prasad (from 17.09.2018 to 17.09.2022)<br>Dr. K.C. Narayanaswamy (from 17.09.2022 to 28.10.2022)<br>Dr. S.V. Suresha (from 28.10.2022 onwards) |
| ii. | The Principal Secretary or Secretary to Government, Agriculture Department or their nominee not below the rank of Joint Secretary | Member | Shri S.R. Umashankar, IAS (from 01.11.2021 to 19.04.2022)<br>Shri Shivayogi C Kalasad, IAS (from 19.04.2022 onwards) |
| iii. | The Principal Secretary or Secretary to Government, Finance Department or their nominee not below the rank of Deputy Secretary | Member | Shri I.S.N. Prasad, IAS (from 01.04.2020 onwards) |
In total, 198 research projects are in operation, of which 30 are All India Coordinated Research Projects, 5-Voluntary Centre's, 1-Project Coordinating Unit on small millets,1-Network unit on Agricultural Acarology, 15-RKVY projects, 5-Emeritus Scientists, 9-ICAR Ad-hoc projects; 67-Government of India Projects (DST/DBT); 29-Government of Karnataka Projects;36-projects funded by other agencies and 38-Research projects (UAS Sponsored: 23- Projects on Varietal Development and Value-addition; 8-Farmer Centric & 7-Climate Smart Agriculture) sponsored by the University to tackle the problems of the farmers in the State in general.

### New Research Projects

A total of 28 new research projects (AICRP Voluntary centre: 1, Emeritius Scientist: 1, RKVY: 3, ICAR Ad-hoc project: 5, Government of India:7, Government of Karnataka:2 and Other funding agencies: 9) have been sanctioned to the University during 2022-23 by various funding agencies with a total outlay of

ಕೋಷ್ಟಕ 33 : 2022–23ನೇ ಸಾಲಿನಲ್ಲಿ ಅನುದಾನ ಹೊಂದಿದ ಸಂಶೋಧನಾ ಪ್ರಾಯೋಜನೆಗಳು
**Table 33 : Abstract of projects sanctioned during 2022-23**

| ಕ್ರ.ಸಂ./ Sl. No | ವಿವರಗಳು / Particulars | ಪ್ರಾಯೋಜನೆಗಳ ಸಂಖ್ಯೆ / Project No. | ಮೊತ್ತ ಲಕ್ಷ (ರೂ.ಗಳಲ್ಲಿ) / Amount (lakhs) |
|---|---|---|---|
| 1. | ಅಖಿಲ ಭಾರತ ಸಹಯೋಜಿತ ಸಂಶೋಧನಾ ಪ್ರಾಯೋಜನೆ<br>All India coordinated Research Project | 1 | - |
| 2. | ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಗೌರವಾನ್ವಿತ ವಿಜ್ಞಾನಿಗಳ ಪ್ರಾಯೋಜನೆ<br>ICAR Emeritus Scientists Projects | 1 | 24.00 |
| 3. | ರಾ.ಕೃ.ವಿ.ಯೋ. ಪ್ರಾಯೋಜನೆಗಳು<br>RKVY Projects | 3 | 143.00 |
| 4. | ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ತಾತ್ಪೂರಿತ ಪ್ರಾಯೋಜನೆಗಳು<br>ICAR *Ad-hoc* Projects | 5 | 79.54 |
| 5. | ಭಾರತ ಸರ್ಕಾರದ ಪ್ರಾಯೋಜನೆಗಳು (ಡಿ.ಎಸ್.ಟಿ./ ಡಿ.ಬಿ.ಟಿ)<br>Government of India (DST / DBT) | 7 | 535.78 |
| 6. | ಕರ್ನಾಟಕ ಸರ್ಕಾರದ ಪ್ರಾಯೋಜನೆಗಳು<br>Government of Karnataka | 2 | 4660.62 |
| 7. | ಇತರೆ ಅನುದಾನ ಸಂಸ್ಥೆಗಳು<br>Other Funding Agencies | 9 | 671.73 |
| | **ಒಟ್ಟು ಅನುದಾನ ಸಂಸ್ಥೆಗಳಿಂದ / External Funding Agencies** | 28 | **6114.67** |
| 8. | ಕೃ.ವಿ.ವಿ. ಅನುದಾನಿತ : ತಳಿ/ತಾಂತ್ರಿಕತೆ ಅಭಿವೃದ್ಧಿ ಮತ್ತು ಮೌಲ್ಯವರ್ಧನೆ<br>UAS Sponsored: Varietal Development | 11 | 53.85 |
| 9. | ಕೃ.ವಿ.ವಿ. ಅನುದಾನಿತ : ರೈತ ಕೇಂದ್ರಿತ ಪ್ರಾಯೋಜನೆಗಳು<br>UAS Sponsored: Farmer Centric | 6 | 12.28 |
| | **Total** | **17** | **66.13** |

ಪ್ರಾಯೋಜನೆಗಳು; 9 ಇತರೆ ಏಜೆನ್ಸಿಗಳ ಅನುದಾನದ ಪ್ರಾಯೋಜನೆಗಳು] ಅದರ ಮೊತ್ತ ರೂ. 6114.67 ಲಕ್ಷಗಳು. ಇದರ ಜೊತೆಗೆ ಕೃ.ವಿ.ವಿ.ಯು ಸ್ಥಾನಿಕ ಸಮಸ್ಯೆಗಳ ಕುರಿತ 17 ಸಂಶೋಧನಾ ಪ್ರಾಯೋಜನೆಗಳಿಗೆ (11 ತಳಿ/ ತಾಂತ್ರಿಕತೆ ಅಭಿವೃದ್ಧಿ ಮತ್ತು ಮೌಲ್ಯವರ್ಧನೆ ಪ್ರಾಯೋಜನೆಗಳು ಮತ್ತು 6 ರೈತ ಕೇಂದ್ರಿತ ಪ್ರಾಯೋಜನೆಗಳು) ಅನುದಾನವನ್ನು ನೀಡಿದೆ (ಅದರ ಮೊತ್ತ ರೂ. 66.13 ಲಕ್ಷಗಳು). ವಿವರಗಳನ್ನು ಅನುಬಂಧ IIರಲ್ಲಿ ನೀಡಲಾಗಿದೆ.

### 3.3 ಇತರೆ ಸಂಸ್ಥೆಗಳ ಜೊತೆ ಮಾಡಿಕೊಂಡ ಒಡಂಬಡಿಕೆಗಳು / ಒಪ್ಪಂದಗಳು

ಪರಸ್ಪರ ಆಸಕಿಯ್ತಿಂದ ಸಹಯೋಜಿತ ಸಂಶೋಧನಾ/ ವಾಣಿಜ್ಯೀಕರಣ ಕಾರ್ಯಕ್ರಮಗಳನ್ನು ಕೈಗೊಳ್ಳಲು ವಿವಿಧ ಸಂಸ್ಥೆಗಳೊಂದಿಗೆ ಒಟ್ಟು 10 ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ.

### 3.4 ಪರೀಕ್ಷಿಸಿದ ಹೊಸ ರಾಸಾಯನಿಕಗಳು/ತಳಿಗಳು/ಅಣುಗಳು

ವಿಶ್ವವಿದ್ಯಾನಿಲಯವು 416 ಹೊಸ ತಳಿಗಳು/ ಸಾಲುಗಳು/ ರಾಸಾಯನಿಕಗಳು / ಅಣುಗಳನ್ನು ಪೀಡೆ / ರೋಗ / ಕಳೆ / ನಿಯಂತ್ರಣಕ್ಕಾಗಿ / ಮಣ್ಣು ವಿಶ್ಲೇಷಣೆಗಾಗಿ ಹಾಗೂ ಕೃಷಿ ಉಪಕರಣಗಳನ್ನು ಪರೀಕ್ಷಿಸಿದ್ದು ಅವುಗಳಿಂದ ಒಟ್ಟು ರೂ. 530 ಲಕ್ಷ ಆದಾಯವನ್ನು ಗಳಿಸಿದೆ.

Rs. 6114.67 lakhs. University has sponsored 17 Research Projects [Varietal development and value addition-11 and Farmer Centric-6] based on local problems with an outlay of Rs. 66.13 lakhs. The details are presented in Annexure II.

### 3.3 MoUs Signed with other Institutions

A total of 10 MoUs / MoAs / MTA were signed with different institutions for conducting collaborative research of mutual interest

### 3.4 New Chemicals/Varieties/Molecules Tested

The University has undertaken the testing of 416 new varieties /lines/ chemicals/molecules for control of pests /diseases / weeds / soil analysis and agricultural equipment and generated revenue of Rs. 530 lakhs.

### 3.5 ಹೊಸ ಸಂಶೋಧನೆಗೆ ಹಕ್ಕು ಪತ್ರ

2022–23ನೇ ಸಾಲಿನಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನೆಗೆ 3 ಹೊಸ ಹಕ್ಕು ಪತ್ರಗಳು ದೊರೆತಿರುತ್ತದೆ.

### 3.5 Patent for Invention

Three patents has been granted to UAS, Bangalore during the year 2022-23

| ಹೊಸ ಸಂಶೋಧನೆಯ ಶೀರ್ಷಿಕೆ / Title of invention | ಹಕ್ಕುಪತ್ರ ಸಂಖ್ಯೆ/ Patent no. | ಮಂಜೂರಾದ ದಿನಾಂಕ/ Date of grant |
|---|---|---|
| ಟೊಮೆಟೊ ಬ್ರೆಡ್ ತಯಾರಿಸುವ ವಿಧಾನ<br>A process for the preparation of Tomato (*Solanum Lycopersicum*) bread and thereof | ಭಾರತೀಯ ಪೇಟೆಂಟ್<br>Indian Patent<br>396430 | 9.5.2022 |
| ಸಬ್–ಬೇರಿಕ್ ಶೇಖರಣಾ ವ್ಯವಸ್ಥೆ<br>Sub-baric storage system | ಭಾರತೀಯ ಪೇಟೆಂಟ್<br>Indian Patent<br>401836 | 22.7.2022 |
| ಕ್ಷಿಪ್ರ ಮತ್ತು ನಿಖರವಾದ ಪಾಯಿಂಟ್–ಆಫ್–ಕೇರ್ ವರ್ಣಮಾಪಕ ಆಧಾರಿತ ಪತ್ತೆಹಚ್ಚುವ ಮಾಪನ<br>Rapid and accurate point -of -care lamp colorimetric based diagnostic dipstick | ಭಾರತೀಯ ಪೇಟೆಂಟ್<br>Indian Patent<br>401825 | 22.7.2022 |

### 3.6 ಪ್ರಮುಖ ಸಂಶೋಧನೆಗಳು

**3.6.1** : ಅಕ್ಕಿಯಲ್ಲಿ ನೀರಿನ ಬಳಕೆಯ ದಕ್ಷತೆಯ ಹೆಚ್ಚಿಸುವ ಶಾರೀರಿಕ ಲಕ್ಷಣಗಳನ್ನು ನಿಯಂತ್ರಿಸುವ ವಂಶವಾಹಿಗಳ ಆವಿಷ್ಕಾರ: ಭತ್ತದಲ್ಲಿ ನೀರಿನ ಬಳಕೆಯ ದಕ್ಷತೆಗೆ ಕಾರಣವಾದ ವಂಶವಾಹಿಗಳನ್ನು ಗುರುತಿಸಲು ಸ್ವಯಂಚಾಲಿತ ಮಿನಿ–ಲೈಸಿಮೀಟರ್ ಮತ್ತು ಇಮೇಜಿಂಗ್ ತಂತ್ರಜ್ಞಾನಗಳನ್ನು ಬಳಸಲಾಯಿತು. OsRLK5, OsHXK4, OsGSTU12 ಮತ್ತು OsYUCCA4 ಎಂಬ ನಾಲ್ಕು ವಂಶವಾಹಿಗಳನ್ನು ಗುರುತಿಸಲಾಗಿದ್ದು ಆಣ್ವಿಕ ತಳಿ ಅಭಿವೃದ್ಧಿ ಅಥವಾ ವಂಶವಾಹಿ ಪುನರ್ವಿನ್ಯಾಸನ ತಂತ್ರಜ್ಞಾನಗಳ ಮೂಲಕ ಭತ್ತದಲ್ಲಿ ನೀರಿನ ಬಳಕೆಯ ದಕ್ಷತೆಯನ್ನು ಸುಧಾರಿಸಲು ಗುರುತಿಸಿರುವ ವಂಶವಾಹಿಗಳನ್ನು ಬಳಸಬಹುದು.

**3.6.2** : ಮೆಕ್ಕೆ ಜೋಳದ ಟರ್ಸಿಕಂ ಎಲೆ ಅಂಗಮಾರಿ ರೋಗ ನಿಯಂತ್ರಣಕ್ಕೆ ಬಹು ವಂಶವಾಹಿ ವಿಧಾನ: ಗ್ಲುಕನೇಸ್, RACK1 ಜೀನ್ (ಮೆಕ್ಕೆಜೋಳ) ಮತ್ತು ಚಿಟಿನೇಸ್ (ಆಗಲಕಾಯಿ) ಎಂಬ ಮೂರು ಶಿಲೀಂಧ್ರನಿರೋಧಕ ವಂಶವಾಹಿಗಳನ್ನು ಪ್ರತ್ಯೇಕಿಸಿ, ಕ್ಲೋನಿಂಗ್ ಮತ್ತು ರೂಪಾಂತರ ವಾಹಕಗಳಾಗಿಸಿ ಅನುಕ್ರಮವಾಗಿ ಜೋಡಿಸಲಾಗಿದೆ. ಗೇಟ್ವೇ ಕ್ಲೋನಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡು ಈ 3 ಶಿಲೀಂದ್ರನಿರೋಧಕ ವಂಶವಾಹಿಗಳನ್ನು ಸೇರಿಸಿ ಬಹುವಂಶ ವಾಹಿಯ ರಚನೆಯನ್ನು ಯಶಸ್ವಿಯಾಗಿ ಅಭಿವೃದ್ಧಿಪಡಿಸಲಾಯಿತು ಹಾಗೂ ಈ ಬಹುವಂಶವಾಹಿಯ ರಚನೆಯನ್ನು ಇನ್–ಪ್ಲಾಂಟಾ ರೂಪಾಂತರ ವಿಧಾನದ ಮುಖೇನ ಮೆಕ್ಕೆಜೋಳದ ವಂಶವಾಹಿಗೆ ವರ್ಗಾಯಿಸಲಾಯಿತು. ಚಿಟಿನೇಸ್ ಸಸಾರಜನಕದ ಅಂಶ (~44.0 KDa), RACK1 ಸಸಾರಜನಕದ ಅಂಶ (~37 KDa) ಮತ್ತು ಗ್ಲುಕನೇಸ್ ಸಸಾರಜನಕದ ಅಂಶ (~38 KDa) ಗಳ ತೋರ್ಪಡಿಕೆಯನ್ನು SDS-PAGE ವಿಶ್ಲೇಷಣೆಯಿಂದ ದೃಢೀಕರಿಸಲ್ಪಟ್ಟಿದೆ. ವರ್ಗಾಯಿಸಲಾದ ಮೆಕ್ಕೆಜೋಳ ದಲ್ಲಿ ಟರ್ಸಿಕಂ ಎಲೆ ಅಂಗಮಾರಿ ರೋಗಕಾರಕವಾದ ಶಿಲೀಂಧ್ರದ ವಿರುದ್ಧ ಮೂರು ಶಿಲೀಂದ್ರನಿರೋಧಕ ವಂಶವಾಹಿಗಳ ಪರಿಣಾಮಕಾರಿತ್ವದ ಆರಂಭಿಕ ಮೌಲ್ಯಮಾಪನವನ್ನು

### 3.6 Break-through Research

**3.6.1** : Discovery of genes regulating constituent physiological traits of Water Use Efficiency in rice: Automated mini-lysimeter and imaging technologies were used to identify the genes responsible for water use efficiency in paddy. Four genes *viz.,* OsRLK5, OsHXK4, OsGSTU12 and OsYUCCA4 were identified and they can be used to improve WUE in paddy through molecular breeding and/or genetic engineering.

**3.6.2** : Multigene approach for the control of fungal disease Turcicum Leaf Blight of Maize (Zea mays): Three antifungal genes Glucanase, RACK1 gene (Maize) and Chitinase (Bitter guard) were isolated, cloned into cloning and transformation vectors and sequenced. Multigene construct with these 3 antifungal genes successfully developed using gateway cloning technology were transformed into maize using in planta transformation method. The expression of chitinase protein of ~44.0 KDa, RACK1 protein of ~37 KDa and glucanase protein of ~38 KDa was confirmed by the SDS-PAGE analysis. Initial in-vitro evaluation of efficacy of three antifungal proteins against turcicum leaf blight fungus was done. The highest percentage of inhibition of fungus growth was recorded in multigene construct (>70 %) proteins followed by individual antifungal protein inhibition of

ಮಾಡಲಾಯಿತು. ಬಹುವಂಶವಾಹಿಯ ರಚನೆಯಲ್ಲಿ ಶಿಲೀಂಧ್ರಗಳ ಬೆಳವಣಿಗೆಯ ವಿರುದ್ಧವಾಗಿ ಹೆಚ್ಚಿನ ಶೇಕಡಾವಾರು ಪ್ರತಿಬಂಧಕವನ್ನು (>70 %) ಗಮನಿಸಲಾಯಿತು ಹಾಗು ಈ 3 ಶಿಲೀಂದ್ರನಿರೋಧಕ ವಂಶವಾಹಿಗಳನ್ನು ವೈಯಕ್ತಿಕವಾಗಿ ಗಮಿನಿಸಿದಾಗ RACK1 ಅಲ್ಲಿ ಶೇ. 41.66, ಗ್ಲುಕನೇಸ್ ಅಲ್ಲಿ ಶೇ. 44.4 ಮತ್ತು ಚಿಟಿನೇಸ್ ಅಲ್ಲಿ ಶೇ. 54.44ರಷ್ಟು ಶೇಕಡಾವಾರು ಪ್ರತಿಬಂಧಕವನ್ನು ಕಾಣಬಹುದಾಗಿದೆ.

fungus viz., RACK 1(41.66 %), Glucanase (44.4 %) and Chitinase (54.44 %).

## 3.7 ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದ ಹೊಸ ತಂತ್ರಜ್ಞಾನಗಳು : 5

### 3.7.1 ಬಿಡುಗಡೆಗೆ ಶಿಫಾರಸ್ಸು ಮಾಡಿದ ತಳಿಗಳು : 5

ಒಟ್ಟು ಐದು ತಳಿಗಳನ್ನು 2022-23 ನೇ ಸಾಲಿನಲ್ಲಿ ಬಿಡುಗಡೆಗೆ ಶಿಫಾರಸ್ಸು ಮಾಡಲಾಗಿದೆ ಅವುಗಳ ವಿವರಗಳನ್ನು ಮುಂದೆ ನೀಡಲಾಗಿದೆ:

## 3.7 New Technologies Developed and Released

### 3.7.1 Varieties Recommended for Release: 5

Five varieties have been recommended for release during 2022-23. The details of the same are given below.

**ಕೋಷ್ಟಕ 34 : 2022-23ನೇ ಸಾಲಿನಲ್ಲಿ ಬಿಡುಗಡೆಗೆ ಶಿಫಾರಸ್ಸು ಮಾಡಿದ ತಳಿಗಳ ವಿವರ**

**Table 34 : Varieties / hybrids recommended for release during 2022-23**

| ಬೆಳೆಗಳು / Crops | ಸಂಖ್ಯೆ/No. | ತಳಿ/Variety/ ಸಂಕರಣ/Hybrid | ಶಿಫಾರಸ್ಸು ಮಾಡಿ ವಲಯ/ Zone Recommended |
|---|---|---|---|
| ರಾಗಿ<br>Finger millet | 1 | ಎಂ.ಎಲ್-322<br>ML-322 | ವಲಯ 5<br>Zone 5 |
| ಸಾಮೆ<br>Little Millet | 1 | ಜಿ.ಪಿ.ಯು.ಎಲ್.11<br>GPUL-11 | ವಲಯ 5 & 6<br>Zone 5 & 6 |
| ಬರಗು<br>Proso Millet | 1 | ಜಿ.ಪಿ.ಯು.ಪಿ.32<br>GPUP 32 | ವಲಯ 5 & 6<br>Zone 5 & 6 |
| ಸೂರ್ಯಕಾಂತಿ<br>Sunflower | 1 | ಕೆ.ಬಿ.ಎಸ್.ಹೆಚ್-85*<br>KBSH-85* | ವಲಯ 5 & 6<br>Zone 5 & 6 |
| ಹಲಸು<br>Jackfruit | 1 | ಜಿ.ಕೆ.ವಿ.ಕೆ. ಕೆಂಪು ಹಲಸು<br>GKVK Red Jack | ವಲಯ 5<br>Zone 5 |

*ಅನುಮೋದಿಸಲಾಗಿದೆ / Endorsed

**ರಾಗಿ ತಳಿ: *ಎಂ.ಎಲ್-322:*** ಈ ತಳಿಯು ತಡವಾದ ಮುಂಗಾರು ಮತ್ತು ಹಿಂಗಾರಿಗೆ ಸೂಕ್ತವಾಗಿದ್ದು, ಹೆಚ್ಚಿನ ಇಳುವರಿಯನ್ನು (ಧಾನ್ಯ:- ಮಳೆಯಾಶ್ರಿತ: 10-12 ಕ್ವಿಂ/ಎ, ನೀರಾವರಿ: 15-20 ಕ್ವಿಂ/ಎ ಮತ್ತು ಮೇವು: 2ಟನ್/ಎ) ನೀಡುವ ತಳಿಯಾಗಿದೆ. ಈ ತಳಿಯು ಮಧ್ಯಮಾವಧಿ (105-110 ದಿನಗಳು), ಮಧ್ಯಮ ಎತ್ತರ (100-105 ಸೆಂ.ಮೀ), ಗಟ್ಟಿಯಾದ ಖಾಂಡವನ್ನು ಹೊಂದಿದ್ದು ತೆನೆ ನೆಲಕ್ಕೆ ಬೀಳುವುದಿಲ್ಲ ಮತ್ತು ಹೆಚ್ಚಿನ ತೆಂಡೆ ಒಡೆಯುವಿಕೆಯನ್ನು (6-7) ಕಾಣಬಹುದಾಗಿದೆ. ಬೆಂಕಿ ರೋಗ ನಿರೋಧಕ ಮತ್ತು ಬರ ಸಹಿಷ್ಣುತೆಯನ್ನು ಹೊಂದಿದೆ. ಒಕ್ಕಣೆ ಮಾಡುವಾಗ ಕಡಿಮೆ ಹೊಟ್ಟಿನ ದೂಳನ್ನು ಹೊಂದಿರುತ್ತದೆ. ಈ ತಳಿಯನ್ನು ವಲಯ-5ಕ್ಕೆ ಶಿಫಾರಸ್ಸು ಮಾಡಲಾಗಿದೆ.

**Ragi variety** : ***ML-322***: This variety is suitable for late monsoon and rabi and is a high yielding variety (grain: Rainfed: 10-12 q/a, irrigated: 15-20 q/a and fodder: 2 t/a). This variety is a medium duration (105-110 days) and medium height (100-105 cm) variety with a strong stalk that resists lodging and possess more number of tillers (6-7). This variety is resistant to blast and drought tolerant. There is less chaff dust during threshing. This variety is recommended for Zone-5.

**ಸಾಮೆ ತಳಿ: *ಜಿ.ಪಿ.ಯು.ಎಲ್.11 :*** ಈ ತಳಿಯು ಮಧ್ಯಮ ಸಾಂದ್ರತೆ ಮತ್ತು ಆರ್ಕಿಡ್ ಆಕಾರದ ತೆನೆಯನ್ನು ಹೊಂದಿದ್ದು, ಬೀಜಗಳು ಅಂಡಾಕಾರವಿದ್ದು ಬೂದು ಬಣ್ಣದಿಂದ ಕೂಡಿವೆ. ಈ ತಳಿಯು ಮಧ್ಯಮಾವಧಿ ತಳಿಯಾಗಿದ್ದು ಸುಮಾರು 90-95 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಈ ತಳಿಯು ಮುಂಗಾರು ಹಂಗಾಮಿಗೆ (ಜೂನ್-ಜುಲೈ) ಸೂಕ್ತವಾಗಿದ್ದು, ಎಲೆ ಅಂಗಮಾರಿ ರೋಗ ಮತ್ತು ತೆನೆ ಕಾಡಿಗೆ ರೋಗಕ್ಕೆ ನಿರೋಧಕತೆಯನ್ನು ಹೊಂದಿದೆ. ಸಂರಕ್ಷಣೆ ನೀರಾವರಿ ನೀಡಿದಾಗ ಹೆಕ್ಟೇರ್‌ಗೆ ಸುಮಾರು 15 ರಿಂದ 20 ಕ್ವಿಂ. ಇಳುವರಿಯನ್ನು ಪಡೆಯಬಹುದು.

**Little millet variety: *GPUL11***: This variety has arch shaped inflorescence with intermediate compact panicle. Grain is oval shaped with dark grey colour. It is medium duration variety and matures in 90-95 days. The variety is suitable for sowing in kharif season (June-July). This variety is highly resistant to grain smut and leaf blight disease. It yields 15-20 q/ha under protective irrigation.

**ಬರಗು ತಳಿ:** ***ಜಿ.ಪಿ.ಯು.ಪಿ.32 :*** ಈ ತಳಿಯು ಮಧ್ಯಮ ಸಾಂದ್ರತೆ ಮತ್ತು ಪ್ರಸರಣ ಆಕಾರದ ತೆನೆಯನ್ನು ಹೊಂದಿದ್ದು, ಬೀಜಗಳು ಅಂಡಾಕಾರವಿದ್ದು ಹಳದಿ ಬಣ್ಣದಿಂದ ಕೂಡಿವೆ. ಈ ತಳಿಯು ಮಧ್ಯಮ ಎತ್ತರವಿದ್ದು ಸುಮಾರು 80–85 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಈ ತಳಿಯು ಮುಂಗಾರು ಹಂಗಾಮಿಗೆ (ಜೂನ್–ಜುಲೈ) ಸೂಕ್ತವಾಗಿದ್ದು, ತೆನೆ ಕಾಡಿಗೆ ರೋಗ ಮತ್ತು ಕಂದು ಚುಕ್ಕೆ ರೋಗಕ್ಕೆ ನಿರೋಧಕತೆಯನ್ನು ಹೊಂದಿದೆ. ಸಂರಕ್ಷಣೆ ನೀರಾವರಿ ನೀಡಿದಾಗ ಹೆಕ್ಟೇರ್‌ಗೆ ಸುಮಾರು 18 ರಿಂದ 20 ಕ್ವಿಂ. ಇಳುವರಿಯನ್ನು ಪಡೆಯಬಹುದು.

**Proso millet variety**: ***GPUP 32*** : This variety has intermediate compact with diffused shaped inflorescence. Grain is oval shaped with golden yellow colour. This variety is highly resistant to grain smut and brown spot diseases. It matures in 80-85 days with medium duration and semi-tall variety. The variety is suitable for sowing in kharif season (June-July). It yields 18-20 q/ha under protective irrigation.

**ಸೂರ್ಯಕಾಂತಿ ಸಂಕರಣ ತಳಿ:** ***ಕೆ.ಬಿ.ಎಸ್.ಹೆಚ್–85 :*** ಈ ತಳಿಯು ಮಧ್ಯಮ ಸಾಂದ್ರತೆ ಮತ್ತು ಡಿಪ್ಯೂಸ್ಡ್ ಆಕಾರದ ತೆನೆಯನ್ನು ಹೊಂದಿದ್ದು, ಬೀಜಗಳು ಅಂಡಾಕಾರವಿದ್ದು ಹಳದಿ ಬಣ್ಣದಿಂದ ಕೂಡಿವೆ. ಈ ತಳಿಯು ಮಧ್ಯಮ ಎತ್ತರವಿದ್ದು ಸುಮಾರು 80–85 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಈ ತಳಿಯು ಮುಂಗಾರು ಹಂಗಾಮಿಗೆ (ಜೂನ್–ಜುಲೈ) ಸೂಕ್ತವಾಗಿದ್ದು, ತೆನೆ ಕಾಡಿಗೆ ರೋಗ ಮತ್ತು ಕಂದು ಚುಕ್ಕೆ ರೋಗಕ್ಕೆ ನಿರೋಧಕತೆಯನ್ನು ಹೊಂದಿದೆ. ಸಂರಕ್ಷಣೆ ನೀರಾವರಿ ನೀಡಿದಾಗ ಹೆಕ್ಟೇರ್‌ಗೆ ಸುಮಾರು 18 ರಿಂದ 20 ಕ್ವಿಂ. ಇಳುವರಿಯನ್ನು ಪಡೆಯಬಹುದು.

**Sunflower Hybrid**: ***KBSH-85***: This hybrid matures in 95-98 days with higher seed (2444 kg/ha [15.01% more than KBSH-44]) and oil (988 kg/ha [24.06% more than KBSH-44]) yield. The hybrid attains medium height and belongs to sturdy stem plant type category. It is resistant to downy mildew.

**ಹಲಸು ತಳಿ :** ***ಜಿ.ಕೆ.ವಿ.ಕೆ ಕೆಂಪು ಹಲಸು :*** ಬೇಗ ಫಸಲಿಗೆ ಬರುವ ಈ ತಳಿಯಲ್ಲಿ (ನಾಟಿ ಮಾಡಿದ ಮೇಲೆ 3.50 ವರ್ಷಕ್ಕೆ), ಹಸಿರು ಸಿಪ್ಪೆಯ ಮಧ್ಯಮ ಗಾತ್ರದ (5.5–10 ಕೆ.ಜಿ./ಹಣ್ಣು) ಉದ್ದ ಆಕಾರದ ಹಣ್ಣುಗಳು ಪ್ರಾಥಮಿಕ ರಂಬೆಗಳಲ್ಲಿ ಬಿಡುತ್ತವೆ ಮತ್ತು ಚಿಕ್ಕದಾದ ದಿಂಡನ್ನು (<1.5 ಸೆಂ.ಮಿ. ಮತ್ತು ಪ್ರತಿ ಕೆ.ಜಿ. ಗೆ 300–400 ಗ್ರಾಂ ಇರುತ್ತದೆ) ಹೊಂದಿದ್ದು ಅಂಟು ರಹಿತವಾಗಿದೆ. ಹತ್ತು ವರ್ಷದ ಮರವು ಸರಾಸರಿ 120 ರಿಂದ 150 ಹಣ್ಣುಗಳು ಬಿಡುತ್ತವೆ. ಮಧ್ಯಮ ಗಾತ್ರದ (ಪ್ರತಿ ತೊಳೆಯು 25 ರಿಂದ 35 ಗ್ರಾಂ ಇರುತ್ತದೆ), ತಾಮ್ರ ಕಡುಗೆಂಪು ಬಣ್ಣದ ಉದ್ದವಾದ ತೊಳೆಗಳನ್ನು ಹೊಂದಿದ್ದು ತೊಳೆಗಳ ಸಕ್ಕರೆ ಅಂಶವು 25–30$^0$ ಬ್ರೀಕ್ಸ್‌ನ್ಪದೆ ಮತ್ತು ಬೀಜಗಳು ಚಿಕ್ಕದಾಗಿದೆ (ಇಪ್ಪತ್ತು ಬೀಜಗಳ ತೂಕವು ಸರಿಸುಮಾರು 100–130 ಗ್ರಾಂ). ಇದರ ಹಣ್ಣಿನ ಮತ್ತು ತೊಳೆಯ ಅನುಪಾತವು ಉತ್ತಮವಾಗಿದ್ದು (0.63) ಪ್ರತಿ ಕೆ.ಜಿ. ಗೆ ತೊಳೆಗಳ ತೂಕ 600–700 ಗ್ರಾಂ ಇರುತ್ತದೆ. ಈ ತಳಿಯು ತೊಳೆಯ ತಿನ್ನಲು ಹೆಚ್ಚಿನ ಆದ್ಯತೆ ಹೊಂದಿದ್ದು ಮೌಲ್ಯವರ್ಧನೆಗೂ ಸೂಕ್ತವಾಗಿದೆ. ಇತರೆ ಕೆಂಪು ತೊಳೆಯ ತಳಿಗಳಿಗಿಂತ ಅಧಿಕ ಟೊಟಲ್ ಕ್ಯಾರೊಟಿನಾಯ್ಡ್ (604.75 ಮೈಕ್ರೊ ಗ್ರಾಂ/100 ಗ್ರಾಂ), ಲೈಕೊಪಿನ್ (4.30 ಮೈಕ್ರೊ ಗ್ರಾಂ /100 ಗ್ರಾಂ), ಮತ್ತು ಲುಟೀನ್ (20.68 ಮೈಕ್ರೊ ಗ್ರಾಂ /100 ಗ್ರಾಂ) ಹೊಂದಿದೆ.

**Jackfruit variety**: ***GKVK Red Jack***: Early bearing (3.5 years from planting) with oblong shaped medium sized fruits (5.50-10 kg /fruit) on primary branches with green thin rind (<1.50 cm) weighing 300-400g/kg fruit weight and small central core with less gum. The average yield of fruits from 10-year-old trees are 120 to 150 fruits /tree/year. Medium sized red colour flakes, each weighing 25 to 35 g with TSS ranging from 25 to 30$^0$ Brix and small seeds (20 seed weight is around 100-130g). The flake to fruit ratio is good (0.63), with 600-700 g flake weight per kg fruit. It is highly preferred for table purpose and processing. The total carotenoid (604.75µg/100g), lycopene (4.30µg/100g) and lutein (20.68 µg/100g) content is higher compared to other red flake types.

### 3.7.2 ಸುಧಾರಿತ ಬೇಸಾಯ ಪದ್ಧತಿಗಳ ಕೈಪಿಡಿಯಲ್ಲಿ ಸೇರ್ಪಡೆಗೆ ಶಿಫಾರಸ್ಸು ಮಾಡಲಾದ ನೂತನ ತಾಂತ್ರಿಕತೆಗಳು (32)

### 3.7.2 New Technologies Developed for Inclusion in Package of Practices (32)

**ಬೆಳೆ ಉತ್ಪಾದನೆ (15)**

**Crop production (15)**

**ಬೇಸಾಯ ಶಾಸ್ತ್ರ (8)**

**Agronomy (8)**

1. **ಹಾರಕ ಬೆಳೆಯಲ್ಲಿ ಉದಯೋತ್ತರ ಕಳೆನಾಶಕಗಳ ಬಳಕೆ:** ಉದಯೋತ್ತರ ಕಳೆನಾಶಕವಾಗಿ ಎಕರೆಗೆ 8.00 ಗ್ರಾಂ, ಮೆಟ್‌ಸಲ್ಫ್ಯೂರಾನ್ ಮಿಥೈಲ್ (10%) + ಕ್ಲೋರಿಮ್ಯುರಾನ್ ಈಥೈಲ್ (10%) WP-20 WP (2+2)ರ ಪುಡಿಯನ್ನು ಅಥವಾ ಎಕರೆಗೆ 375 ಗ್ರಾಂ. 2,4–ಡಿ, ಸೋಡಿಯಂ ಲವಣ ಶೇಕಡ 80 ರ ಪುಡಿಯನ್ನು (375 ಗ್ರಾಂ/ಎ) 200 ಲೀಟರ್ ನೀರಿನಲ್ಲಿ

1. **Weed management with Post-emergence herbicides in Kodomillet:** Spray Metsulfuron methyl (10%) + Chlorimuron ethyl (10%) WP-20 WP (2+2) powder 8g/acre as post-emergence herbicide or 2,4-D, sodium salt 80 percent powder

ಬೆರೆಸಿ ಕಳೆಗಳು ಎರಡರಿಂದ ನಾಲ್ಕು ಎಲೆ ಹಂತದಲ್ಲಿದ್ದಾಗ ಸಿಂಪಡಿಸುವುದರಿಂದ ಕಳೆಯನ್ನು ಉತ್ತಮವಾಗಿ ನಿರ್ವಹಿಸಬಹುದು.

2. **ಕೊರಲೆ ಬೆಳೆಯಲ್ಲಿ ಹೆಚ್ಚಿನ ಇಳುವರಿ ಪಡೆಯಲು ಸೂಕ್ತವಾದ ಬಿತ್ತನೆಯ ಅಂತರ:** ಬಿತ್ತನೆ ಬೀಜವನ್ನು ಸಾಲಿನಿಂದ ಸಾಲಿಗೆ 18 ಅಂಗುಲ ಮತ್ತು ಗಿಡದಿಂದ ಗಿಡಕ್ಕೆ 4 ಅಂಗುಲ ಅಂತರದ ಸಾಲುಗಳಲ್ಲಿ ಬಿತ್ತುವುದು ಸೂಕ್ತ.

3. **ಹವಾಮಾನ ಬದಲಾವಣೆಯ ಸನ್ನಿವೇಶದಲ್ಲಿ ನವಣೆ ಬೆಳೆಗೆ ಸೂಕ್ತವಾದ ಬಿತ್ತನೆಯ ಪಾಕ್ಷಿಕ:** ಜುಲೈ ಮೊದಲ ಪಾಕ್ಷಿಕದಲ್ಲಿ ಬಿತ್ತನೆ ಮಾಡುವುದರಿಂದ ಹೆಚ್ಚಿನ ಧಾನ್ಯ ಹಾಗೂ ಮೇವಿನ ಇಳುವರಿಯನ್ನು ಪಡೆಯಬಹುದು.

4. **ಹವಾಮಾನ ಬದಲಾವಣೆಯ ಸನ್ನಿವೇಶದಲ್ಲಿ ಕೊರಲೆ ಬೆಳೆಗೆ ಸೂಕ್ತವಾದ ಬಿತ್ತನೆಯ ಪಾಕ್ಷಿಕ:** ಜುಲೈ ಮೊದಲ ಪಾಕ್ಷಿಕದಲ್ಲಿ ಬಿತ್ತನೆ ಮಾಡುವುದರಿಂದ ಹೆಚ್ಚಿನ ಧಾನ್ಯ ಹಾಗೂ ಮೇವಿನ ಇಳುವರಿಯನ್ನು ಪಡೆಯಬಹುದು.

5. **ಏರೋಬಿಕ್ ಭತ್ತದಲ್ಲಿ ರಸಾವರಿ:** ಶಿಫಾರಸ್ಸಿನ ಸಾರಜನಕ ಮತ್ತು ಪೊಟ್ಯಾಶ್ ಗೊಬ್ಬರಗಳನ್ನು ಸಮವಾಗಿ 12 ಭಾಗಗಳಾಗಿ ಭಾಗಿಸಿ ಬಿತ್ತನೆಯಿಂದ ಕಾಳು ಕಟ್ಟುವವರೆಗೂ ವಾರಕ್ಕೊಮ್ಮೆ ರಸಾವರಿ ಮೂಲಕ ನೀಡುವುದು.

6. **ಭತ್ತದ ಕೆಸರು ಸಸಿ ಮಡಿಯಲ್ಲಿ ಉದಯೋತ್ತರ ಕಳೆನಾಶಕದ ಬಳಕೆಯಿಂದ ಕಳೆ ನಿರ್ವಹಣೆ:** ಉದಯೋತ್ತರ ಕಳೆನಾಶಕವಾಗಿ ಪ್ರತಿ ಹೆಕ್ಟೇರಿಗೆ 250 ಮಿ.ಲೀ. ಬಿಸ್ಪಿರಿಬಾಕ್ ಸೋಡಿಯಂ (ಶೇ.10 ಎಸ್‌ಸಿ) ನ್ನು 3 ಗುಂಟೆ ಪ್ರದೇಶದ ಕೆಸರು ಸಸಿ ಮಡಿಯಲ್ಲಿ ಬಿತ್ತನೆ ಮಾಡಿದ 12ನೇ ದಿನದಲ್ಲಿ ಕಳೆಗಳು 2–4 ಎಲೆಗಳು ಇರುವಾಗ ಎಲ್ಲಾ ಭಾಗಕ್ಕೆ ಬೀಳುವ ಹಾಗೆ ಸಿಂಪಡಿಸುವುದರಿಂದ ಕಳೆಯನ್ನು ಉತ್ತಮವಾಗಿ ನಿರ್ವಹಿಸಬಹುದು.

7. **ಭತ್ತದ ಒಣ ಸಸಿ ಮಡಿಯಲ್ಲಿ ಉದಯೋತ್ತರ ಕಳೆನಾಶಕದ ಬಳಕೆಯಿಂದ ಕಳೆ ನಿರ್ವಹಣೆ:** ಉದಯೋತ್ತರ ಕಳೆನಾಶಕವಾಗಿ ಪ್ರತಿ ಹೆಕ್ಟೇರಿಗೆ 250 ಮಿ.ಲೀ. ಬಿಸ್ಪಿರಿಬಾಕ್ ಸೋಡಿಯಂ (ಶೇ.10 ಎಸ್‌ಸಿ) ನ್ನು 3 ಗುಂಟೆ ಪ್ರದೇಶದ ಒಣ ಸಸಿ ಮಡಿಯಲ್ಲಿ ಬಿತ್ತನೆ ಮಾಡಿದ 12ನೇ ದಿನದಲ್ಲಿ ಕಳೆಗಳು 2–4 ಎಲೆಗಳು ಇರುವಾಗ ಎಲ್ಲಾ ಭಾಗಕ್ಕೆ ಬೀಳುವ ಹಾಗೆ ಸಿಂಪಡಿಸುವುದರಿಂದ ಕಳೆಯನ್ನು ಉತ್ತಮವಾಗಿ ನಿರ್ವಹಿಸಬಹುದು.

8. **ಸೂರ್ಯಕಾಂತಿ ಬೆಳೆಯಲ್ಲಿ ಉದಯೋತ್ತರ ಕಳೆನಾಶಕ ಬಳಕೆ:** ಕಳೆನಾಶಕಗಳನ್ನು ಬಳಸಲು ಆಗದಿದ್ದಾಗ, ಬಿತ್ತಿದ 15–20 ದಿವಸಗಳ ನಂತರ (ಕಳೆಗಳು ಎರಡರಿಂದ ಮೂರು ಎಲೆ ಹಂತದಲ್ಲಿದ್ದಾಗ) ಉದಯೋತ್ತರ ಕಳೆನಾಶಕ ಕ್ವಿಜಲೋಫಾಪ್–ಪಿ–ಈಥೈಲ್ ಶೇ.5 ಇ.ಸಿ.@ 1.5 ಮಿ.ಲೀ./ ಒಂದು ಲೀ. ನೀರಿಗೆ ಬೆರೆಸಿ ಸಿಂಪರಣೆ ಮಾಡುವುದು ಹಾಗೂ ಬಿತ್ತಿದ 30 ದಿವಸಗಳ ನಂತರ ಒಂದು ಅಂತರ ಬೇಸಾಯ ಮಾಡುವುದರಿಂದ ಕಳೆಗಳ ಸಂಖ್ಯೆಯಲ್ಲಿ ಶೇ. 75 ರಷ್ಟು ಕಡಿಮೆಯಾಗುವುದರ ಜೊತೆಗೆ ಇಳುವರಿಯಲ್ಲಿ ಸರಾಸರಿ ಶೇ. 13 ರಷ್ಟು ಹೆಚ್ಚಳವಾಗಿ ಕೈಕಳೆಗೆ ತಗಲುವ ವೆಚ್ಚದಲ್ಲಿ ಶೇ. 60 ರಷ್ಟು ಕಡಿಮೆಯಾಗಲಿದೆ.

(375 g/acre) mixed in 200 liters of water when weeds are at two to four leaf stage.

2. **Suitable spacing for enhance yield in Browntop millet:** Row to row spacing of 18 inches and plant to plant spacing of 4 inches is found to be optimum in Browntop millet.

3. **Suitable sowing window in Foxtail millet in the context of climate change:** Sowing in the first fortnight of July results in higher grain and fodder yield.

4. **Suitable sowing window in Browntop millet in the context of climate change:** Sowing in the first fortnight of July results in higher grain and fodder yield.

5. **Fertigation in Aerobic Rice:** From sowing till tillering, divide recommended nitrogen and potash fertilizers into equal proportions and applied once a week through fertigation results in better utilization efficiency of fertilizers and higher yield.

6. **Post-emergence chemical weed control in paddy wet nursery:** Apply Bispyribac sodium (10% SC) @ 250 ml/ha as post-emergence herbicide by sprinkling on 12th day after sowing in 3 gunte area wet nursery bed when weeds are at 2-4 leaf stage.

7. **Post-emergence chemical weed control in paddy dry nursery:** Apply Bispyribac sodium (10% SC) @ 250 ml/ha as post-emergence herbicide by sprinkling on 12th day after sowing in 3 gunte area dry nursery bed when weeds are at 2-4 leaf stage.

8. **Weed management with post-emergence herbicides in sunflower:** Whenever pre-emergence herbicides cannot be used, apply post-emergence herbicide, Quizalofop-p-ethyl 5% E.C @ 1.5ml/l at 15-20 days after sowing (when weeds are at two to three leaf stage) and one intercultural operation @30 DAS reduced the weed density by 75 % and increased th yield by 13 % with reductionin cost of weed management by 60 % as compared to manual hand weeding.. (B:c ratio :2.43).

### ಮಣ್ಣು ವಿಜ್ಞಾನ ಮತ್ತು ಕೃಷಿ ರಾಸಾಯನ ಶಾಸ್ತ್ರ (3)

1. **ಮೆಕ್ಕೆಜೋಳದ ಸುಸ್ಥಿರ ಇಳುವರಿಗಾಗಿ ಜಿಪ್ಸಂನ ಬಳಕೆ:** ಮೆಕ್ಕೆಜೋಳದ ಬೆಳೆಯಲ್ಲಿ ಶಿಫಾರಸ್ಸಿನ ಗೊಬ್ಬರದ ಜೊತೆಗೆ ವರ್ಷಕೊಮ್ಮೆ ಪ್ರತಿ ಎಕರೆಗೆ 180 ಕಿ. ಗ್ರಾಂ. ನಂತೆ ಸ್ಲ್ಯಾಗ್ ಆಧಾರಿತ ಜಿಪ್ಸಂ ಅಥವಾ ಜಿಪ್ಸಂನ್ನು ಬಿತ್ತನೆಯ ಮೊದಲು ಒದಗಿಸುವುದು.

2. **ಭತ್ತದ ಸುಸ್ಥಿರ ಇಳುವರಿಗಾಗಿ ಜಿಪ್ಸಂನ ಬಳಕೆ:** ಭತ್ತದ ಸುಸ್ಥಿರ ಇಳುವರಿಗಾಗಿ ಶಿಫಾರಸ್ಸಿನ ಗೊಬ್ಬರದ ಜೊತೆಗೆ ವರ್ಷಕೊಮ್ಮೆ ಪ್ರತಿ ಎಕರೆಗೆ 180ಕೆಜಿ. ನಂತೆ ಸ್ಲ್ಯಾಗ್ ಆಧಾರಿತ ಜಿಪ್ಸಂ ಅಥವಾ ಜಿಪ್ಸಂನ್ನು ಭತ್ತ ನಾಟಿ ಮಾಡುವ ಎರಡು ವಾರಗಳ ಮೊದಲು ಒದಗಿಸುವುದು.

3. **ಯಾಂತ್ರಿಕೃತ ಡ್ರಮ್ ಕಾಂಪೋಸ್ಟರ್ – ತ್ಯಾಜದ ನಿರ್ವಹಣೆಯ ಸಮಸ್ಯೆಗೆ ಗೊಬ್ಬರ ಮಾಡುವ ಸರಳ ವಿಧಾನ:** ಈ ಪದ್ಧತಿಯಲ್ಲಿ ಪ್ರತಿದಿನ ಉತ್ಪತ್ತಿಯಾಗುವ ಸಾವಯುವ ಹಸಿ ಮತ್ತು ಒಣಗಿದ ತ್ಯಾಜ್ಯ ವಸ್ತುಗಳನ್ನು 1:3 ಅನುಪಾತದಲ್ಲಿ ತುಂಬಿಸಬೇಕು. ಡ್ರಮ್‌ಗೆ ತ್ಯಾಜ್ಯ ವಸ್ತುಗಳನ್ನು ತುಂಬಿಸುವ ಸಮಯದಲ್ಲಿ ವಿಘಟನೆಯನ್ನು ವೇಗಗೊಳಿಸಲು ಸೂಕ್ಷ್ಮಜೀವಿಗಳ ಮಿಶ್ರಣ ಅಥವಾ ಸಗಣಿ ಬಗ್ಗಡೆದೊಂದಿಗೆ ನೀರಿನಲ್ಲಿ ಬೆರೆಸಿ ಹಾಕಬೇಕು ಹಾಗೂ ತ್ಯಾಜ್ಯದಲ್ಲಿ ಶೇ. 60 ರಷ್ಟು ತೇವಾಂಶ ಕಾಪಾಡಿಕೊಳ್ಳಬೇಕು. ನಂತರ ಪ್ರತಿದಿನ ಡ್ರಮ್‌ಗಳನ್ನು ದಿನಕ್ಕೆರಡು ಸಲ ಕೈ ಸುತ್ತುವಿಕೆಯ ಸಾಧನದಿಂದ 15–20 ಬಾರಿ ತಿರುಗಿಸುವುದರಿಂದ ಗಾಳಿಸಂಚಾರಕ್ಕೆ ಅನುಕೂಲವಾಗಿ ವಿಘಟನಾಕಾರ್ಯ ವೇಗಗೊಳ್ಳುತ್ತದೆ. ಹೀಗೆ ಮಾಡುವುದರಿಂದ ಸುಮಾರು 75 ದಿವಸಗಳಲ್ಲಿ ಕಾಂಪೋಸ್ಟ್ ತಯಾರಾಗುತ್ತದೆ. ಆದರೆ ಡ್ರಮ್‌ಗಳಿಗೆ ಯಾಂತ್ರಿಕವಾಗಿ ಮೋಟರ್ ಬಳಸಿ, ದಿನಕ್ಕೆ 2–3 ಬಾರಿ 5 ನಿಮಿಷಗಳ ಕಾಲ ಸುತ್ತಿಸಿದರೆ, ಕೇವಲ ನಾಲ್ಕು ವಾರಗಳಲ್ಲಿ ಕಾಂಪೋಸ್ಟ್ ಗೊಬ್ಬರ ತಯಾರಾಗುತ್ತದೆ. ಈ ಪದ್ಧತಿಯಲ್ಲೂ ಡ್ರಮ್‌ಗಳ ಕೆಳಗಡೆ ಟ್ರೇಗಳ ಮೂಲಕ ತ್ಯಾಜ್ಯಗಳ ವಿಘಟನೆ ಸಮಯದಲ್ಲಿ ಉತ್ಪತ್ತಿಯಾಗುವ ರಸಭರಿತ ನೀರನ್ನು ಸಂಗ್ರಹಿಸಿ ಬೆಳೆಗಳಿಗೆ ಉಪಯೋಗಿಸಬಹುದು. 50 ಲೀ ಸಾಮರ್ಥ್ಯಯುಳ್ಳ ಪ್ಲಾಸ್ಟಿಕ್ ಡ್ರಮ್‌ಗಳಿಗೆ ಮೋಟಾರು ಬಳಿಸಿದರೆ 30–35 ದಿನಗಳ ಅವಧಿಯಲ್ಲಿ ಸುಮಾರು 30 ಕೆಜಿ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸಬಹುದು.

### ಕೃಷಿ ಸೂಕ್ಷ್ಮಾಣುಜೀವಿ ಶಾಸ್ತ್ರ(2)

1. **ಚಿಪ್ಪು ಅಣಬೆಯ (ಪ್ಲುರೋಟಸ್ ಇಯೊಸ್) ಶೇಖರಣಾ ಅವಧಿಯನ್ನು ಹೆಚ್ಚಿಸಲು ಅಸಿಟಿಕ್ ಆಮ್ಲದ ಪರಿಣಾಮ:** ಚಿಪ್ಪು ಅಣಬೆಯ ಶೇಖರಣಾ ಅವಧಿಯನ್ನು 6 ದಿನಗಳವರೆಗೆ ಹೆಚ್ಚಿಸಲು, 1 ಕೆಜಿ ಚಿಪ್ಪು ಅಣಬೆಯನ್ನು 480 ಮಿ.ಲೀ (ಶೇ.1) ಅಸಿಟಿಕ್ ಆಮ್ಲದೊಂದಿಗೆ 10 ನಿಮಿಷಗಳ ಕಾಲ ಉಪಚರಿಸಿ, 2 ನಿಮಿಷಗಳ ಕಾಲ ಆರಿಸಿ, ಹೆಚ್ಚಿನ ಸಾಂದ್ರತೆಯುಳ್ಳ ಪ್ಲಾಸ್ಟಿಕ್ ಚೀಲಗಳಲ್ಲಿ ಪ್ಯಾಕ್ ಮಾಡಿ, 4° ಸೆಂ. ಉಷ್ಣಾಂಶದಲ್ಲಿ ಶೇಖರಿಸುವುದು

2. **ಕಬ್ಬಿನಲ್ಲಿ ರಸಾವರಿ ಮುಖಾಂತರ ದ್ರವರೂಪದ ಜೈವಿಕ ಗೊಬ್ಬರಗಳ ಬಳಕೆ:** ಹನಿ ನೀರಾವರಿಯ ಮೂಲಕ ಸುಧಾರಿತ ಬೇಸಾಯ ಪದ್ಧತಿಗಳ ಅನುಸಾರ 75% ರಸಾಯನಿಕ ಗೊಬ್ಬರ ಶಿಫಾರಸ್ಸಿನ ಜೊತೆಗೆ ದ್ರವರೂಪದ ಜೈವಿಕ ಗೊಬ್ಬರಗಳನ್ನು (ಬ್ಯಾಸಿಲಸ್+ ಅಜೊಟೋಬ್ಯಾಕ್ಟರ್+ ಅಜೋಸ್ಪಿರಿಲಂ+ ಸುಡೋಮೊನಾಸ್) ಎಕರೆಗೆ 2 ಲೀ ನಂತೆ 200 ಲೀ. ನೀರಿಗೆ ಬೆರೆಸಿ ನಾಟಿ

### Soil Science & Agricultural Chemistry (3)

1. **Utilization of Gypsum for Sustainable yield in maize**: Along with recommended fertilizer, apply slag-based gypsum or provide gypsum @ 180 kg per acre once a year in maize crop before sowing.

2. **Utilization of Gypsum for Sustainable yield in paddy:** Along with recommended fertilizer, apply slag-based gypsum or provide gypsum @ 180 kg per acre once a year in two weeks prior to paddy planting.

3. **Mechanized Drum Composter- A simple method of composting waste:** In this method, raw and dry waste materials generated should be mixed in 1:3 ratio every day. At the time of filling the waste material into the drum, it should be mixed with water and microbial mixture or dung slurry to speed up the decomposition. 60 percent humidity should be maintained. Later, 15-20 rotations of the drums twice a day with a hand-rotating device will speed up the decomposition process by facilitating aeration. By doing this compost will be ready in about 75 days. While, if the drums are mechanically motored and rotated 2-3 times a day for 5 minutes, compost will be ready in just four weeks. In this system the liquid waste produced during the decomposition of wastes can be collected and used for crops through trays below the drums. Motorized plastic drums of 50 L capacity can produce about 30 kg of compost in 30-35 days.

### Agriculture Microbiology (2)

1. **Acetic acid for increasing the storage life of oyster mushroom (Pleurotus eos):** Treating 1 kg of oyster mushroom with 480 ml (1%) acetic acid for 10 minutes then drying for 2 minutes and further packing in tight High density ployethlene plastic bags and storing at 4°C enhances the storage life of oyster mushroom by 6 days.

2. **Application of liquid biofertilizers in sugarcane through drip irrigation:** Apply liquid biofertilizers (Azotobacter + Azospirillum + Pseudomonas + Bacillus) mixed in 200 lt. of water @ 2 l/acre at 30 and 60 days after planting along with recommended 75% fertilizers through drip

ಮಾಡಿದ 30 ಮತ್ತು 60 ದಿನಗಳ ನಂತರ ಉಪಚರಿಸುವುದು. ಈ ರೀತಿ ದ್ರವ ರೂಪದ ಸೂಕ್ಷ್ಮಾಣುಜೀವಿಗಳ ಸಮೂಹವನ್ನು (ಒಥಿಡಿಠಛಿಚಿಟ ಅಠಟಿಠಡಿಣಿಚಿಣಟ) ಬಳಸಿ ಉಪಚರಿಸುವುದರಿಂದ ಮಣ್ಣಿನ ಪೋಷಕಾಂಶಗಳ ಪ್ರಮಾಣದ ಹೆಚ್ಚಳದ ಹಾಗೂ ಸೂಕ್ಷ್ಮಾಣುಜೀವಿಗಳ ಸಂಖ್ಯೆಯು ಹೆಚ್ಚುವುದರ ಜೊತೆ ಅಧಿಕ ಇಳುವರಿ ಮತ್ತು ಅಧಿಕ ಲಾಭ ಗಳಿಸುವುದರ ಜೊತೆಗೆ ರಾಸಾಯನಿಕಗಳ ಮೇಲಿನ ಅವಲಂಬನೆಯನ್ನು ಶೇ. 25% ರಷ್ಟು ಕಡಿಮೆ ಮಾಡಬಹುದು.

irrigation. This increases the nutrient availability and microorganisms in the soil and reduces the fertilizer requirement by 25%

**ತೋಟಗಾರಿಕೆ (2)**

1. **ಆಲೂಗಡ್ಡೆ ಬೀಜೋತ್ಪಾದನೆಯಲ್ಲಿ ಅಂಗಾಂಶ ಕುಡಿಕಾಂಡ ಸಸಿಗಳು:** ಬಾಟಲಿನಲ್ಲಿ ಬೆಳೆದಿರುವ ರೋಗ ರಹಿತ ಅಂಗಾಂಶ ಆಲೂಗಡ್ಡೆ ಸಸಿಗಳನ್ನು ಮೀಡಿಯಾದಿಂದ ಬೇರ್ಪಡಿಸಿ, ಒಂದು ಲೀಟರ್ ನೀರಿಗೆ ಶೇ. 2 ರಷ್ಟು ಶಿಲೀಂಧ್ರನಾಶಕವನ್ನು ಬೆರೆಸಿರುವ ಮಿಶ್ರಣದಲ್ಲಿ ಅದ್ದಿ, ಈ ಸಸಿಗಳನ್ನು ಮೊದಲೇ ಸಿದ್ಧಿಪಡಿಸಿದ ಕೋಕೋಪೀಟ್ ತಾಯಿ ಮಡಿಗೆ ನಾಟಿ ಮಾಡಬೇಕು. ಈ ರೀತಿ ನಾಟಿ ಮಾಡಿದ ಪ್ರತಿ ಅಂಗಾಂಶ ಸಸಿಗಳಿಂದ 21ನೇ ದಿನದಲ್ಲಿ ಒಂದು ಕುಡಿ ದೊರೆಯುತ್ತದೆ. ಈ ಕುಡಿಯನ್ನು ಕತ್ತರಿಸಿ ಅದೇ ತಾಯಿ ಮಡಿಯಲ್ಲಿ ನೆಡುತ್ತಾ ಮುಂದುವರೆದರೆ 2 ತಿಂಗಳಲ್ಲಿ ಪ್ರತಿ ಅಂಗಾಂಶ ಸಸಿಯಿಂದ 100 ಕುಡಿಕಾಂಡ ಸಸಿಗಳನ್ನು ತಾಯಿ ಮಡಿಯಲ್ಲಿ ಅಭಿವೃದ್ಧಿ ಪಡಿಸಬಹುದು. ಎರಡು ತಿಂಗಳ ನಂತರ ಈ ತಾಯಿ ಮಡಿಯಿಂದ ಬಂದಂತಹ ಕುಡಿಗಳನ್ನು ಕತ್ತರಿಸಿ ಮೊದಲೇ ಸಿದ್ಧಪಡಿಸಿದ ಕೋಕೋಪೀಟ್ ತುಂಬಿದ ಪ್ರೋಟ್ರೇಗೆ ನೆಡುವುದು, ಈ ರೀತಿ ನೆಟ್ಟಂತಹ ಸಸಿಗಳು 14 ದಿನಗಳಲ್ಲಿ ಪ್ರೋಟ್ರೇಯಲ್ಲಿ ಬೇರು ಬಿಟ್ಟು ಭೂಮಿಗೆ ನಾಟಿ ಮಾಡಲು ಸಿದ್ಧವಾಗುತ್ತವೆ. ಹೀಗೆ ಬೇರು ಬಿಟ್ಟು ಸಿದ್ಧವಾದ ಸಸಿಗಳನ್ನು ಭೂಮಿಯಲ್ಲಿ ಸಾಲಿಂದ ಸಾಲಿಗೆ 60 ಸೆಂ.ಮೀ. ಹಾಗೂ ಗಿಡದಿಂದ ಗಿಡಕ್ಕೆ 20 ಸೆಂ.ಮೀ. ಇರುವಂತೆ ನಾಟಿ ಮಾಡಿ ಸುಧಾರಿತ ಬೇಸಾಯ ಪದ್ಧತಿಗಳ ಕೈಪಿಡಿಯ ಶಿಫಾರಿಸ್ಸಿನಂತೆ ಪೋಷಕಾಂಶಗಳನ್ನು ನೀಡುವುದು ಮತ್ತು 90–110 ನೇ ದಿನದಲ್ಲಿ ಆಲೂಗೆಡ್ಡೆಯನ್ನು ಕೊಯ್ಲು ಮಾಡುವುದು. ಈ ರೀತಿ ಕೊಯ್ಲು ಮಾಡಿದ ಆಲೂಗೆಡ್ಡೆಯು ಜಿ–0 ವಂಶವಾಹಿಯಾಗಿರುತ್ತದೆ ಹಾಗೂ ಈ ಆಲೂಗೆಡ್ಡೆಯನ್ನು ಮೂರು ವಂಶವಾಹಿ ವರೆಗೆ ಬಿತ್ತನೆ ಬೀಜಕ್ಕೆ ಬಳಸಬಹುದಾಗಿದೆ. ಕುಡಿಕಾಂಡ ಸಸಿಗಳಿಂದ ಗೆಡ್ಡೆ ಉತ್ಪಾದನೆ ಮಾಡುವಾಗ ಶೀಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರವನ್ನು 4 ವಿಭಾಗ ಮಾಡಿ 10 ದಿನಗಳ ಅಂತರದಲ್ಲಿ 4 ಸಾರಿ ನೀಡುವುದರ ಜೊತೆಗೆ ಪ್ರತಿ ಬಾರಿ ಮಡಿಯನ್ನು ಏರಿಸಿ ಸುಧಾರಿತ ಬೇಸಾಯ ಪದ್ಧತಿಗಳ ಕೈಪಿಡಿಯ ಶಿಫಾರಿಸ್ಸಿನಂತೆ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು.

2. **ಆಲುಗಡ್ಡೆ ಕೃಷಿಯಲ್ಲಿ ಯಾಂತ್ರಿಕರಣ:** ನೂತನ ಯಾಂತ್ರಿಕೃತ ಆಲೂಗಡ್ಡೆ ಬೇಸಾಯದಲ್ಲಿ ಸಂಪೂರ್ಣ ಗೆಡ್ಡೆಗಳನ್ನು ಟ್ರ್ಯಾಕ್ಟರ್ ಚಾಲಿತ ಬಿತ್ತನೆಯಂತ್ರದ ಮೂಲಕ ನಾಟಿಮಾಡಬಹುದಾಗಿದೆ. ಈ ಯಂತ್ರದಲ್ಲಿ ಸುಮಾರು 1 ಕ್ವಿಂಟಾಲ್ ನಷ್ಟು ಬಿತ್ತನೆ ಗೆಡ್ಡೆಗಳನ್ನು ಸಂಗ್ರಹಿಸಬಹುದಾಗಿದ್ದು ಯಂತ್ರದ ಹಿಂದೆ ಇಬ್ಬರು ಕುಳಿತು ಗೆಡ್ಡೆ ಮಾಪನ ಚಕ್ರದಲ್ಲಿ ಹಾಕುತ್ತ 1 ಅಡಿ ಏರಿಸಿರುವ ಮಡಿಯಲ್ಲಿ 10–12 ಸೆಂಟಿಮೀಟರ್ ಆಳದಲ್ಲಿ ಬಿತ್ತನೆ ಮಾಡಬಹುದು. ನಂತರ ಮಣ್ಣಿನಲ್ಲಿ ಬಿದ್ದ ಗೆಡ್ಡೆಗಳ ಮೇಲೆ ಮಣ್ಣಿನ ಹೊದಿಕೆ ಫಲಕದ ಸಹಾಯದಿಂದ ಸುಮಾರು 4–5 ಸೆಂಟಿಮೀಟರ್

**Horticulture (2)**

1. **Apical Rooted Cuttings (ARC) of potato for seed tuber production:** Disease free saplings grown in Tissue Culture bottles (TC bottles) are taken out carefully and separate culture media from the roots. Dip the saplings in two per cent fungicide and then transplant to mother bed (a bed prepared with coco-peat). After 21 days after transplantation, the first apicals are available to cut. The cut apicals are again transplanted to mother bed for further multiplication up to two months. Where, each tissue culture sapling produces 100 saplings by the end of two months. After two months and based on the farmers need, apicals are cut and transplanted to portrays. After 14 days of nourishment, rooted saplings are ready for transplantation in the open field conditions. Later, saplings are transplanted by following 60X20 cm spacing and other cultivation practices as in Package of Practices. Harvesting can be done at 90- 110 days and harvested potato tubers are used as G-0 seed material for sowing. This can be used as seed material for three generations. While using rooted cuttings for planting provide recommended chemical fertilizer in 4 splits at 10 days interval in raised beds with need based plant protection measures as in Package of Practice.

2. **Mechanization in Potato Cultivation:** In modern mechanized potato farming, whole tubers can be planted with a tractor-driven potato planter. About 1 quintal of sowing tubers can be stored in this planter and it forms one feet raised beds. Two people can sit behind the planter and put the tuber into the measuring wheel where tubers will be placed at a depth of 10-12 cm by covering the tuber with the soil about 4-5 cm, simultaneously

ಮಣ್ಣನ್ನು ಗೆಡ್ಡೆಗಳ ಮೇಲೆ ಮುಚ್ಚಲಾಗುತ್ತದೆ. ಈ ಮೂಲಕ 1 ಎಕರೆ ಪ್ರದೇಶದ ಬಿತ್ತನೆಯನ್ನು 2 ಗುಂಟೆಗಳಲ್ಲಿ ಮಾಡಬಹುದಾಗಿದೆ. ಅಲ್ಲದೆ, ಆಲೂಗೆಡ್ಡೆ ಬೆಳೆಯಲ್ಲಿ ಬರುವ ಪ್ರಮುಖ ಕೀಟ ಮತ್ತು ರೋಗ ಬಾಧೆಗಳನ್ನು ನಿಯಂತ್ರಿಸಲು ಬೂಮ್ ಸಿಂಪರಣಾ ಯಂತ್ರವು ಸಮರ್ಪಕವಾಗಿದ್ದು 1 ಎಕರೆ ಪ್ರದೇಶವನ್ನು 1 ಗಂಟೆಗಿಂತಲೂ ಕಡಿಮೆ ಅವಧಿಯಲ್ಲಿ ಸಿಂಪರಣೆ ಮಾಡಬಹುದಾಗಿದೆ.

**ಬೆಳೆ ಸಂರಕ್ಷಣೆ (15)**

**ಕೀಟ ಶಾಸ್ತ್ರ (10)**

1. **ಭತ್ತದ ಹಳದಿ ಕಾಂಡ ಕೊರಕದ ನಿರ್ವಹಣೆ:** ಭತ್ತದ ಹಳದಿ ಕಾಂಡ ಕೊರಕದ ನಿರ್ವಹಣೆಗಾಗಿ ಕ್ಲೋರಾಂಟ್ರನಿಲಿಪ್ರೋಲ್ ಶೇ.0.4 ಜಿಆರ್ ಹರಳು ರೂಪದ ಕೀಟನಾಶಕವನ್ನು 4 ಕೆಜಿ ಪ್ರತಿ ಎಕರೆಗೆ ನಾಟಿಯಾದ 20 ದಿನಗಳ ನಂತರ ಎರಚುವುದು.

2. **ಭತ್ತದ ಕಂದು ಜಿಗಿಹುಳುವಿನ ನಿರ್ವಹಣೆ:** ಭತ್ತದ ಕಂದು ಜಿಗಿಹುಳುವಿನ ನಿರ್ವಹಣೆಗಾಗಿ ಟ್ರೈಫ್ಲೂಮೆಜೋಪೈರಿಂ 10 ಎಸ್‌ಸಿ ಕೀಟನಾಶಕವನ್ನು 0.4 ಮಿಲೀ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡುವುದು. ಪ್ರತಿ ಬುಡಕ್ಕೆ 5–10 ಜಿಗಿಹುಳು ಕಂಡಾಗ ಪ್ರತಿ ಎಕರೆಗೆ 94 ಮಿ.ಲಿ.ಯನ್ನು 225 ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡುವುದು.

3. **ಭತ್ತದ ಬೆಳೆಯಲ್ಲಿ ತೆನೆ ತಿಗಣೆ ನಿರ್ವಹಣೆ:** ಭತ್ತದ ತೆನೆ ತಿಗಣೆಯ ನಿರ್ವಹಣೆಗಾಗಿ ಫಿಪ್ರೋನಿಲ್ 5 ಎಸ್‌ಸಿ ಕೀಟನಾಶಕವನ್ನು 2 ಮಿಲೀ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು. ಕಾಳು ಹಾಲು ತುಂಬುವ ಸಮಯದಲ್ಲಿ ಪ್ರತಿ ಗಿಡಕ್ಕೆ 1–2 ತಿಗಣೆ ಕಂಡಾಗ ಎಕರೆಗೆ 200–250 ಲೀಟರ್ ದ್ರಾವಣವನ್ನು ಸಿಂಪರಣೆ ಮಾಡುವುದು.

4. **ತೊಗರಿ ಬೆಳೆಯಲ್ಲಿ ಕಾಯಿನೊಣದ ನಿರ್ವಹಣೆ:** ತೊಗರಿ ಬೆಳೆಯಲ್ಲಿ ಕಾಯಿನೊಣದ ಹತೋಟಿಗಾಗಿ ಲುಫೆನ್ಯುರಾನ್ 5.4 ಇಸಿ ಕೀಟನಾಶಕವನ್ನು ಪ್ರತಿ ಲೀಟರ್ ನೀರಿಗೆ 1 ಮಿಲೀ ಬೆರೆಸಿ ಕಾಯಿಕಚ್ಚುವ ಮತ್ತು ಕಾಯಿ ಬೆಳವಣಿಗೆ ಹಂತಗಳಲ್ಲಿ 15 ದಿನಗಳ ಅಂತರದಲ್ಲಿ ಎರಡು ಬಾರಿ ಸಿಂಪಡಿಸುವುದು.

5. **ಹತ್ತಿ ಬೆಳೆಯಲ್ಲಿ ಮಿರಿಡ್ ತಿಗಣೆಯ ನಿರ್ವಹಣೆ:** ಹತ್ತಿಯಲ್ಲಿ ಮಿರಿಡ್ ತಿಗಣೆ ನಿರ್ವಹಣೆಗಾಗಿ ಡೈನೊಟೆಫ್ಯೂರಾನ್ 20 ಎಸ್‌ಜಿ ಕೀಟನಾಶಕವನ್ನು 0.3 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಮೊಗ್ಗು ಹಾಗೂ ಸಣ್ಣ ಕಾಯಿಗಳು ಕಟ್ಟುವ ಹಂತದಲ್ಲಿ ಸಿಂಪರಣೆ ಮಾಡುವುದು. ಮಿರಿಡ್ ತಿಗಣೆಗಳು ಕಂಡು ಬಂದಾಗ ಎಕರೆಗೆ 200 ಲೀಟರ್ ಸಿಂಪರಣಾ ದ್ರಾವಣವನ್ನು ಸಿಂಪಡಿಸುವುದು.

6. **ಎಲೆಕೋಸು ಬೆಳೆಯಲ್ಲಿ ವಜ್ರ ಬೆನ್ನಿನ ಕೀಟದ ನಿರ್ವಹಣೆ:** ಎಲೆಕೋಸು ಬೆಳೆಯಲ್ಲಿ ವಜ್ರ ಬೆನ್ನಿನ ಕೀಟದ ಬಾಧೆಯು ಕಂಡುಬಂದಲ್ಲಿ ಕೀಟನಾಶಕಗಳಾದ ಬ್ರೋಫ್ಲನಿಲೈಡ್ 30% ಎಸ್ ಸಿ ಪ್ರತಿ ಲೀಟರ್ ನೀರಿಗೆ 0.08 ಮಿಲೀ ಅಥವಾ ಫ್ಲುಕ್ಸಾಮೆಟಾಮೈಡ್ 10% ಇಸಿ ಪ್ರತಿ ಲೀಟರ್ ನೀರಿಗೆ 0.8 ಮಿಲೀ ಬೆರೆಸಿ ಸಿಂಪಡಿಸುವುದು.

using soil cover plate. Through this, sowing of 1 acre area can be done in 2 hours. The boom sprayer can be used for spraying plant protection chemicals in 1 acre area in less than 1 hour there by controlling pest and diseases.

**Crop Protection (15)**

**Entomology (10)**

1. **Management of paddy yellow stem borer in paddy:** Broadcasting of granular insecticide Chlorantraniliprole 0.4% GR @ 4 kg per acre at 20 days after planting for the management of yellow stem borer in rice.

2. **Management of paddy brown planthopper:** Foliar spray of Triflumezopyrim 10 % SC @ 0.40 ml/l, when we observe 5-10 grasshoppers per stem @ 94 ml. in 225 liters of water per acre for the management of paddy brown planthopper.

3. **Management of earhead bug in rice crop:** Foliar spray of Fipronil 5 % SC insecticide at 2 ml per litre of water when we observe 1-2 bugs per plant during milk filling stage @ 200-250 liters of solution per acre for the management of mealybug in paddy.

4. **Management of pod fly in pigeonpea:** Spray Lufenuron 5.4 EC at the rate of 1ml per litre of water, twice at an interval of 15 days at pod setting and pod development stages for the management of pod fly in pigeonpea.

5. **Management of mirid bug in cotton:** Spray Dinotefuran 20 SG @ 0.3 g/liter of water When we observe mirid bugs at bud setting and fruit development stage @ 200 liters of solution per acre for the management of the mirid bugs in cotton.

6. **Management of diamond backmoth in cabbage:** Spray Broflanilide 30% SC @ 0.08 ml per liter of water or Fluxametamide 10% EC @ 0.8 ml per liter of water when we observe the diamond backmoth in cabbage to manage its menace.

7. **ಮೆಣಸಿನಕಾಯಿ ಬೆಳೆಯಲ್ಲಿ ಇನ್ವೇಸಿವ್ ಥ್ರಿಪ್ಸ್ ನುಸಿ ನಿರ್ವಹಣೆ:** ಮೆಣಸಿನಕಾಯಿ ಬೆಳೆಯಲ್ಲಿ ಇನ್ವೇಸಿವ್ ಥ್ರಿಪ್ಸ್ ನುಸಿ ಹಾನಿ ಕಂಡುಬಂದಾಗ ಪ್ರತಿ ಲೀಟರ್ ನೀರಿಗೆ ಬ್ರೋಪ್ಲಾನಿಲೈಡ್ 30% ಎಸ್‌ಸಿ @ 0.16 ಮಿಲೀ ಅಥವಾ ಫ್ಲುಕ್ಸಮೆಟಮೈಡ್ 10% ಇಸಿ @ 0.8 ಮಿಲೀ ಅಥವಾ ಸ್ಪೈನೆಟೋರಮ್ 11.7% ಎಸ್‌ಸಿ @ 1 ಮಿಲೀ ಅಥವಾ ಟೋಲ್ ಫೆನಪೈರಾಡ್ 15% ಇಸಿ @ 2 ಮಿಲೀ ಬೆರೆಸಿ ಸಿಂಪಡಿಸಬೇಕು. ಮೇಲೆ ಸೂಚಿಸಿದ ಕೀಟನಾಶಕಗಳಲ್ಲಿ ಒಮ್ಮೆ ಬಳಸಿದ ಕೀಟನಾಶಕವನ್ನು ಮತ್ತೊಮ್ಮೆ ಅದೇ ಬೆಳೆಯ ಮೇಲೆ ಬಳಸದಿರುವುದು.

8. **ಹೀರೇಕಾಯಿ ಬೆಳೆಯಲ್ಲಿ ಹಣ್ಣಿನ ನೊಣದ ನಿರ್ವಹಣೆ:** ಹೀರೆಕಾಯಿ ಬೆಳೆಯಲ್ಲಿ ಹಣ್ಣಿನ ನೊಣದ ಹಾನಿ ಕಂಡುಬಂದಾಗ ಪ್ರತಿ ಲೀ ನೀರಿಗೆ ಸೈಯಾಂಟ್ರನಿಲಿಪ್ರೋಲ್ 10.26 ಒಡಿ @ 1.8 ಮಿಲೀ ಮತ್ತು 10 ಗ್ರಾಂ ಬೆಲ್ಲದ ಮಿಶ್ರಣವನ್ನು ಸಿಂಪಡಿಸುವುದು, 15 ರಿಂದ 20 ದಿನಗಳ ನಂತರ ಅವಶ್ಯಕತೆಗೆ ಅನುಗುಣವಾಗಿ ಸ್ಪೈನೋಸಾಡ್ 45 ಎಸ್‌ಸಿ @ 0.3 ಮಿ.ಲೀ ಮತ್ತು 10 ಗ್ರಾಂ ಬೆಲ್ಲದ ಮಿಶ್ರಣವನ್ನು ಬೆರೆಸಿ ಸಿಂಪಡಿಸಬೇಕು.

9. **ದ್ವಿದಳ ಧಾನ್ಯಗಳ ಶೇಖರಣೆಯಲ್ಲಿ ಕೀಟಬಾಧೆ ನಿರ್ವಹಣೆ:** ದ್ವಿದಳ ಧಾನ್ಯಗಳನ್ನು ಒಕ್ಕರಣೆ ನಂತರ ಬೀಜದ ತೇವಾಂಶವನ್ನು ಶೇಕಡ 10 ಕ್ಕಿಂತ ಕಡಿಮೆಗೆ ಒಣಗಿಸಿ ನಂತರ 0.4 ಮಿಲಿ ಫ್ಲುಪೈರಾಡಿಫ್ಯೂರಾನ್ 200 ಎಸ್‌ಎಲ್ ಅನ್ನು 50 ಮಿಲೀ ನೀರಿನೊಂದಿಗೆ ಬೆರೆಸಿ 10 ಕೆಜಿ ದ್ವಿದಳ ಧಾನ್ಯ ಬೀಜಕ್ಕೆ ಲೇಪಿಸಿ, 3 – 4 ಗಂಟೆಗಳ ಕಾಲ ನೆರಳಿನಲ್ಲಿ ಒಣಗಿಸಿ, ಗೋಣಿ ಚೀಲದಲ್ಲಿ ಸಂಗ್ರಹಿಸಿಡುವುದು. ಈ ಬೀಜೋಪಚಾರವು ದ್ವಿದಳ ಧಾನ್ಯ ಕೀಟ ಭಾದೆಯನ್ನು 9 ತಿಂಗಳವರೆಗು ತಡೆದು ಬೀಜದ ಗುಣಮಟ್ಟವನ್ನು ಕಾಯ್ದಿರಿಸುತ್ತದೆ.

10. **ಕೃಷಿ ಬೆಳೆಗಳಲ್ಲಿ ನವಿಲುಗಳ ನಿರ್ವಹಣೆ:** ಕೃಷಿ ಬೆಳೆಗಳನ್ನು ನವಿಲುಗಳಿಂದ ರಕ್ಷಿಸಲು ಬೆಳೆಗಿಂತ 2 ಅಡಿ ಎತ್ತರದಲ್ಲಿ 6 ಅಡಿ x 6 ಅಡಿ ಅಂತರದ ಚೌಕಾಕಾರದಲ್ಲಿ 2 ಇಂಚು ಅಗಲದ ಹೊಳೆಯುವ ರಿಬ್ಬನ್‌ಗಳನ್ನು ತಿರುಗಿಸಿ ಉತ್ತರ ದಕ್ಷಿಣ ದಿಕ್ಕಿನಲ್ಲಿ ಅಥವಾ ಅದೇ ರೀತಿ ತೆಂಗಿನ ನಾರಿನ ಹಗ್ಗಗಳನ್ನು ಕಟ್ಟಬೇಕು. ಜೊತೆಗೆ ಬೆಳೆಗಳ ಬದುಗಳ ಸುತ್ತಲೂ ಸಹ ಹಗ್ಗ ಅಥವಾ ರಿಬ್ಬನ್‌ಗಳನ್ನು ಕಟ್ಟಬೇಕು. ವಿವಿಧ ಬೆಳೆಗಳಿಗನುಗುಣವಾಗಿ ನವಿಲುಗಳು ಬಾಧಿಸುವ ಕಾಲದಲ್ಲಿ (ಬೀಜ ಹುಟ್ಟುವ ಸಮಯದಲ್ಲಿ) ಸುಮಾರು 15 ರಿಂದ 20 ದಿವಸಗಳವರೆಗೆ ಹಾಗೂ ಕಾಳು ಕಟ್ಟುವ ಸಮಯದಲ್ಲಿ ಕಟಾವು ಮಾಡುವವರೆಗೆ ದಾರ ಅಥವ ರಿಬ್ಬನ್‌ಗಳನ್ನು ಕಟ್ಟಬೇಕು.

### ಸಸ್ಯರೋಗ ಶಾಸ್ತ್ರ(5)

1. **ಭತ್ತದ ಬೆಳೆಯಲ್ಲಿ ದಂಡಾಣು ಅಂಗಮಾರಿ ರೋಗದ ನಿರ್ವಹಣೆ:** ಭತ್ತದ ಬೆಳೆಯಲ್ಲಿ ದಂಡಾಣು ಅಂಗಮಾರಿ ರೋಗದ ನಿರ್ವಹಣೆಗಾಗಿ ಪ್ರತಿ ಲೀಟರ್ ನೀರಿಗೆ 0.50 ಗ್ರಾಂ ಸ್ಟ್ರೆಪ್ಟೋಸೈಕ್ಲಿನ್ + 1 ಗ್ರಾಂ ಕಾಪರ್ ಆಕ್ಸಿ ಕ್ಲೋರೈಡ್ (ರಾತ್ರಿ ಇಡೀ ಬೀಜಗಳನ್ನು ನೆನೆಸುವುದು) ನಲ್ಲಿ ಬೀಜೋಪಚಾರ ಮಾಡುವುದು. ರೋಗ ಕಂಡ ತಕ್ಷಣ 0.2 ಗ್ರಾಂ ಸ್ಟ್ರೆಪ್ಟೋಸೈಕ್ಲಿನ್ + 1 ಗ್ರಾಂ ಕಾಪರ್ ಆಕ್ಸಿ ಕ್ಲೋರೈಡ್ ಪ್ರತಿ ಲೀ.ನೀರಿಗೆ ಬೆರೆಸಿ ಸಿಂಪರಣೆ ಮಾಡುವುದು.

7. **Management of Invasive Thrips in Chilli:** Spray Broplanilide 30% SC @ 0.16 ml per liter of water or Fluxametamide 10% EC @ 0.8 ml per liter of water or Spinetorum 11.7% SC @ 1 ml per liter of water or Tolfenpyrad 15% EC @ 2ml per liter of water when invasive thrips damage is found in chilli to manage its menace. It is recommended not to use any of the above-mentioned pesticides for the second time on the same crop.

8. **Management of fruit fly in ridgegourd:** When fruit fly damage is found in ridgegourd, spray the mixture of cyantraniliprole 10.26 OD @ 1.8 ml and 10 gm jaggery per liter of water followed by spraying with the mixture of spinosad 45 SC @ 0.3 ml and 10 gm jaggery per liter of water after 15 to 20 days to manage the menace of fruitfly in ridgegourd.

9. **Management of storage pests in pulses:** After threshing the pulses, dry them till the seed moisture is less than 10% and then apply 0.4 ml Flupyradifurone 200 SL mixed in 50 ml of water. Later, dry them in shade for 3-4 hours and store in gunny bag. This seed treatment inhibits legume insect infestation for up to 9 months and preserves the seed quality.

10. **Management of Peacocks in Agricultural Crops:** Arrange the coconut fiber ropes in grid format or arrange the reflective ribbons of 2 inch width in grid format with the spacing of 6 ft x 6 ft around crop area and 2 feet above the crop canopy during seed germination and emergence (15-20 days) and at maturity/ harvest stage to manage the peafowl menace.

### Plant Pathology (5)

1. **Management of bacterial blight in paddy:** Seed treatment with 0.5 gm streptocycline + 1 gm copper oxychloride per liter of water (soak whole seeds overnight). Spray 0.2 gm streptocycline + 1gm of copper oxychloride per liter of water as soon as the disease is observed.

2. **ನವಣೆ ಬೆಳೆಯಲ್ಲಿ ತುಕ್ಕು ರೋಗದ ನಿರ್ವಹಣೆ:** ನವಣೆ ಬೆಳಯಲ್ಲಿ ತುಕ್ಕು ರೋಗದ ನಿರ್ವಹಣೆಗಾಗಿ ಪ್ರತಿ ಕೆ.ಜಿ ಬೀಜಕ್ಕೆ 10ಗ್ರಾಂ *ಸ್ಯೂಡೋಮೋನಸ್ ಫ್ಲೂರೋಸೆನ್ಸ್* ಟಾಕ್‌ಪುಡಿಯಿಂದ ಬೀಜೋಪಚಾರ ಮಾಡುವುದು ಹಾಗೂ ಬಿತ್ತನೆ ಮಾಡಿದ 40–45 ದಿನಗಳ ನಂತರ ಪ್ರತಿ ಲೀ.ನೀರಿಗೆ 1 ಮಿಲೀ ನಂತೆ ಅಜಾಕ್ಸಿಸ್ಟ್ರೊಬಿನ್ ಶೇ.23 ಎಸ್‌ಸಿ ಶಿಲೀಂದ್ರನಾಶಕವನ್ನು ಬೆರೆಸಿ ಸಿಂಪರಣೆ ಮಾಡುವುದು ಮತ್ತು 50–55 ದಿನಗಳ ತರುವಾಯ ಎರಡನೇ ಸಿಂಪರಣೆಯಾಗಿ 10ಗ್ರಾಂ ಸ್ಯೂಡೋಮೋನಸ್ ಪ್ಲೂರೋಸೆನ್ಸ್ ಟಾಕ್ ಪುಡಿಯನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡುವುದು.

3. **ಮೆಣಸಿನಕಾಯಿಯ ಎಲೆ ಮುದುಡು ನಂಜುರೋಗದ ಸಮಗ್ರ ಹತೋಟಿ ಕ್ರಮಗಳು:** ಹೊಲದ ಸುತ್ತಾ 2 ಸಾಲು ಬಹುಕಟಾವುಮೇವಿನ ಜೋಳ 45 ದಿನಗಳ ಮುಂಚೆ ಬೆಳೆಯಬೇಕು. 50 ಮೆಷ್ ನೈಲಾನ್ ಪರದೆ ಅಡಿಯಲ್ಲಿ 35 ದಿನಗಳ ಕಾಲ ಬೆಳೆದಿರುವ ಮೆಣಶಿನಕಾಯಿ ಸಸಿಗಳನ್ನು ಬೆಳ್ಳಿ ಪ್ರತಿಪಲಿತ ಪ್ಲಾಸ್ಟಿಕ್ ಹಾಳೆ ಮದ್ಯೆ ನಾಟಿ ಮಾಡಬೇಕು. ನಾಟಿ ಮಾಡಿದ 15 ಮತ್ತು 70 ನೇ ದಿನಗಳಲ್ಲಿ 0.5 ಮಿಲೀ ಇಮಿಡಾಕ್ಲೋಪ್ರಿಡ್ ಶೇ.17.8 ಎಸ್‌ಎಲ್ ಅಥವಾ 2 ಮಿಲೀ ಅಫಿಡೋಫೈರಿಫಾನ್ 50 ಜಿ/ಎಲ್ ಪ್ರತಿ ಲೀಟರ ನೀರಿಗೆ ಬೆರೆಸಿ ಸಿಂಪಡಿಸಬೇಕು; ಸಮುದ್ರ ಕಳೆಯ ಕಷಾಯ (ಕಪ್ಪಾಪೈಕಸ್ ಅಲ್ವಿರೈಜಿ/ ಎಲ್‌ಬಿಡಿ–12 (ಅಗ್ರೋಪೋರ್ಟ್/ ಟೊಮೋಟಪ್) 1.5 ಮಿಲಿ/ಲೀ ನೀರಿಗೆ ಬೆರೆಸಿ ನಾಟಿಮಾಡಿದ 21, 35, 49, 63ನೇ ದಿವಸ ಸಿಂಪಡಿಸಬೇಕು. ಬೇವಿನ ಎಣ್ಣೆ (5000 ಪಿಪಿಎಮ್) @ 5 ಮಿಲಿ/ಲೀ ನೀರಿಗೆ ಬೆರೆಸಿ ನಾಟಿಮಾಡಿದ 28, 56 ನೇದಿವಸ ಸಿಂಪಡಿಸಬೇಕು. ಥಯೋಮೆಥೋಕ್ಸಾಮ್ 25 ಡಬ್ಲುಜಿ (0.5 ಗ್ರಾಂ/ ಲೀ. ನೀರಿಗೆ) ನಾಟಿಮಾಡಿದ 6 ನೇ ವಾರದಲ್ಲಿ ಬೆರೆಸಿ ಸಿಂಪಡಿಸಬೇಕು.

4. **ಮೆಣಸಿನಕಾಯಿ ಬೆಳೆಯಲ್ಲಿ ಚಿಬ್ಬು ರೋಗದ ನಿರ್ವಹಣೆ:** ಸಂಯುಕ್ತ ಶಿಲೀಂದ್ರನಾಶಕವಾದ ಟೆಬುಕೋನಜೋಲ್ (50%) + ಟ್ರೈಫ್ಲಾಕ್ಸಿಸ್ಟ್ರೋಬಿನ್ (25%) ನ್ನು 0.4 ಗ್ರಾಂ ಪ್ರತಿ ಲೀಟರ್ ನೀರಿಗೆಬೆರೆಸಿ ರೋಗ ಕಂಡ ತಕ್ಷಣ ಮೊದಲನೆ ಸಿಂಪರಣೆ ಹಾಗೂ ಎರಡನೇ ಸಿಂಪರಣೆಯನ್ನು 15ದಿನಗಳ ಅಂತರದಲ್ಲಿ ಸಿಂಪಡಿಸಬೇಕು.

5. **ಟೊಮೊಟೊ ಬೆಳೆಯಲ್ಲಿ ಅಂಗಮಾರಿ ರೋಗದ ನಿರ್ವಹಣೆ:** ಸಂಯುಕ್ತ ಶಿಲೀಂದ್ರನಾಶಕ ಅಜಾಕ್ಸಿಸ್ಟ್ರೋಬಿನ್ ಶೇ.18.2 + ಡೈಫೆನ್‌ಕೊನಜೋಲ್ ಶೇ.11.4 ಎಸ್‌ಸಿ ನ್ನು 1.0 ಮಿಲಿ/ಲೀ ನೀರಿಗೆ ಬೆರೆಸಿ ರೋಗ ಕಂಡ ತಕ್ಷಣ ಮೊದಲನೆ ಸಿಂಪರಣೆ ಹಾಗೂ ಎರಡನೇ ಸಿಂಪರಣೆಯನ್ನು 15ದಿನಗಳ ಅಂತರದಲ್ಲಿ ಸಿಂಪಡಿಸಬೇಕು.

**ಕೃಷಿ ಇಂಜಿನಿಯರಿಂಗ್ (2)**

1. **ಕಬ್ಬಿನ ಸಿಪ್ಪೆಯನ್ನು ಸುಲಿಯುವ ಉಪಕರಣ:** ಕಬ್ಬಿನ ಸಿಪ್ಪೆಯನ್ನು ಸುಲಿಯುವ ಉಪಕರಣದ ತಯಾರಿಕೆಗೆ ಫುಡ್ ಗ್ರೇಡ್ ಖಖ 304 ವಸ್ತುವನ್ನು ಬಳಸಲಾಗಿದೆ. ಈ ಸಿಪ್ಪೆ ಸುಲಿಯುವ ಉಪಕರಣವು ಸಿಲಿಂಡರ್ ಆಕಾರದ ಶಾಫ್ಟ್, ಬಾಗಿದ ಚಾಕು/ ಕತ್ತಿಗಳು, ಚೌಕಟ್ಟು (ಫ್ರೇಮ್ಸ್), ಕೀಲುಗಳು, ಮತ್ತು ಕೈಹಿಡಿಕೆ(ಹ್ಯಾಂಡಲ್)ಗಳನ್ನು ಒಳಗೊಂಡಿರುತ್ತದೆ. ಸಿಲಿಂಡರ್ ಆಕಾರದ ಶಾಫ್ಟನ್ನು ವ್ಯತ್ಯಾಸವಾದ ಸುತ್ತಳತೆಗಳನ್ನು

2. **Management of rust disease in foxtail millet:** Seed treatment with 10g *Pseudomonas fluorescens* powder per kg of seeds and spraying with Azoxystrobin 23% SC @ 1ml per liter of water at 40-45 days after sowing followed by spraying with *Pseudomonas fluorescens* talc powder 10g per liter of water at 50-55 days after sowing.

3. **Integrated management of leaf blight in chilli:** 2 rows of multi-harvest fodder maize should be grown before 45 days along the borders of the field. Chilli seedlings grown for 35 days under 50 mesh nylon net should be transplanted into silver coated plastic sheet lined rows. Spray 0.5 ml of imidacloprid 17.8 % SL or 2 ml of afidophyropen 50 g/l per liter of water at 15th and 70th day after planting. Seaweed decoction (Kappapycus alviraizi/ LBD-12 - Agport/ Tomtop) mixed with 1.5ml/l of water should be sprayed on 21st, 35th, 49th and 63rd day of transplanting. Neem oil (5000 ppm) @ 5 ml per liter of water should be mixed and sprayed after 28th and 56th day of transplanting. Thiamethoxam 25 WG (0.5 g/l water) should be sprayed at 6th week after transplanting.

4. **Management of anthracnose in chilli:** Spray tebuconazole (50%) + trefloxystorbin (25%) @ 0.4 gm per liter of water as soon as the disease is observed and the second spray at an interval of 15 days.

5. **Management of early blight in tomato:** Spray Azoxystrobin 18.2% + Difenconazole 11.4% SC @ 1 ml per litre of water as soon as the disease is observed and the second spray at an interval of 15 days.

**Agricultural Engineering (2)**

1. **Sugarcane Deskinner Equipment:** Food grade SS 304 material is used for the manufacture of sugarcane deskinning equipment. This deskinning tool consists of a cylindrical shaft, curved knife/ swords, frame(s), hinges, and handle(s). A cylindrical shaped shaft is divided into three parts to accommodate the varying circumferences and

ಸರಿಹೊಂದಿಸಲು ಮೂರು ಭಾಗಗಳನ್ನಾಗಿ ವಿಂಗಡಿಸಿ ಅದನ್ನು ಕೀಲುಗಳಿಂದ ಜೋಡಿಸಲಾಗಿದೆ ಮತ್ತು ಚಾಕು/ಕತ್ತಿಗಳ ಎತ್ತರವು ಕ್ರಮವಾಗಿ 15 ಸೆಂ.ಮೀ, 8 ಸೆಂ.ಮೀ ಮತ್ತು 5 ಸೆಂ.ಮೀ ವಿಭಿನ್ನವಾಗಿದೆ. ಉಪಕರಣವನ್ನು ಉಪಯೋಗಿಸುವಾಗ, ಬಲಗೈಯಲ್ಲಿ ಹಿಡಿದು, ನಾಲ್ಕು ಬೆರಳುಗಳು ಎಡಭಾಗದಲ್ಲಿ ಮತ್ತು ಹೆಬ್ಬೆರಳು ಬಲಭಾಗದಲ್ಲಿ ಬರುತ್ತದೆ. ಪ್ರಸ್ತುತದಲ್ಲಿ ಸಿಪ್ಪೆ ಸುಲಿಯುವ ಸ್ವಯಂಚಾಲಿತ ಮತ್ತು ಅರೆ ಸ್ವಯಂಚಾಲಿತ ಉಪಕರಣಗಳು ಲಭ್ಯವಿದ್ದು, ತುಂಬಾ ದುಬಾರಿಯಾಗಿರುವುದರಿಂದ ಸಣ್ಣ ಮಟ್ಟದ ವ್ಯಾಪಾರಿಗಳು ಮತ್ತು ಗ್ರಾಹಕರು ಉಪಯೋಗಿಸಲು ಕಷ್ಟಕರವಾಗುತ್ತದೆ. ನೈಸರ್ಗಿಕವಾಗಿ ಸಿಪ್ಪೆಯನ್ನು ಸುಲಿಯುವ ವಿಧಾನವನ್ನು ಹೋಲಿಸಿದರೆ, ಅಭಿವೃದ್ಧಿ ಪಡಿಸಿರುವ ಕೈಚಾಲಿತ ಉಪಕರಣವು ವಿವಿಧ ಸುತ್ತಳತೆಯ ಕಬ್ಬಿನ ಸಿಪ್ಪೆಯನ್ನು ಸುಲಿಯಲು ಕಡಿಮೆ ಸಮಯವನ್ನು ತೆಗೆದುಕೊಳ್ಳುತ್ತದೆ ಮತ್ತು ಕಬ್ಬಿನ ರಸದ ಪ್ರಮಾಣ ಮತ್ತು ಗುಣಮಟ್ಟವು ಉತ್ತಮವಾಗಿರುತ್ತದೆ.

2. **ಸಾಲು ಬೆಳೆಗಳಿಗೆ ಸುಧಾರಿತ ಕೈ ಕಳೆ ಉಪಕರಣ:** ಈ ಉಪಕರಣವು ಒಂದು ಅಡಿ ಸಾಲಿನ ಬೆಳೆಗಳಿಗೆ ವಿನ್ಯಾಸ ಮಾಡಲಾಗಿದೆ. ಒಟ್ಟು ಐದು ಗುಳಗಳನ್ನು ಹೊಂದಿದ್ದು, ಅದರಲ್ಲಿ ಮುಂದೆ ಮೂರು ಹಾಗೂ ಹಿಂದೆ ಎರಡು ಗುಳಗಳನ್ನು ಅಳವಡಿಸಲಾಗಿರುವುದರಿಂದ ಎಲ್ಲಾ ವಿಧಧ ಮಣ್ಣಿಗೆ ಸೂಕ್ತವಾಗಿದೆ. ಇದರ ಗುಳಗಳು ಹೈ ಕಾರ್ಬೊನೇಟೆಡ್ ಕಬ್ಬಿಣದಿಂದ ಮಾಡಲ್ಪಟಿದ್ದು, ಪ್ರತಿಯೊಂದು ಗುಳದ ಅಗಲ 4 ಸೆಂ.ಮೀ. ಇರುವುದರಿಂದ ಬೆಳೆಯ ಎರಡು ಸಾಲಿನ ಮಧ್ಯೆ 19 ಸೆಂ.ಮೀ. ಅಂತರದವರೆಗೆ ಏಕಕಾಲಕ್ಕೆ ಕಳೆಗಳನ್ನು ನಿರ್ವಹಣೆ ಮಾಡಿ ಮೇಲ್ಭಾಗದ ಮಣ್ಣನ್ನು ಮೃದುಗೊಳಿಸುವುದರ ಜೊತೆಗೆ ಸಣ್ಣ ದೋಣಿ ಸಾಲುಗಳನ್ನು ತೆಗೆಯಲು ಅನುಕೂಲವಾಗುತ್ತದೆ. ಈ ಉಪಕರಣವನ್ನು ಒಬ್ಬ ವ್ಯಕ್ತಿ ಮುಂದೆ ಹಗ್ಗ ಕಟ್ಟಿ ಎಳೆಯುವುದು ಹಾಗೂ ಇನ್ನೊಬ್ಬ ವ್ಯಕ್ತಿ ಎರಡು ಕೈಗಳಿಂದ ಹಿಡಿದುಕೊಂಡು ಕಾರ್ಯ ನಿರ್ವಹಿಸುವುದರಿಂದ ಕಡಿಮೆ ಅವಧಿಯಲ್ಲಿ ಹೆಚ್ಚು ಪ್ರದೇಶದಲ್ಲಿ ಕಳೆ ತೆಗೆಯಬಹುದು.

### 3.8 ಪ್ರಗತಿಯಲ್ಲಿರುವ (ಮುಖ್ಯ ತಾಂತ್ರಿಕತೆಗಳು) ಸಂಶೋಧನೆಗಳು

### 3.8.1 ಬೆಳೆ ಅಭಿವೃದ್ಧಿ

### 3.8.1.1 ಅನುವಂಶೀಯತೆ ಮತ್ತು ಸಸ್ಯ ತಳಿ ಅಭಿವೃದ್ಧಿ

#### ಅ) ಭತ್ತ

- ಭತ್ತದ ತಳಿಗಳಾದ ಕೆಎಂಪಿ–175, ಕೆಸಿಪಿ–1, ಜ್ಯೋತಿ ಮತ್ತು ಕೆಎಂಪಿ–149ನ್ನು ಸುಧಾರಿಸಲು ಮಾರ್ಕರ್ ಸಂಯುಕ್ತ ಹಿಮ್ಮುಖ ಸಂಕರಣ ತಳಿ ಅಭಿವೃದ್ಧಿ ಕಾರ್ಯದಲ್ಲಿ ಬಳಸಲಾಯಿತು. ಇವುಗಳು ಬೆಂಕಿರೋಗ ಮತ್ತು ದುಂಡಾಣು ಎಲೆ ಅಂಗಮಾರಿ ರೋಗಗಳ ಜೊತೆಗೆ ಲವಣಾಂಶ ಮತ್ತು ಕಳೆನಾಶಕ ಸಹಿಷ್ಣುತೆಯನ್ನು ಒಳಗೊಂಡಿರುತ್ತವೆ. ಈ ಸಂಕರಣ ಚಟುವಟಿಕೆಗಳಿಂದ ಬಂದ ಕೆಲವು ರೋಗ ನಿರೋಧಕತೆ ಇರುವ ಪ್ರಭೇದಗಳನ್ನು ರೋಗ ನಿರೋಧಕತೆಗೆ ಮೌಲ್ಯಮಾಪನ ಮಾಡಲಾಗುತ್ತಿದೆ.
- ಬಹುರೋಗಗಳಿಗೆ ಪ್ರತಿರೋದವನ್ನು ಹೊಂದಿರುವ 25 ಪ್ರಭೇಧಗಳನ್ನು ಗುರುತಿಸಲಾಗಿದೆ.

is joined by hinges and the height of the knives/swords is 15 cm, 8 cm and 5 cm respectively. When handling the tool, it should be held in the right hand with four fingers on the left and thumb on the right. At present most of the automatic and semi-automatic deskinning machines available are very expensive making it difficult for small scale traders and consumers to use. Compared to the natural deskinning method, the developed manual equipment takes less time to deskin the sugarcane of different diameters and the quantity and quality of sugarcane juice is better.

2. **Improved hand weeder for row crops:** This tool is designed for one-foot row spacing crops. It has a total of five balls, three in front and two in back so it is suitable for all types of soil. Its blades are made of high carbonated iron and each blade is 4 cm wide. When there is 19 cm spacing between two rows in the crop, simultaneous management of weeds, softening of the top soil and opening the furrows between the rows can be done. This tool is pulled by rope by 1 person in the front and another person holds it with both hands from behind. Weeding can be done in large area in a short period of time.

### 3.8 Research in Progress

### 3.8.1 Crop Improvement

### 3.8.1.1 Genetics and Plant breeding

#### a) Rice

- Marker Assisted Back Cross Breeding was employed to improve rice varieties KMP-175, KCP-1, Jyothi and KMP-149 for several traits including blast and BLB diseases, salinity and herbicide tolerance. Some of the disease resistant lines obtained from these crosses are in initial evaluation for disease resistance.
- 25 landraces with resistance to multiple diseases were identified.

**ಆ) ಸಿರಿ ಧಾನ್ಯಗಳು**

- ರಾಗಿಯಲ್ಲಿ ಕ್ಷೇತ್ರ ಪ್ರಯೋಗವನ್ನು ಕೈಗೊಂಡಿದ್ದು, ಕೆಎಂಆರ್-702 ಮತ್ತು ಕೆಎಂಆರ್-654 ತಳಿಗಳನ್ನು ಆಶಾದಾಯಕ ತಳಿಗಳೆಂದು ಗುರುತಿಸಲಾಗಿದೆ.
- ಹೆಚ್ಚಿನ ಕಬ್ಬಿಣ ಮತ್ತು ಸತುವಿನ ಪ್ರಮಾಣವುಳ್ಳ ರಾಗಿ ತಳಿಗಳನ್ನು ಅಭಿವೃದ್ಧಿಪಡಿಸಲು ಜೈವಿಕ ಬಲವರ್ಧನ ಸಂಕರಣ ಕ್ರಿಯೆಯು ಪ್ರಗತಿಯಲ್ಲಿದೆ
- ರಾಗಿಯ ಬಹುಕ್ಷೇತ್ರ ಪ್ರಯೋಗದ ಯೋಜನೆಯಡಿಯಲ್ಲಿ ಒಟ್ಟು 1709 ರಾಗಿ ತಳಿಗಳನ್ನು ಎಲೆ ಬೆಂಕಿರೋಗ, ಕುತ್ತಿಗೆ ಬೆಂಕಿರೋಗ ಮತ್ತು ಇಲುಕು ಬೆಂಕಿರೋಗದ ನಿರೋಧಕತೆಗೆ ಮೌಲ್ಯಮಾಪನ ಮಾಡಲಾಗಿದ್ದು ನಿರೋಧಕ ಪ್ರಭೇದಗಳನ್ನು ಗುರುತಿಸಲಾಗಿದೆ
- ನವಣೆ ಬೆಳೆಯಲ್ಲಿ ಕ್ಷೇತ್ರ ಪ್ರಯೋಗವನ್ನು ಕೈಗೊಂಡಿದ್ದು, ಕೆ.ಎಂ.ಎಫ್.-1 ಮತ್ತು ಕೆ.ಎಂ.ಎಫ್.-2 ತಳಿಗಳನ್ನು ಆಶಾದಾಯಕ ತಳಿಗಳೆಂದು ಗುರುತಿಸಲಾಗಿದೆ.

**ಇ) ಮುಸುಕಿನ ಜೋಳ**

- ಕೇದಿಗೆ ರೋಗವನ್ನು ಸರಿಯಾದ ಸಮಯದಲ್ಲಿ ಅಂದಾಜಿಸುವಂತಹ ಮುನ್ಸೂಚನಾ ಮಾದರಿ (Prediction model) ಯನ್ನು ಯಂತ್ರ ಕಲಿಕೆ ಕ್ರಮಾವಳಿಗಳ ಸಹಾಯದೊಂದಿಗೆ ಅಭಿವೃದ್ಧಿಪಡಿಸಲಾಗಿದೆ.
- ಮೆಕ್ಕೆಜೋಳದ ಕೇದಿಗೆ ರೋಗದ ಬಗೆಗಿನ ದೃಶ್ಯರೂಪಿ ಸಹ ಸಂಬಂಧಿಗಳ ಮಾದರಿ ಗುಂಪನ್ನು ದಾಖಲಿಸಲಾಗಿದೆ. ಅವುಗಳಲ್ಲಿ, 65 ಸಂತತಿಗಳು ನಿರೋಧಕತೆಯನ್ನು, 78 ಸಂತತಿಗಳು ಮಧ್ಯಮ ನಿರೋಧಕತೆಯನ್ನು, 212 ಸಂತತಿಗಳು ಮಧ್ಯಮ ತುತ್ತಾಗುವಿಕೆಯನ್ನು ಮತ್ತು 1055 ಸಂತತಿಗಳು ಹೆಚ್ಚಿನ ಮಟ್ಟದಲ್ಲಿ ರೋಗಕ್ಕೆ ತುತ್ತಾಗುವುದನ್ನು ಕಾಣಬಹುದಾಗಿದೆ.
- ಮೆಕ್ಕೆಜೋಳದ ಟರ್ಸಿಕಂ ಎಲೆ ಕೊಳೆ ರೋಗದ ಬಗೆಗಿನ ದೃಶ್ಯರೂಪಿ ಸಹಸಂಬಂಧಿಗಳ ಮಾದರಿ ಗುಂಪನ್ನು ದಾಖಲಿಸಲಾಗಿದೆ. ಅವುಗಳಲ್ಲಿ, 250 ಸಂತತಿಗಳು ನಿರೋಧಕತೆಯನ್ನು, 565 ಸಂತತಿಗಳು ಮಧ್ಯಮ ನಿರೋಧಕತೆಯನ್ನು, 213 ಸಂತತಿಗಳು ಮಧ್ಯಮ ತುತ್ತಾಗುವಿಕೆಯನ್ನು ಮತ್ತು 497 ಸಂತತಿಗಳು ಹೆಚ್ಚಿನ ಮಟ್ಟದಲ್ಲಿ ರೋಗಕ್ಕೆ ತುತ್ತಾಗುವುದನ್ನು ಕಾಣಬಹುದಾಗಿದೆ.

**ಈ) ಜೋಳ**

- ಮೆಕ್ಕೆಜೋಳದ ಕೇದಿಗೆ ರೋಗದ ಬಗೆಗಿನ ದೃಶ್ಯರೂಪಿ ಸಹಸಂಬಂಧಿಗಳ ಮಾದರಿ ಗುಂಪನ್ನು ದಾಖಲಿಸಲಾಗಿದೆ. ಅವುಗಳಲ್ಲಿ, 65 ಸಂತತಿಗಳು ನಿರೋಧಕತೆಯನ್ನು, 78 ಸಂತತಿಗಳು ಮಧ್ಯಮ ನಿರೋಧಕತೆಯನ್ನು, 212 ಸಂತತಿಗಳು ಮಧ್ಯಮ ತುತ್ತಾಗುವಿಕೆಯನ್ನು ಮತ್ತು 1055 ಸಂತತಿಗಳು ಹೆಚ್ಚಿನ ಮಟ್ಟದಲ್ಲಿ ರೋಗಕ್ಕೆ ತುತ್ತಾಗುವುದನ್ನು ಕಾಣಬಹುದಾಗಿದೆ.
- ಮೆಕ್ಕೆಜೋಳದ ಟರ್ಸಿಕಂ ಎಲೆ ಕೊಳೆ ರೋಗದ ಬಗೆಗಿನ ದೃಶ್ಯರೂಪಿ ಸಹಸಂಬಂಧಿಗಳ ಮಾದರಿ ಗುಂಪನ್ನು ದಾಖಲಿಸಲಾಗಿದೆ. ಅವುಗಳಲ್ಲಿ, 250 ಸಂತತಿಗಳು ನಿರೋಧಕತೆಯನ್ನು, 565 ಸಂತತಿಗಳು ಮಧ್ಯಮ ನಿರೋಧಕತೆಯನ್ನು, 213 ಸಂತತಿಗಳು ಮಧ್ಯಮ ತುತ್ತಾಗುವಿಕೆಯನ್ನು ಮತ್ತು 497 ಸಂತತಿಗಳು ಹೆಚ್ಚಿನ ಮಟ್ಟದಲ್ಲಿ ರೋಗಕ್ಕೆ ತುತ್ತಾಗುವುದನ್ನು ಕಾಣಬಹುದಾಗಿದೆ.

### b) Small millets

- Identified KMR-702 and KMR-654 as promising Finger Millet genotypes in station trials.
- Biofortification of Finger millet genotypes with high Fe and Zn is under progress.
- Evaluated 1709 Finger millet genotypes and identified Leaf blast, Finger blast and Neck blast resistant lines in multi-location trial
- Foxtail millet genotypes KMF-1 and KMF-2 were identified as promising genotypes in station trials

### c) Maize

- Developed a forecasting model to predict sorghum downy mildew in maize using machine learning algorithms.
- MAGIC Population for Sorghum downy mildew disease has been phenotyped. Among them, 65 progenies were resistant, 78 were moderately resistant, 212 were moderately susceptible and 1055 were susceptible.
- MAGIC Population for Turcicum leaf blight disease has been phenotyped. Among them, 250 progenies were resistant, 565 were moderately resistant, 213 were moderately susceptible and 497 were susceptible.

### d) Sorghum

- MAGIC Population for Sorghum downy mildew disease has been phenotyped. Among them, 65 progenies were resistant, 78 were moderately resistant, 212 were moderately susceptible and 1055 were susceptible.
- MAGIC Population for Turcicum leaf blight disease has been phenotyped. Among them, 250 progenies were resistant, 565 were moderately resistant, 213 were moderately susceptible and 497 were susceptible.

### ಉ) ಸೂರ್ಯಕಾಂತಿ

- ಮುಂಗಾರು 2022 ಹಾಗೂ ಹಿಂಗಾರು 2022-23 ರಲ್ಲಿ ಕೆಬಿಎಸ್ಎಚ್-90 ಮತ್ತು ಕೆಬಿಎಸ್ಎಚ್-91 ಸಂಕರಣ ತಳಿಗಳನ್ನು ಅಖಿಲ ಭಾರತ ಸುಸಂಘಟಿತ ಸೂರ್ಯಕಾಂತಿ ಸಂಶೋಧನೆ ಪ್ರಾಯೋಜನೆಯ ರಾಷ್ಟ್ರಮಟ್ಟದ ಮುಂದುವರೆದು ತಳಿ ಪ್ರಯೋಗ-1 ರಲ್ಲಿ ಪರೀಕ್ಷಿಸಲಾಯಿತು.
- ಮುಂಗಾರು 2022 ಹಾಗೂ ಹಿಂಗಾರು 2022-23 ರಲ್ಲಿ ಕೆಬಿಎಸ್ಎಚ್-92 ಮತ್ತು ಕೆಬಿಎಸ್ಎಚ್ -93 ಸಂಕರಣ ತಳಿಗಳನ್ನು ಅಖಿಲ ಭಾರತ ಸುಸಂಘಟಿತ ಸೂರ್ಯಕಾಂತಿ ಸಂಶೋಧನೆ ಪ್ರಾಯೋಜನೆಯ ರಾಷ್ಟ್ರಮಟ್ಟದ ಆರಂಭಿಕ ತಳಿ ಪ್ರಯೋಗದಲ್ಲಿ ಪರೀಕ್ಷಿಸಲಾಯಿತು.
- ಸೂರ್ಯಕಾಂತಿ ಸಂಕರಣ ತಳಿಗಳಾದ ಕೆಬಿಎಸ್ಎಚ್-94 ಮತ್ತು ಕೆಬಿಎಸ್ಎಚ್-95 ಅನ್ನು ಅಖಿಲ ಭಾರತ ಸುಸಂಘಟಿತ ಸೂರ್ಯಕಾಂತಿ ಸಂಶೋಧನೆ ಪ್ರಾಯೋಜನೆಯ ರಾಷ್ಟ್ರಮಟ್ಟದ ಮುಂಗಾರು 2023 ಹಾಗೂ ಹಿಂಗಾರು 2023-24 ರಲ್ಲಿ ಆರಂಭಿಕ ತಳಿ ಪ್ರಯೋಗಕ್ಕೆ ನಿಯೋಜಿಸಲಾಗಿದೆ

### ಊ) ಸೋಯಾ ಅವರೆ

- ಹೋಲಿಕೆ ತಳಿ ಕೆಬಿಎಸ್-23 (1907 ಕೆಜಿ/ಹೆ) ಮತ್ತು ಇತರೆ 16 ನಮೂದುಗಳಿಗೆ ಹೋಲಿಸಿದರೆ ಕೆಬಿಎಸ್ಎಲ್-22-36 ಪ್ರಭೇದವು ಗಮನಾರ್ಹವಾಗಿ ಹೆಚ್ಚಿನ ಬೀಜ ಇಳುವರಿಯನ್ನು 2292 ಕೆಜಿ/ಹೆ ದಾಖಲಿಸಿದೆ.

### ಋ) ತೊಗರಿ

- ತೊಗರಿಯ ದೃಶ್ಯರೂಪಿ ಸಹಸಂಬಂಧಿಗಳ ಮಾದರಿ ಗುಂಪನ್ನು ರಚಿಸುವ ನಿಟ್ಟಿನಲ್ಲಿ ತಳಿ ಅಭಿವೃದ್ಧಿ ಕಾರ್ಯಕ್ರಮ ಪ್ರಗತಿಯಲ್ಲಿದೆ
- ಮಧ್ಯಮಾವಧಿ ತಳಿಗಳನ್ನು ಗುರುತಿಸಲು ಕೈಗೊಂಡ ಮುಂದುವರೆದು ತಳಿ ಪ್ರಯೋಗದಲ್ಲಿ, ನಮೂದು-704 (19.34 ಕ್ವಿಂ/ಹೆ), ನಮೂದು-707 (17.15 ಕ್ವಿಂ/ಹೆ), ನಮೂದು-701 (14.55 ಕ್ವಿಂ/ಹೆ) ಮತ್ತು ನಮೂದು-710 (14.20 ಕ್ವಿಂ/ಹೆ) ಆಶಾದಾಯಕ ಪ್ರಭೇದಗಳಾಗಿ ಗುರುತಿಸಲಾಗಿದೆ.
- ಅರೆ-ಅಲ್ಪಾವಧಿ ತಳಿಗಳನ್ನು ಗುರುತಿಸಲು ಕೈಗೊಂಡ ಮುಂದುವರೆದು ತಳಿ ಪ್ರಯೋಗದಲ್ಲಿ, ನಮೂದು-504 (26.92 ಕ್ವಿಂ/ಹೆ), ನಮೂದು-503 (22.75 ಕ್ವಿಂ/ಹೆ) ಮತ್ತು ನಮೂದು-502 (20.83 ಕ್ವಿಂ/ಹೆ) ಆಶಾದಾಯಕ ಪ್ರಭೇದಗಳಾಗಿ ಗುರುತಿಸಲಾಗಿದೆ.

### ಎ) ಶುಷ್ಕ ದ್ವಿದಳ ಧಾನ್ಯ

- ಅಲಸಂದೆಯ ಆರಂಭಿಕ ಮತ್ತು ಮುಂದುವರೆದ ತಳಿ ಪ್ರಯೋಗದಲ್ಲಿ, ಎರಡು ಹೋಲಿಕೆ ತಳಿಗಳೊಂದಿಗೆ ಹದಿನೇಳು ನಮೂದುಗಳನ್ನು ಪರೀಕ್ಷಿಸಲಾಯಿತು. ಅವುಗಳಲ್ಲಿ 3 ನಮೂದುಗಳಾದ ಸಿಪಿ-24, ಸಿಪಿ-25 & ಸಿಪಿ-29, ಅತ್ಯುತ್ತಮ ಹೋಲಿಕೆ ತಳಿ ಕೆಬಿಸಿ-11ಕ್ಕಿಂತ ಹೆಚ್ಚಿನ ಇಳುವರಿಯನ್ನು ದಾಖಲಿಸಿದೆ. ಸಿಪಿ-24 (1334 ಕೆಜಿ/ಹೆ) ಹಾಗು ಸಿಪಿ-25 (1285 ಕೆಜಿ/ಹೆ) ನಮೂದುಗಳು ಅತ್ಯುತ್ತಮ ಚೆಕ್ ಕೆಬಿಸಿ-11 (1017 ಕೆಜಿ/ಹೆ) ಗಿಂತ ಹೆಚ್ಚಿನ ಧಾನ್ಯ ಇಳುವರಿ ದಾಖಲಿಸಲಾಯಿತು.

### e) Sunflower

- KBSH-90 and KBSH- 91 Hybrids were nominated and evaluated in AHT-1 during Kharif 2022 and Rabi/summer 2022-23 in AICRP coordinated trials
- KBSH-92 and KBSH- 93 were nominated and evaluated in IHT during Kharif 2022 and Rabi/summer 2022-23 in AICRP coordinated trials .
- KBSH-94 and KBSH- 95 were nominated to IHT during kharif 2023 & rabi/summer 2023-24 in AICRP coordinated trials .

### f) Soybean

- The entry KBSL-22-36 recorded significantly higher seed yield of 2292 kg/ha as compared to the check KBS-23 (1907kg/ha.) and other 16 entries in the station trial

### g) Pigeonpea

- Crosses towards development of MAGIC population in pigeonpea is under progress.
- Entries 704 (19.31 q/ha), 707 (17.15 q/ha), 701 (14.55 q/ha) and 710 (14.20 q/ha) were found promising in Advanced Varietal Trial for Medium duration attribute.
- Entries 504 (26.92 q/ha), 503 (22.75 q/ha), and 502 (20.83 q/ha) were found promising in Advanced Varietal Trial for Mid early attribute.

### h) Arid legumes

- Seventeen entries with three checks were evaluated in IVT-AVT trial of cowpea. Among them three entries viz., CP-24, CP-25 & CP-29, recorded higher yield than the best check KBC-11. CP-24 showed highest grain yield of 1334 kg/ha than best check KBC-11 (1017 kg/ha) followed by CP-25 with grain yield of 1285 kg/ha.

- ಹುರುಳಿ ಆರಂಭಿಕ ಮತ್ತು ಮುಂದುವರೆದ ತಳಿ ಪ್ರಯೋಗದಲ್ಲಿ, ಎರಡು ಹೋಲಿಕೆ ತಳಿಗಳೊಂದಿಗೆ ಹನ್ನೆರಡು ನಮೂದುಗಳನ್ನು ಪರೀಕ್ಷಿಸಲಾಯಿತು. ಹೆಚ್‌ಜಿ–25 (731 ಕೆಜಿ/ಹೆ) ನಮೂದು ಅತ್ಯುತ್ತಮ ಹೋಲಿಕೆ ತಳಿ ಬಿಜಿಎಂ–1 (673 ಕೆಜಿ/ಹೆ) ಗಿಂತ ಹೆಚ್ಚಿನ ಧಾನ್ಯ ಇಳುವರಿಯನ್ನು ದಾಖಲಿಸಲಾಯಿತು.

### ಏ) ಸಮರ್ಥ ಬೆಳೆಗಳ

- ಪರೀಕ್ಷಿಸಲಾದ 17 ಪ್ರಭೇದಗಳಲ್ಲಿ (12 ಹೊಸ ನಮೂದುಗಳು ಮತ್ತು 5 ಹೋಲಿಕೆ ತಳಿಗಳು), ನಮೂದುಗಳು ಇಸಿ345797 (16.44 ಕ್ವಿಂ/ಹೆ), ಎಸ್‌ಕೆಎನ್‌ಎ1804 (15.05 ಕ್ವಿಂ/ಹೆ) ಮತ್ತು ಕೆಬಿಜಿಎ–18 (15.74 ಕ್ವಿಂ/ಹೆ) ಹೋಲಿಕೆ ತಳಿಯಾದಂತಹ ಸುವರ್ಣ ತಳಿಗೆ ಸಮನಾಂತರವಾದ ಇಳುವರಿಯನ್ನು ದಾಖಲಿಸಿರುತ್ತದೆ. ನಮೂದು ಇಸಿ345797, ಇತರೆ ನಮೂದುಗಳಿ ಗಿಂತ ಮುಂಚಿತವಾಗಿ ಕಟಾವಿಗೆ ಬರುತ್ತದೆ.

### ಐ) ಹರಳು

- ಸಾಮಾನ್ಯ ಅವಧಿಗಾಗಿ ಹರಳು ಬೆಳೆಯ ಆರಂಭಿಕ ಸುಧಾರಿತ ತಳಿ ಮತ್ತು ಸಂಕರಣ ತಳಿಗಳ ಪ್ರಯೋಗದಲ್ಲಿ ಪರೀಕ್ಷಿಸಲಾದ ನಮೂದುಗಳಲ್ಲಿ, ಹೋಲಿಕೆ ಸಂಕರಣ ತಳಿ ಐಸಿಹೆಚ್–66 (1376 ಕೆಜಿ/ಹೆ) ಗಿಂತ ನಮೂದು ಐಎವಿಹೆಚ್‌ಟಿ–1007 ಗಮನಾರ್ಹವಾಗಿ ಹೆಚ್ಚಿನ ಬೀಜದ ಇಳುವರಿಯನ್ನು (2109 ಕೆಜಿ/ಹೆ) ದಾಖಲಿಸಿದ್ದು ತದನಂತರವಾಗಿ ಐಎವಿಹೆಚ್‌ಟಿ–1012 (1820 ಕೆಜಿ/ಹೆ), ಐಎವಿಹೆಚ್‌ಟಿ–1005 (1806 ಕೆಜಿ/ಹೆ) ಮತ್ತು ಐಎವಿಹೆಚ್‌ಟಿ–1011 (1787 ಕೆಜಿ/ಹೆ) ನಮೂದುಗಳು ಹೆಚ್ಚಿನ ಬೀಜದ ಇಳುವರಿಯನ್ನು ನೀಡಿರುತ್ತದೆ.
- ಅಲ್ಪಾವಧಿಗಾಗಿ ನಡೆಸಲಾದ ಹರಳು ಬೆಳೆಯ ಆರಂಭಿಕ ಸುಧಾರಿತ ತಳಿ ಮತ್ತು ಸಂಕರಣ ತಳಿಗಳ ಪ್ರಯೋಗದಲ್ಲಿ ಪರೀಕ್ಷಿಸಲಾದ ನಮೂದುಗಳಲ್ಲಿ, ಹೋಲಿಕೆ ತಳಿ ಡಿಸಿಎಸ್–9 (1288 ಕೆಜಿ/ಹೆ) ಗಿಂತ ನಮೂದು ಐಎವಿಹೆಚ್‌ಟಿ–2001 (1764 ಕೆ.ಜಿ/ಹೆ) ಗಮನಾರ್ಹವಾಗಿ ಹೆಚ್ಚಿನ ಬೀಜದ ಇಳುವರಿಯನ್ನು ದಾಖಲಿಸಿದ್ದು ತದನಂತರವಾಗಿ ಐಎವಿಹೆಚ್‌ಟಿ–2004 (1461 ಕೆ.ಜಿ/ಹೆ) ಮತ್ತು ಐಎವಿಹೆಚ್‌ಟಿ–2006 (1322 ಕೆ.ಜಿ/ಹೆ) ನಮೂದುಗಳು ಹೆಚ್ಚಿನ ಬೀಜದ ಇಳುವರಿಯನ್ನು ನೀಡಿರುತ್ತದೆ.

### ಒ) ಕಬ್ಬು

- AICRP on Seed (Crops) of UAS, Bangalore has under taken breeder and quality seed production in an area of 1079.02 ha with production target of 21,484 quintals during 2022-23 in different crop varieties. The breeder seed production has been organized to produce 753.68 quintals as against the indent of 955.00 quintals from the Department of Agriculture, Co-operation and Farmers Welfare (DAC&FW), GOI, GOK and private agencies. Quality seed production programme was also been implemented in an area of 487.58 ha during kharif 2022 expecting seed yield of 9,145.91 quintals. Besides, during rabi/summer, seed production programme of around 180.40 ha has also been organized with an anticipated yield of 6,670 quintals. Hence, the total quantity of quality seed expected from the programme would be 15,815.91 quintals during 2022-23.

**ಕೋಷ್ಟಕ 35 : 2022-23ರ ತಳಿವರ್ಧಕ ಬೀಜ ಮತ್ತು ಗುಣಮಟ್ಟ ಬೀಜೋತ್ಪಾದನಾ ಕಾರ್ಯಕ್ರಮ (ಕ್ವಿಂಟಾಲ್‌ಗಳಲ್ಲಿ)**

**Table 35 : Breeder Seeds and Quality Seeds Produced during 2022-23 (in quintals)**

| ಕ್ರ.ಸಂ./ Sl.No | ಬೆಳೆಗಳು/ Crop | ತಳಿವರ್ಧಕ ಬೀಜ (ಕ್ವಿಂ)/ Breeder Seeds (q) | ಗುಣಮಟ್ಟದ ಬೀಜ (ಕ್ವಿಂ)/ Quality Seeds (q) | ಒಟ್ಟು (ಕ್ವಿಂ)/ Total (q) |
|---|---|---|---|---|
| 1. | ಏಕದಳ/Cereals | 79.79 | 12591.73 | 12671.50 |
| 2. | ದ್ವಿದಳ/Pulses | 41.48 | 1437.23 | 1478.71 |
| 3. | ಎಣ್ಣೆಕಾಳು/Oilseeds | 632.41 | 1758.25 | 2390.66 |
| 4. | ಇತರೆ ಬೆಳೆಗಳು/Other Crops | - | 28.70 | 28.70 |
| | ಒಟ್ಟು/Total | **753.68** | **15815.91** | **16569.59** |

## 3.9 ಬುಡಕಟ್ಟು ಜನಾಂಗ / ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉಪಯೋಜನೆ ಅಡಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮಗಳು

- ಅಖಿಲ ಭಾರತ ಸುಸಂಘಟಿತ ಹತ್ತಿಬೆಳೆ ಸಂಶೋಧನಾ ಪ್ರಾಯೋಜನೆಯುವರು 22ನೇ ಏಪ್ರಿಲ್, 2022 ರಂದು ಗುಂಡ್ಲುಪೇಟೆ ತಾಲ್ಲೂಕಿನ ಚಲುವರಾಯನಪುರದಲ್ಲಿ ಬುಡಕಟ್ಟು ಉಪಯೋಜನೆ ಅಡಿಯಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಜೋಳದಲ್ಲಿ ಸಮಗ್ರ ಬೆಳೆ ನಿರ್ವಹಣೆಗಾಗಿ 30 ಫಲಾನುಭವಿಗಳಿಗೆ (12 ಪುರುಷರು ಮತ್ತು 18 ಕೃಷಿ ಮಹಿಳೆಯರು) ಮೆಕ್ಕೆಜೋಳ ಬೀಜಗಳು, ಇಮಾಮೆಕ್ಟಿನ್ ಬೆಂಜೋಯೇಟ್ (ಕೀಟನಾಶಕ), ಸಣ್ಣ ಕೃಷಿ ಉಪಕರಣಗಳನ್ನು (ಕೈ ಗುದ್ದಲಿ, ಪ್ಲಾಸ್ಟಿಕ್ ಬೇಸಿನ್, ಮಾಮ್ಟಿ ಮತ್ತು ದೊಡ್ಡ ಗುದ್ದಲಿ) ವಿತರಣೆಮಾಡಲಾಯಿತು ಮತ್ತು ರಾಗಿಯಲ್ಲಿ ಸಮಗ್ರ ಬೆಳೆ ನಿರ್ವಹಣೆಗಾಗಿ ರಾಗಿ ಮತ್ತು ಹೆಸರುಕಾಳು ಬೀಜಗಳನ್ನು ಹಾಗು ಸಣ್ಣ ಕೃಷಿ ಉಪಕರಣಗಳನ್ನು (ಕೈ ಗುದ್ದಲಿ, ಪ್ಲಾಸ್ಟಿಕ್ ಬುಟ್ಟಿ, ಮಾಮ್ಟಿ ಮತ್ತು ದೊಡ್ಡ ಗುದ್ದಲಿ) ಚಲುವರಾಯನಪುರದ 40 (32 ಪುರುಷರು ಮತ್ತು 8 ಕೃಷಿ ಮಹಿಳೆಯರು) ಫಲಾನುಭವಿಗಳಿಗೆ ವಿತರಣೆ ಮಾಡಲಾಯಿತು.
- ಅಖಿಲ ಭಾರತ ಸುಸಂಘಟಿತ ಜೋಳ ಸಂಶೋಧನಾ ಪ್ರಾಯೋಜನೆಯವರು 22ನೇ ಏಪ್ರಿಲ್, 2022 ರಂದು ಕೃಷಿ ವಿಜ್ಞಾನ ಕೇಂದ್ರ, ಚಾಮರಾಜನಗರದಲ್ಲಿ ಬುಡಕಟ್ಟು ಉಪಯೋಜನೆ ಅಡಿಯಲ್ಲಿ ಸುಧಾರಿತ ಬೇಸಾಯ ಕ್ರಮಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದ್ದರು ಹಾಗೂ ಈ ತರಬೇತಿ ಕಾರ್ಯಕ್ರಮದಲ್ಲಿ ಜೋಳದ ಬೀಜ (ಸಿಎಸ್‌ಹೆಚ್–30), ಗೊಬ್ಬರ, ಸನಿಕೆ, ಕೋಲು ಗುದ್ದಲಿ, ಸಣ್ಣ ಗುದ್ದಲಿ, ಬೇಸಿನ್, ಪ್ಲಾಸ್ಟಿಕ್ ಡಬ್ಬಿಗಳು ಮತ್ತು ಟಾರ್ಪಾಲಿನ್‌ಗಳನ್ನು ಕೆವಿಕೆ, ಚಾಮರಾಜನಗರದ 100 ಫಲಾನುಭವಿಗಳಿಗೆ (84 ಪುರುಷರು ಮತ್ತು 16 ಕೃಷಿ ಮಹಿಳೆಯರು) ವಿತರಿಸಲಾಯಿತು.
- ಅಖಿಲ ಭಾರತ ಸುಸಂಘಟಿತ ಕಶೇರುಕ ಪ್ರಾಣಿ ಪೀಡೆಗಳ ನಿರ್ವಹಣಾ ಸಂಶೋಧನಾ ಪ್ರಾಯೋಜನೆಯವರು ಬುಡಕಟ್ಟು ಉಪಯೋಜನೆ ಅಡಿಯಲ್ಲಿ ಕಶೇರುಕ ಪ್ರಾಣಿ ಪೀಡೆಗಳ ನಿರ್ವಹಣೆ ಕುರಿತು 2 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. 27ನೇ ಏಪ್ರಿಲ್, 2022 ರಂದು ರಾಮಕಲ್ಯಾಣ, ಲಕ್ಷ್ಮೀಪುರ ಹೋಬಳಿ, ರಾಮನಗರ ಜಿಲ್ಲೆಯಲ್ಲಿ ಆಯೋಜಿಸಿದ್ದರು. ಈ ಕಾರ್ಯಕ್ರಮದಲ್ಲಿ ಕುಡಗೋಲು, ಪಿಕಾಸಿ, ಬಲೆ, ಶೇಖರಣಾ ಡಬಿ (15 ಕೆಜಿ ಸಾಮರ್ಥ್ಯ), ಸನಿಕೆ, ಕೋಲಗುದ್ದಲಿ, ವರ್‌ವಾರಿ ಮತ್ತು ಮಮ್ಟಿಗಳನ್ನು 116 (62 ಪುರುಷರು ಮತ್ತು 54 ಮಹಿಳೆಯರು) ಫಲಾನುಭವಿಗಳಿಗೆ ವಿತರಿಸಲಾಯಿತು ಮತ್ತು 29ನೇ ಏಪ್ರಿಲ್, 2022 ರಂದು ಕಣುಮೇಲನದೊಡ್ಡಿ, ಹನ್ನೂರ್ ತಾಲ್ಲುಕು, ಚಾಮರಾಜನಗರ ಜಿಲ್ಲೆಯಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಈ ಕಾರ್ಯಕ್ರಮದಲ್ಲಿ 134 (71 ಪುರುಷರು ಮತ್ತು 63 ಮಹಿಳೆಯರು) ಫಲಾನುಭವಿಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.
- ಅಖಿಲ ಭಾರತ ಸುಸಂಘಟಿತ ಸೂರ್ಯಕಾಂತಿ ಸಂಶೋಧನಾ ಪ್ರಾಯೋಜನೆ ಇವರು ಭಾ.ಕೃ.ಸಂ.ಪ. – ಕೌಶಲ್ಯ ಅಭಿವೃದ್ಧಿ ಕೇಂದ್ರ ಬುಡಕಟ್ಟು ಉಪಯೋಜನೆ ಅಡಿಯಲ್ಲಿ ಹವಾಮಾನ ಬದಲಾವಣೆಯ ಪರಿಸ್ಥಿತಿಯಲ್ಲಿ ಎಣ್ಣೆಬೀಜ ಬೆಳೆಯುವ ಬುಡಕಟ್ಟು

## 3.9 Tribal Sub Plan /SC ST Programmes Organised

- AICRP on Cotton organised training programme on Integrated crop management in maize and distributed the inputs *viz.,* maize seeds, emamectin benzoate (Pesticide), small agriculture implements (Hand gudalli, plastic basin, mammty and big gudalli) to 30 beneficiaries (12 men and 18 farm women) of Chaluvarayanapura, Gundlupete taluk and training programme on Integrated crop management in ragi and distribution of inputs ragi and green gram seeds, small agriculture implements (Hand gudalli, plastic basin, mammty and big gudalli) to 40 beneficiaries (32 men and 8 farm women) of Chaluvarayanapura, Gundlupete taluk on 22, April, 2022 under Tribal sub plan programme.
- AICRP on Sorghum, organised training programme on Improved cultivation practices in Sorghum and distributed the inputs namely Sorghum seed (CSH-30), fertilizer, spade, kolu guddali, small guddali, plastic basin, plastic bins and tarpaulins under Schedule Caste Sub Plan programme at KVK, Chamarajanagara to 100 beneficiaries (84 men and 16 farm women) on 22nd April, 2022.
- AICRP on Vertebrate pest management organised training programme on Vertebrate Pest Management and distributed the inputs namely sickle, picaxe, wonder trap, storage container (15 kg capacity), spade, kolaguddli, weeder and mumti to 100 (62 men and 54 women) beneficiaries of Ramkalpalya, Lakshmipura hobli, Ramanagara district on 27th April, 2022 and 134 beneficiaries (71 men and 63 women) of Kanumelanadoddi, Hanur taluk of Chanarajanagara District under tribal sub plan on 29th April, 2022 under Schedule Caste Sub Plan programme.
- AICRP on Sunflower under ICAR-Skill Development Centre-TSP organised Training programme on Advanced production technologies of oil seed crops for enhancing the knowledge of

ರೈತರ ಜ್ಞಾನವನ್ನು ಹೆಚ್ಚಿಸಲು ತೈಲ ಬೀಜ ಬೆಳೆಗಳ ಸುಧಾರಿತ ಉತ್ಪಾದನಾ ತಂತ್ರಜ್ಞಾನಗಳ ಕುರಿತು ತರಬೇತಿ ಕಾರ್ಯಕ್ರಮವನ್ನು 18-19ನೇ ಮೇ, 2022 ರವರೆಗೆ ಜಿಕೆವಿಕೆಯಲ್ಲಿ ಆಯೋಜಿಸಿದ್ದರು.

- ಅಖಿಲ ಭಾರತ ಸುಸಂಘಟಿತ ಹತ್ತಿ ಬೆಳೆ ಸಂಶೋಧನಾ ಪ್ರಾಯೋಜನೆಯವರು 13ನೇ ಜೂನ್, 2022 ರಂದು ತೋಟಗಾರಿಕಾ ಬೆಳೆಗಳ ಸುಧಾರಿತ ಕೃಷಿ ಪದ್ಧತಿಗಳು ಕುರಿತು ಹೆಚ್.ಡಿ.ಕೋಟೆ, ಮಾದಾಪುರದಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಅಡಿಯಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಈ ಕಾರ್ಯಕ್ರಮದಲ್ಲಿ 100 ಜನ ರೈತರು ಭಾಗವಹಿಸಿದ್ದರು.

- ಪ್ರಾಯೋಜನಾ ಸಂಯೋಜಕರ ಘಟಕ-ಭಾ.ಕೃ.ಸಂ.ಪ.-ಅಖಿಲ ಭಾರತ ಸುಸಂಘಟಿತ ಸಿರಿ ಧಾನ್ಯಗಳ ಪ್ರಾಯೋಜನೆ, ಜಿಕೆವಿಕೆ ಇವರು ಭಾ.ಕೃ.ಸಂ.ಪ.- ಭಾರತೀಯ ಸಿರಿ ಧಾನ್ಯಗಳ ಸಂಶೋಧನಾ ಸಂಸ್ಥೆ, ಹೈದ್ರಾಬಾದ್, ಕೃಷಿ ವಿಜ್ಞಾನ ಕೇಂದ್ರ, ಚಿಕ್ಕಬಳ್ಳಾಪುರ ಮತ್ತು ವಿಸ್ತರಣಾ ಶಿಕ್ಷಣ ಘಟಕ, ಕೋಲಾರ ಇವರ ಸಹಯೋಗದೊಂದಿಗೆ ಹೆಚ್ಚಿನ ಇಳುವರಿಗಾಗಿ ಸಿರಿಧಾನ್ಯಗಳ ಸುಧಾರಿತ ಬೇಸಾಯ ಪದ್ಧತಿ ಕುರಿತು 23ನೇ ಜೂನ್, 2022 ರಂದು ಕೃಷಿ ವಿಜ್ಞಾನ ಕೇಂದ್ರ, ಚಿಕ್ಕಬಳ್ಳಾಪುರದಲ್ಲಿ ಆಯೋಜಿಸಿದ್ದರು ಹಾಗೂ ರಾಗಿ ತಳಿಗಳ (ಎಂ.ಆರ್-6, ಜಿಪಿಯು-67, ಜಿಪಿಯು-28 & ಜಿಪಿಯು-66) ಬೀಜಗಳು (1500 ಕೆಜಿ), ಎರೆಹುಳು ಗೊಬ್ಬರ (7500 ಕೆಜಿ), 9x12 ಚದರ ಅಡಿಯ 350 ಜಿಎಸ್‌ಎಂನ ಹೆಚ್‌ಡಿಪಿಇ ಟಾರ್ಪಾಲಿನ್ (100), ಉಳುಮೆ ಮಾಡುವ ಯಂತ್ರ (100 ಸಂಖ್ಯೆಗಳು), ಪ್ಲಾಸ್ಟಿಕ್ ಹ್ಯಾಂಡಲ್ ಬಾಂಡ್ಲಿ (100 ಸಂಖ್ಯೆಗಳು), ಒಂದು ತುದಿಯ ಕುಡಗೋಲು (100 ಸಂಖ್ಯೆಗಳು) ಮತ್ತು ಸನಿಕೆ (100 ಸಂಖ್ಯೆಗಳು) ಪರಿಶಿಷ್ಟ ಜಾತಿ ಉಪ ಯೋಜನೆ ಯಡಿಯಲ್ಲಿ 100 (75 - ರೈತರು ಮತ್ತು 25-ಮಹಿಳೆಯರಿಗೆ) ಫಲಾನುಭವಿಗಳಿಗೆ ವಿತರಿಸಲಾಯಿತು.

- ಅಖಿಲ ಭಾರತ ಸುಸಂಘಟಿತ ಖುಷ್ಕಿ ಬೇಸಾಯ ಸಂಶೋಧನಾ ಪ್ರಾಯೋಜನೆಯವರು 26ನೇ ಜೂನ್, 2022 ರಂದು ರಾಗಿ ಮತ್ತು ಅವರೆ ಸುಧಾರಿತ ಕೃಷಿ ಪದ್ಧತಿಗಳ ಕುರಿತು ಯರ್‌ಗಂಬಳ್ಳಿ ಹೆಗ್ಗವಾಡಿ, ಯೆಳಂದೂರು ತಾಲ್ಲೂಕ್, ಚಾಮರಾಜನಗರ ಜಿಲ್ಲೆಯಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಈ ಕಾರ್ಯಕ್ರಮದಲ್ಲಿ ಸುಧಾರಿತ ತಳಿಗಳಾದ ರಾಗಿ (ಎಂಎಲ್-365) ಮತ್ತು ಅವರೆ (ಹೆಚ್‌ಎ-4) ಬೀಜಗಳನ್ನು 103 ಫಲಾನುಭವಿಗಳಿಗೆ (79 - ರೈತರು ಮತ್ತು 24-ಮಹಿಳೆಯರಿಗೆ) ಪರಿಶಿಷ್ಟ ಜಾತಿ ಉಪ ಯೋಜನೆ ಯಡಿಯಲ್ಲಿ ವಿತರಿಸಲಾಯಿತು.

- ಅಖಿಲ ಭಾರತ ಸುಸಂಘಟಿತ ಖುಷ್ಕಿ ಬೇಸಾಯ ಸಂಶೋಧನಾ ಪ್ರಾಯೋಜನೆಯವರು 14ನೇ ಜುಲೈ, 2022 ರಂದು ರಾಗಿ, ಅವರೆ ಮತ್ತು ಅಲಸಂದೆ ಬೆಳೆಯ ಸುಧಾರಿತ ಕೃಷಿ ಪದ್ಧತಿಗಳ ಕುರಿತು ಚೊಕ್ಕಾಪುರ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಈ ಕಾರ್ಯಕ್ರಮದಲ್ಲಿ ಸುಧಾರಿತ ತಳಿಗಳಾದ ರಾಗಿ (ಎಂ.ಆರ್ 6), ಅವರೆ (ಹೆಚ್ ಎ-4) ಮತ್ತು ಅಲಸಂದೆ (ಪಿಜಿಸಿಪಿ-6) ಬೀಜಗಳನ್ನು 55 ಫಲಾನುಭವಿಗಳಿಗೆ (30 - ರೈತರು ಮತ್ತು 25-ಮಹಿಳೆಯರಿಗೆ) ಪರಿಶಿಷ್ಟ ಜಾತಿ ಉಪ ಯೋಜನೆ ಯಡಿಯಲ್ಲಿ ವಿತರಿಸಲಾಯಿತು.

oilseed growing tribe farmers under climate change condition from 18th to 19th May, 2022 at GKVK.

- AICRP on Cotton organised training programme on Improved cultivation practices for horticulture crops on 13th June 2022 at Madapura, H.D. Kote under SCSP programme. One hundred farmers attended the training programme.

- ICAR-AICRP on Small Millets, UAS, Bangalore in collaboration with ICAR-Indian Institute of Millet Research (IIMR), Hyderabad; KVK, Chikkaballapura and Extension Education Unit, Kolar organised training programme on Improved cultivation practices of small millets for higher yield and distributed the inputs viz., ragi (MR 6, GPU 67, GPU 28 & GPU 66) seeds (1500 kg), Vermi Compost (7500 kg), 350 GSM 9x12 Sq.Feet HDPE tarpaulin (100 nos), hand cultivator (100 nos), plastic handle bandli (100 nos), single edge sickle (100 nos) and spade (100 Nos) at KVK, Chikkaballapura under Schedule Caste Sub Plan programme to 100 beneficiaries (75 men and 25 women) on 23rd, June 2022.

- AICRP for Dryland Agriculture organised training programme on Improved cultivation practices of Finger millet and Field bean and distributed seeds of improved varieties of Finger millet (ML365) and Field bean (HA-4) to 103 beneficiaries (79 men and 24 women) of Yergamballi Heggavadi Yelandur taluk Chamarajanagara District, under Schedule Caste Sub Plan programme on 26th June, 2022.

- AICRP for Dryland Agriculture organised training programme on Improved cultivation practices in finger millet field bean and cowpea and distributed seeds of improved varieties of ragi (MR 6), Field bean (HA-4) and cowpea (PGCP-6) to 55 beneficiaries (30 men and 25 women) in Schedule Caste Sub Plan programme under NICRA at Chokkapura, Kolar taluk, Kolar District on 14th July, 2022.

- ಅಖಿಲ ಭಾರತ ಸುಸಂಘಟಿತ ಕೃಷಿ ಅರಣ್ಯ ಸಂಶೋಧನಾ ಪ್ರಾಯೋಜನೆ ಇವರು 15ನೇ ಜುಲೈ, 2022 ರಂದು ಎಂ.ಚೆರುಪಲ್ಲಿ ಗ್ರಾಮ, ಗೂಳುರು ಪೋಸ್ಟ್, ಬಾಗೆಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬುಡಕಟ್ಟು ಉಪಯೋಜನೆ ಅಡಿಯಲ್ಲಿ ಗಡಿ / ಬದುವಿನಲ್ಲಿ ಗಿಡಗಳನ್ನು ನೆಡುವ ಬಗ್ಗೆ ತರಬೇತಿ ಮತ್ತು ಸಸಿಗಳು ಹಾಗೂ ಇತರೆ ಕೃಷಿ ಪರಿಕರಗಳ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಿಲ್ವರ್ ಓಕ್, ಹೆಬ್ಬೆವು, ಮಹಾಗನಿ, ಮಾವು, ಗೋಡಂಬಿ, ನಿಂಬೆ ಮತ್ತು ತೆಂಗಿನ ಸಸಿಗಳನ್ನು ಹಾಗೂ ಕೃಷಿ ಪರಿಕರಗಳಾದ ಕೈ ಗುದ್ದಲಿ, ಸನಿಕೆ ಮತ್ತು ಬ್ಯಾಗ್‌ಗಳನ್ನು 100 (70 ರೈತರು ಮತ್ತು 30 ರೈತ ಮಹಿಳೆಯರು) ಫಲಾನುಭವಿಗಳಿಗೆ ವಿತರಿಸಲಾಯಿತು.

- ಅಖಿಲ ಭಾರತ ಸುಸಂಘಟಿತ ಖುಷ್ಕಿ ಬೇಸಾಯ ಸಂಶೋಧನಾ ಪ್ರಾಯೋಜನೆಯವರು 18ನೇ ಜುಲೈ, 2022 ರಂದು ರಾಗಿ ಮತ್ತು ಅವರೆಯಲ್ಲಿ ಅಂತರ ಬೆಳೆ (8:1) ಕುರಿತು ತರಬೇತಿ ಕಾರ್ಯಕ್ರಮವನ್ನು ಮತ್ತು ರಾಗಿ (ಎಂ.ಎಲ್–365) ಹಾಗು ಅವರೆ (ಹೆಚ್‌ಎ–4) ಬೆಳೆಯ ಸುಧಾರಿತ ತಳಿಗಳ ಬೀಜಗಳನ್ನು 103 (69 – ರೈತರು ಮತ್ತು 38–ಮಹಿಳೆಯರಿಗೆ) ಫಲಾನುಭವಿಗಳಿಗೆ ಪರಿಶಿಷ್ಟ ಜಾತಿ ಉಪ ಯೋಜನೆಯಡಿಯಲ್ಲಿ ವಿತರಿಸಲಾಯಿತು.

- ಜೇನುಕೃಷಿ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ ಇವರು ಕೌಶಲ್ಯ ಅಭಿವೃದ್ಧಿ ಕೇಂದ್ರ ಮತ್ತು ಅಖಿಲ ಭಾರತ ಸುಸಂಘಟಿತ ಜೇನುನೊಣಗಳು ಮತ್ತು ಪರಾಗಸ್ಪರ್ಶಿಗಳ ಸಂಶೋಧನಾ ಪ್ರಾಯೋಜನೆ ಇವರ ಸಹಯೋಗದೊಂದಿಗೆ ಪರಿಶಿಷ್ಟ ಪಂಗಡದ ರೈತರ ಜೀವನಾಧಾರ ಭದ್ರತೆಗಾಗಿ ವಾಣಿಜ್ಯ ಜೇನುಸಾಕಣೆ ಅಡಿಯಲ್ಲಿ ವೈಜ್ಞಾನಿಕ ಜೇನುಸಾಕಣೆ ಕುರಿತು 20 ರಿಂದ 21ನೇ ಜುಲೈ 2022ರ ವರೆಗೆ ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆಯಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಜೇನು ಪೆಟ್ಟಿಗೆ, ಜೇನುನೊಣ ಧೂಮಪಾನಿ, ಜೇನು ಮುಸುಕು ಮತ್ತು ತರಬೇತಿ ಕಿಟ್‌ಗಳನ್ನು ಫಲಾನುಭವಿಗಳಿಗೆ ವಿತರಿಸಲಾಯಿತು.

- ಅಖಿಲ ಭಾರತ ಸುಸಂಸಂಘಟಿತ ಕೃಷಿ ಅರಣ್ಯ ಸಂಶೋಧನಾ ಪ್ರಾಯೋಜನೆ ಇವರು 26ನೇ ಜುಲೈ, 2022, ಪರಿಶಿಷ್ಟ ಜಾತಿ ಉಪ ಯೋಜನೆಯಡಿಯಲ್ಲಿ ಗಡಿ / ಬದುವಿನಲ್ಲಿ ಗಿಡ ನೆಡುವ ಬಗ್ಗೆ ಮತ್ತು ಪೂರ್ವ ಒಣ ವಲಯದ ಕೃಷಿ ಪದ್ಧತಿಗಳಲ್ಲಿ ವಿವಿಧ ಕೃಷಿ ಅರಣ್ಯ ವ್ಯವಸ್ಥೆಗಳ ಪ್ರಾಮುಖ್ಯತೆಯ ಕುರಿತು ಜಾಗೃತಿ ಕಾರ್ಯಕ್ರಮ ಹಾಗೂ ಸಸಿಗಳು ಮತ್ತು ಇತರೆ ಕೃಷಿ ಪರಿಕರಗಳ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಿಲ್ವರ್ ಓಕ್, ಹೆಬ್ಬೆವು, ಮಹಾಗನಿ, ತೆಂಗು, ಮಾವು, ಗೋಡಂಬಿ, ನಿಂಬೆ ಸಸಿಗಳನ್ನು ಮತ್ತು ಕೃಷಿ ಪರಿಕರಗಳಾದ ಕೈಗುದ್ದಲಿ, ಕುಡಗೋಲು, ಬ್ಯಾಸ್ಕೆಟ್ಸ್ ಮತ್ತು ವರ್‌ವಾರಿಯನ್ನು ಪರಿಶಿಷ್ಟ ಜಾತಿ ಉಪ ಯೋಜನೆ ಕಾರ್ಯಕ್ರಮದ ಅಡಿಯಲ್ಲಿ ಪರಿಶಿಷ್ಟ ಜಾತಿಯ 75 ಫಲಾನುಭವಿಗಳಿಗೆ ವಿತರಿಸಲಾಯಿತು.

- ಅಖಿಲ ಭಾರತ ಸುಸಂಘಟಿತ ದೀರ್ಘಾವಧಿ ರಸಗೊಬ್ಬರ ಪ್ರಯೋಗಗಳ ಸಂಶೋಧನಾ ಪ್ರಾಯೋಜನೆ ಮತ್ತು ಅಖಿಲ ಭಾರತ ಸುಸಂಘಟಿತ ಸಮರ್ಥ ಬೆಳೆಗಳ ಸಂಶೋಧನಾ

- AICRP on Agroforestry organised training program on bund and boundary plantation and distributed the saplings of silver oak, melia dubia, mahogany, mango, cashew, lemon and coconut seedlings and agricultural tools viz., hand gudali, sickles and baskets to 100 beneficiaries (70 men and 30 women) under Tribal subplan at M. Cherlupalli village, Guluru post, Bagepalli taluk, Chikkaballapur district on 15th July, 2022.

- AICRP for Dryland Agriculture organised training programme on Intercropping of finger millet and Field bean (8:1) and distributed the seeds of improved varieties of ragi (ML365) and field bean (HA-4) to 103 beneficiaries (69 men and 38 women) under -Schedule Caste Sub Plan programme at Yergamballi, Heggavadi Yelandur taluk, Chamarajanagara District on 18th July, 2022.

- Department of Apiculture, UAS, GKVK, Bangalore in collaboration with Skill Development Centre and All India Coordinated Research Project on Honey Bees & Pollinators organised training programme on Scientific Beekeeping under Commercial Apiculture for Livelihood security of Scheduled Tribe farmers (30 farmers) from 20th to 21st, July 2022 at UAS, GKVK. Bee hives, bee smoker, bee veil and training kits were distributed to the trainees.

- AICRP on Agroforestry organised awareness programme on importance of Bund/Boundary plantation and different Agroforestry systems in eastern dry zone agricultural practices and distributed silver oak, melia dubia, mahogany, mango, cashew, lemon and coconut seedlings and agricultural implements viz., hand guddali, sickles, baskets and varavari to 75 Schedule caste beneficiaries under Schedule Caste Sub Plan programme on 26th July 2022.

- AICRP on Long Term Fertilizer Experiments, & Potential Crops, Department of Agriculture, GOK and Indian Farmers Fertilizers Cooperative Ltd.

ಪ್ರಾಯೋಜನೆ ಇವರು ಕೃಷಿ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಭಾರತದ ರೈತರ ರಸಗೊಬ್ಬರ ಸಹಕಾರಿ ನಿಯಮಿತ, ಮೈಸೂರು ಇವರುಗಳ ಸಹಯೋಗದೊಂದಿಗೆ 2ನೇ ಆಗಸ್ಟ್, 2022 ರಂದು ಬೆಳೆಗಳ ಉತ್ಪಾದಕತೆ ಮತ್ತು ರೈತರ ಆದಾಯವನ್ನು ಹೆಚ್ಚಿಸುವಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ ಅಭ್ಯಾಸಗಳು ಮತ್ತು ಮಣ್ಣು ಪರೀಕ್ಷೆ ಆಧಾರಿತ ರಸಗೊಬ್ಬರಗಳ ಶಿಫಾರಸ್ಸು ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತ್ತು ಮತ್ತು ರಸಗೊಬ್ಬರ, ರಾಗಿ (ಎಂ.ಆರ್.6) ಮತ್ತು ನ್ಯಾನೋ ಯೂರಿಯಾ (ಒಂದು ಎಕರೆಗೆ ಸಾಕಾಗುವಷ್ಟು) ಗಳನ್ನು ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಮಸನಾಪುರ ಗ್ರಾಮದಲ್ಲಿ ಪರಿಶಿಷ್ಟ ಪಂಗಡ ಘಟಕ (ಎಸ್‌ಟಿಸಿ) ಕಾರ್ಯಕ್ರಮದಡಿಯಲ್ಲಿ 60 ಫಲಾನುಭವಿಗಳಿಗೆ ವಿತರಿಸಲಾಯಿತು.

- ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಭಾ.ಕೃ.ಸಂ.ಪ.– ಕೌಶಲ ಅಭಿವೃದ್ಧಿ ಕೇಂದ್ರ ಮತ್ತು ಜಲ ತಂತ್ರಜ್ಞಾನ ಕೇಂದ್ರ ಇವರು ಕ್ಷೇತ್ರ ಬೆಳೆಗಳಲ್ಲಿ ನೀರು ಮತ್ತು ಪೋಷಕಾಂಶಗಳ ಬಳಕೆಯ ದಕ್ಷತೆಯನ್ನು ಹೆಚ್ಚಿಸಲು ನೀರಾವರಿಯಲ್ಲಿ ಹೊಸ ಆಯಾಮಗಳ ಕುರಿತು ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮವನ್ನು 5–9 ನೇ ಸೆಪ್ಟಂಬರ್, 2022 ರವರೆಗೆ ವಿ.ಸಿ. ಫಾರಂ, ಮಂಡ್ಯದಲ್ಲಿ ಭಾ.ಕೃ.ಸಂ.ಪ.– ಬುಡಕಟ್ಟು ಉಪಯೋಜನೆ ಅಡಿಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಿದ್ದು, ಈ ಕಾರ್ಯಕ್ರಮದಲ್ಲಿ 34 ಪುರುಷರು ಮತ್ತು ಒಬ್ಬರು ಕೃಷಿ ಮಹಿಳೆ ಭಾಗವಹಿಸಿದ್ದರು.
- ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಭಾ.ಕೃ.ಸಂ.ಪ.– ಕೌಶಲ ಅಭಿವೃದ್ಧಿ ಕೇಂದ್ರ ಮತ್ತು ಅಖಿಲ ಭಾರತ ಸುಸಂಘಟಿತ ಕೊಯ್ಲಿನೋತ್ತರ ಇಂಜನಿಯರಿಂಗ್ ಮತ್ತು ತಂತ್ರಜ್ಞಾನ ಸಂಶೋಧನಾ ಪ್ರಾಯೋಜನೆ ಇವರು ಮೆಕ್ಕೆಜೋಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಕುರಿತು ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮವನ್ನು 28–29ನೇ ಸೆಪ್ಟಂಬರ್, 2022 ರವರೆಗೆ ಕೃಷಿ ವಿಜ್ಞಾನ ಕೇಂದ್ರ, ಚಾಮರಾಜನಗರದಲ್ಲಿ ಭಾ.ಕೃ.ಸಂ.ಪ.– ಬುಡಕಟ್ಟು ಉಪಯೋಜನೆ ಅಡಿಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಿದ್ದು, ಈ ಕಾರ್ಯಕ್ರಮದಲ್ಲಿ 25 ರೈತರು ಭಾಗವಹಿಸಿದ್ದರು.
- ಅಖಿಲ ಭಾರತ ಸುಸಂಘಟಿತ ಹವಾಮಾನ ಸಂಶೋಧನಾ ಪ್ರಾಯೋಜನೆ ಇವರು 21ನೇ ಅಕ್ಟೋಬರ್, 2022 ರಂದು ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಗೌಡಹಳ್ಳಿಯಲ್ಲಿ ಹಾಲಿನ ಡಬ್ಬಗಳನ್ನು 34 ಫಲಾನುಭವಿಗಳಿಗೆ ಹಾಗೂ ಸೈಕಲ್ ವೀಡರ್ / ಕೈ ಕಳೆ ತೆಗೆಯುವ ಯಂತ್ರಗಳನ್ನು 45 ಫಲಾನುಭವಿಗಳಿಗೆ ಪರಿಶಿಷ್ಟ ಜಾತಿ ಉಪ ಯೋಜನೆ ಕಾರ್ಯಕ್ರಮದಡಿಯಲ್ಲಿ ವಿತರಿಸಲಾಯಿತು.
- ಅಖಿಲ ಭಾರತ ಸುಸಂಘಟಿತ ಕಳೆ ನಿರ್ವಹಣೆ ಸಂಶೋಧನಾ ಪ್ರಾಯೋಜನೆಯವರು ಸೈಕಲ್ ಕಳೆ ತೆಗೆಯುವ ಯಂತ್ರಗಳನ್ನು 34 ಫಲಾನುಭವಿಗಳಿಗೆ ಮತ್ತು ಸ್ಪ್ರೇಯರ್‌ಗಳು (4), ಸಣ್ಣ ಕುಡುಗೋಲು (40), ಕೋಲ್ ಗುದ್ದಲಿ (4), ವರವಾರಿ (60) ಗಳನ್ನು 10ನೇ ನವೆಂಬರ್, 2022 ರಂದು ಚೊಕ್ಕಾಪುರ (ಗ್ರಾಮ) ವೇಮಗಲ್ (ಹೋಬಳಿ) ಕೋಲಾರ (ಜಿಲ್ಲೆ) ಯಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ ಕಾರ್ಯಕ್ರಮದಡಿಯಲ್ಲಿ 40 ಫಲಾನುಭವಿಗಳಿಗೆ ವಿತರಿಸಿದರು.

(IFFCO), Mysore organised training programme on Integrated Nutrient Management practices and soil test based fertilizers recommendation in enhancing productivity of crops and farmer's income and distributed Agricultural inputs viz., fertilizers, ragi seeds (MR-1) and nano urea (sufficient for one acre to each beneficiaries) to 60 beneficiaries under Scheduled Tribe Component (STC) programme at Masanapura village of Yelandur taluka in Chamarajanagara District on 2nd August, 2022.

- UAS, Bangalore, ICAR-Skill development centre and Water technology centre organised human resource development programme on New dimensions in irrigation for enhancing water and nutrient use efficiency in field Crops from 5th to 9th Sep., 2022 sponsored under ICAR -Tribal sub plan at ZARS, VC farm, Mandya. 34 men and one farm women partcipated in the programme.
- UAS, Bangalore, ICAR-Skill development centre, AICRP on Post-harvest Engineering and Technology and ICAR-Krishi Vigyan Kendra, Chamarajanagara organised Human resource development programme on maize processing and value addition sponsored under ICAR -Tribal sub plan on 28th and 29th September 2022 at KVK, Chamarajanagara. 25 farmers participated in the programme
- AICRP on Agrometereology distributed the inputs namely milk can to 34 beneficiaries, cycle weeder/ hand weeder to 45 beneficiaries under Schedule Caste Sub Plan programme at Gowdahalli, Yelandur Taluk, Chamarajanagara district on 21st October, 2022.
- AICRP on weed management distributed inputs Cycle weeders to 34 beneficiaries, cycle weeders (4), Sprayers (4), Small sickles (40), Kol guddali (4), Varavari (60) to 40 beneficiaries under Schedule Caste Sub Plan programme at Chokkapura village, Vemgal hobli, Kolar district on 10th November, 2022.

- ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಭಾ.ಕೃ.ಸಂ.ಪ.– ಕೌಶಲ ಅಭಿವೃದ್ಧಿ ಕೇಂದ್ರ ಮತ್ತು ಅಖಿಲ ಭಾರತ ಸುಸಂಘಟಿತ ಕೊಯ್ಲಿನೋತ್ತರ ಇಂಜನಿಯರಿಂಗ್ ಮತ್ತು ತಂತ್ರಜ್ಞಾನ ಸಂಶೋಧನಾ ಪ್ರಾಯೋಜನೆ, ಸಿರಿಧಾನ್ಯಗಳ ಉತ್ಕೃಷ್ಟತಾ ಕೇಂದ್ರ ಮತ್ತು ರೈತ ತರಬೇತಿ ಕೇಂದ್ರ ಇವರುಗಳ ಸಹಯೋಗದೊಂದಿಗೆ ಪೋಷಕಾಂಶಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಕುರಿತು 9–10ನೇ ನವೆಂಬರ್, 2022 ರವರೆಗೆ ರೈತ ತರಬೇತಿ ಕೇಂದ್ರ, ಜಿಕೆವಿಕೆಯಲ್ಲಿ ಭಾ.ಕೃ.ಸಂ.ಪ.– ಬುಡಕಟ್ಟು ಉಪಯೋಜನೆ ಅಡಿಯಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದ್ದು, ಈ ಕಾರ್ಯಕ್ರಮದಲ್ಲಿ 20 ರೈತರು ಭಾಗವಹಿಸಿದ್ದರು.
- ಅಖಿಲ ಭಾರತ ಸುಸಂಘಟಿತ ಹರಳು ಸಂಶೋಧನಾ ಪ್ರಾಯೋಜನೆ ಇವರು ಸುಧಾರಿತ ಹರಳು ತಳಿಗಳು ಮತ್ತು ಉತ್ಪಾದನಾ ತಂತ್ರಜ್ಞಾನಗಳ ಕುರಿತು 17ನೇ ನವೆಂಬರ್, 2022 ರಂದು ವೆಂಕಟಾಪುರ (ಗ್ರಾಮ) ಬಾಗೇಪಲ್ಲಿ (ತಾಲ್ಲೂಕು), ಚಿಕ್ಕಬಳ್ಳಾಪುರ (ಜಿಲ್ಲೆ) ಯಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ ಕಾರ್ಯಕ್ರಮದಡಿಯಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಹರಳು ಮತ್ತು ರಾಗಿ ಹಾಗೂ ಟಾರ್ಪಾಲಿನ್, ಸವರು ಕತ್ತರಿ, ಸನಿಕೆ, ವರವಾರಿ, ಕೀಟನಾಶಕ ಮತ್ತು ಶಿಲೀಂಧ್ರನಾಶಕಗಳನ್ನು 45 ಫಲಾನುಭವಿಗಳಿಗೆ (5 ಪುರುಷರು ಮತ್ತು 40 ಮಹಿಳೆಯರು) ವಿತರಿಸಲಾಯಿತು.
- ಅಖಿಲ ಭಾರತ ಸುಸಂಘಟಿತ ಹರಳು ಸಂಶೋಧನಾ ಪ್ರಾಯೋಜನೆ ಇವರು ಸುಧಾರಿತ ಹರಳು ತಳಿಗಳು ಮತ್ತು ಉತ್ಪಾದನಾ ತಂತ್ರಜ್ಞಾನಗಳ ಕುರಿತು 24ನೇ ನವೆಂಬರ್, 2022 ರಂದು ಬೈರಗಾನಹಳ್ಳಿ (ಗ್ರಾಮ) ಶಿಡ್ಲಘಟ್ಟ (ತಾಲ್ಲೂಕು), ಚಿಕ್ಕಬಳ್ಳಾಪುರ (ಜಿಲ್ಲೆ) ಯಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ ಕಾರ್ಯಕ್ರಮದಡಿಯಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಹರಳು ಮತ್ತು ರಾಗಿ ಹಾಗೂ ಟಾರ್ಪಾಲಿನ್, ಸವರು ಕತ್ತರಿ, ಸನಿಕೆ, ವರವಾರಿ, ಕೀಟನಾಶಕ ಮತ್ತು ಶಿಲೀಂಧ್ರನಾಶಕಗಳನ್ನು 55 ಫಲಾನುಭವಿಗಳಿಗೆ (10 ಪುರುಷರು ಮತ್ತು 45 ಮಹಿಳೆಯರು) ವಿತರಿಸಲಾಯಿತು.
- ಅಖಿಲ ಭಾರತ ಸುಸಂಘಟಿತ ಜೇನುನೊಣ ಮತ್ತು ಪರಾಗಸ್ಪರ್ಶಿಗಳ ಸಂಶೋಧನಾ ಪ್ರಾಯೋಜನೆ ಇವರು ವೈಜ್ಞಾನಿಕ ಜೇನು ಸಾಕಾಣಿಕೆ ಕುರಿತು 20ನೇ ಡಿಸೆಂಬರ್, 2022 ರಂದು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದ್ದರು ಮತ್ತು ಜೇನುಸಾಕಣೆ ಉಪಕರಣಗಳಾದ ಜೇನುಗೂಡುಗಳು, ಜೇನುನೊಣಗಳ ಕಾಲೋನಿ – ಸ್ಮೋಕರ್ ಸ್ಟ್ಯಾಂಡ್, ಜೇನು ತೆಗೆಯುವ ಸಾಧನ ಹಾಗು ಜೇನು ಸಂಗ್ರಹ ಟ್ಯಾಂಕ್‌ಗಳನ್ನು 44 ಫಲಾನುಭವಿಗಳಿಗೆ (33 ಪುರುಷರು ಮತ್ತು 11 ಮಹಿಳೆಯರು) ವಿತರಿಸಲಾಯಿತು.
- ಅಖಿಲ ಭಾರತ ಸುಸಂಘಟಿತ ಮೇವು ಬೆಳೆಗಳು ಹಾಗೂ ಬಳಕೆ ಸಂಶೋಧನಾ ಪ್ರಾಯೋಜನೆ, ವಲಯ ಕೃಷಿ ಸಂಶೋಧನಾ ಕೇಂದ್ರ, ವಿ.ಸಿ ಫಾರಂ, ಮಂಡ್ಯ ಇವರು ಗಿರಿಜನ ಅಭಿವೃದ್ಧಿ ಯೋಜನೆ ಅನುಷ್ಠಾನವನ್ನು ಸಮತಾ ಜನ ಶಿಕ್ಷಣ ಹಾಗೂ ಅಭಿವೃದ್ಧಿ ಸಂಘ ಸಂಸ್ಥೆ, ಮೈಸೂರು ಇವರ ಸಂಯುಕ್ತ ಆಶ್ರಯದಲ್ಲಿ ಮೇವು ಬೆಳೆ ಉತ್ಪಾದನಾ ತಂತ್ರಜ್ಞಾನಗಳು ಮತ್ತು ಮೇವಿನ ಬೆಳೆಗಳ ಬೀಜಗಳ ವಿತರಣೆ, ಮೇವಿನ ಜೋಳದ ತಳಿಗಳ ಕುರಿತು ತರಬೇತಿ ಕಾರ್ಯಕ್ರಮವನ್ನು 13ನೇ ಜನವರಿ, 2023 ರಂದು ನಂಜನಗೂಡು ತಾಲ್ಲೂಕು, ಹಲ್ಲಳ್ಳಿ ಹೋಬಳಿ,

- UAS, Bangalore, ICAR-Skill development centre, AICRP on Post harvest Engineering and Technology, Centre for excellence on nutri-cereals and Farmers training institute organised training programme on Processing and Value addition of nutri-cereals sponsored under ICAR -Tribal sub plan on 9th and 10th November 2022 at Farmers training institute, 20 farmers participated in the programme.
- AICRP on castor organised training programme on Improved Castor varieties and production technologies and distribution of inputs-castor & ragi seeds, tarpaulin, secature, varavari, insectiside and fungicide under Schedule Caste Sub Plan programme at Venkatapur (Village) Bagepalli (Taluk), Chickkballapur (District) on 17th November, 2022 to 45 benefeciaries (5 men and 40 women).
- AICRP on castor organised training programme on Improved Castor varieties and Production technologies and distribution of inputs Castor and Ragi seeds, Tarpaulin, Secature, varavari, insectiside and fungicide under Schedule Caste Sub Plan programme at Bairaganahalli (Village) Shidlagatta Taluk, Chickkballapur (District) on 24th November,2022 to 55 benefeciaries (10 men and 45 women).
- AICRP on Honeybees and Pollinators organised training Programme on Scientific bee keeping and distributed inputs bee hives, bee colonies, beekeeping equipment – smoker, stand, honey extractor and honey storage tank to 44 beneficiaries (33 men and 11 women) on 20th December, 2022.
- AICRP on forage crops and utilization, ZARS, V.C. Farm, Mandya in collaboration with Samatha Peoples Education for Development Society (NGO), Mysore organised a training programme on Fodder crop Production technologies and distribution of Seeds of fodder crops viz., fodder maize variety African Tall, Multi-cut fodder sorghum variety CoFS-29, Drumstick variety PKM-1, fodder tree seeds of Agase and

ಡೋರ್ನಹಳ್ಳಿ ಕಾಲೋನಿಯಲ್ಲಿ ಆಯೋಜಿಸಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ ಆಫ್ರಿಕನ್ ಟಾಲ್, ಬಹು ಕಟಾವಿನ ಮೇವಿನ ತಳಿ ಸಿಒಎಫ್ಎಸ್–29, ನುಗ್ಗೆ ತಳಿ ಪಿಕೆಎಂ–1, ಅಗಸೆ ಬೀಜಗಳು ಮತ್ತು ಕೃಷಿ ಉಪಕರಣಗಳಾದ ಪ್ಲಾಸ್ಟಿಕ್ ಕ್ರೇಟ್ ಹಾಗು ಕುಡಗೋಲುಗಳನ್ನು 50 ಫಲಾನುಭವಿಗಳಿಗೆ ವಿತರಿಸಲಾಯಿತು.

agricultural implements viz., plastic crates, sickles under Tribal Sub Plan programme to 50 beneficiaries at Dornahalli Colony, Hullalli hobli, Nanjanagud Tq, Mysore district on 13th January, 2023.

- ಅಖಿಲ ಭಾರತ ಸುಸಂಘಟಿತ ಸಸ್ಯ ಜಂತುಹುಳು ಸಂಶೋಧನಾ ಪ್ರಾಯೋಜನೆಯವರು ತೋಟಗಾರಿಕಾ ಬೆಳೆಗಳಲ್ಲಿ ಜಂತುಹುಳು ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮವನ್ನು ಮತ್ತು 30 ಫಲಾನುಭವಿಗಳಿಗೆ ಎಲ್ಇಡಿ ಟಾರ್ಚ್, ಪಿವಿಸಿ ಬಾಂಡ್ಲಿ, ಕುಡಗೋಲು, ಸಲಿಕೆ ಸುತ್ತಿಗೆ, ಉಳಿ ಮತ್ತು ಸುತ್ತಿಗೆಯನ್ನು ವಿತರಿಸುವ ಕಾರ್ಯಕ್ರಮವನ್ನು ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಕುರಿಲಿಂಗಯ್ಯನದೊಡ್ಡಿಯಲ್ಲಿ 31ನೇ ಜನವರಿ 2023 ರಂದು ಆಯೋಜಿಸಿದ್ದರು.

- AICRP on Nematodes organized training programme on nematode management in horticultural crops and distribution of inputs LED tourch, PVC Bandli, Sickle, Salike Hammer, Monkey fork chisel and Pickaxe hammer to 30 beneficiaries at Kurilingayyanadoddi, Magadi Taluk, Ramanagara district, Karnataka on 31st January, 2023

- ಅಖಿಲ ಭಾರತ ಸುಸಂಘಟಿತ ಜೇನುನೊಣ ಮತ್ತು ಪರಾಗಸ್ಪರ್ಶಿಗಳ ಸಂಶೋಧನಾ ಪ್ರಾಯೋಜನೆ, ಅಖಿಲ ಭಾರತ ಸುಸಂಘಟಿತ ಕೀಟಪೀಡೆ ಸಂಧಿಪದಿಗಳ ಸಂಯೋಜಿತ ಸಂಶೋಧನಾ ಪ್ರಾಯೋಜನೆ ಮತ್ತು ಅಖಿಲ ಭಾರತ ಸುಸಂಘಟಿತ ಕಶೇರುಕ ಪ್ರಾಣಿ ಪೀಡೆಗಳ ನಿರ್ವಹಣಾ ಸಂಶೋಧನಾ ಪ್ರಾಯೋಜನೆ ಇವರು 17ನೇ ಫೆಬ್ರವರಿ, 2023 ರಂದು ರಂಗಸಮುದ್ರ, ಪಾವಗಡ ತಾಲ್ಲೂಕು, ತುಮಕೂರಿನಲ್ಲಿ ಬುಡಕಟ್ಟು ಉಪ ಯೋಜನೆಯಡಿ ಒಂದು ದಿನದ ತರಬೇತಿ ಕಾರ್ಯಕ್ರಮ ಮತ್ತು ಪರಿಕರಗಳ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಜೇನು ಸಾಕಾಣಿ ಉಪಕರಣಗಳು, ಟಾರ್ಪಲಿನ್, ಶೇಂಗಾ ಬೀಜ ಮತ್ತು ಕೃಷಿ ಪರಿಕರಗಳನ್ನು 125 ಫಲಾನುಭವಿಗಳಿಗೆ ವಿತರಿಸಲಾಯಿತು.

- AICRP on Honey Bees & Pollinators, AINP on Soil Arthropod Pest and AINP on Vertebrate Pest Management organised one day training programme cum input distribution under Tribal Sub Plan on 17th February, 2023 at Rangasamudra, Pavagada taluk, Tumkur. Beekeeping kits, tarpaulins, groundnut seeds, farm implements were distributed to 125 beneficiaries.

- ಅಖಿಲ ಭಾರತ ಸುಸಂಘಟಿತ ಕೃಷಿ ಯಂತ್ರೋಪಕರಣಗಳ ಸಂಶೋಧನಾ ಪ್ರಾಯೋಜನೆ, ವಲಯ ಕೃಷಿ ಸಂಶೋಧನಾ ಕೇಂದ್ರ, ವಿ.ಸಿ. ಫಾರಂ, ಮಂಡ್ಯ ಮತ್ತು ಕೌಶಲ್ಯ ಅಭಿವೃದ್ಧಿ ಕೇಂದ್ರ, ಭಾರತೀಯ ಕೃಷಿ ಅನುಸಂಧಾನ ಪರಿಷತ್ತು, ನವದೆಹಲಿ ಇವರ ಸಂಯುಕ್ತಾಶ್ರಯದಲ್ಲಿ ಬುಡಕಟ್ಟು ಉಪಯೋಜನೆಯ ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮದ ಅಡಿಯಲ್ಲಿ ಕಬ್ಬಿನ ಬೇಸಾಯದಲ್ಲಿ ಯಾಂತ್ರೀಕರಣ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 6–10 ನೇ ಮಾರ್ಚ್ 2023 ರವರೆಗೂ ವಲಯ ಕೃಷಿ ಸಂಶೋಧನಾ ಕೇಂದ್ರ, ವಿ.ಸಿ.ಫಾರಂ, ಮಂಡ್ಯದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಕ್ರಮದಲ್ಲಿ 15 ರೈತರು ಮತ್ತು 10 ರೈತ ಮಹಿಳೆಯರು ಭಾಗವಹಿಸಿದ್ದರು.

- AICRP on Farm Implements and Machinery, ZARS, V.C. Farm, Mandya in collaboration with Skill Development Centre, ICAR, ICAR-New Delhi under Training & Capacity Building (TR&CB) of ICAR SC-SP organized five days training programme on Mechanization in Sugarcane from 6th-10th March 2023 at Zonal Agricultural Research Station, V.C. Farm, Mandya. 15 farmers and 10 farm women are participated the training programme.

- ಅಖಿಲ ಭಾರತ ಸುಸಂಘಟಿತ ಕಬೀಜ (ಬೆಳೆಗಳು) ಸಂಶೋಧನಾ ಪ್ರಾಯೋಜನೆ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು ಇವರ ವತಿಯಿಂದ ಬುಡಕಟ್ಟು ಜನಾಂಗದ ಅಭಿವೃದ್ಧಿ ಯೋಜನೆಯಡಿ ತರಬೇತಿ ಹಾಗೂ ಕೃಷಿ ಪರಿಕರಗಳ ವಿತರಣಾ ಕಾರ್ಯಕ್ರಮವನ್ನು ದಿನಾಂಕ: 24.03.2023 ರಂದು ದೊಡ್ಡಹಳ್ಳಿ ಗ್ರಾಮ, ಪಾವಗಡ ತಾಲೂಕಿನಲ್ಲಿ ಆಯೋಜಿಸಲಾಗಿತ್ತು. ಟಾರ್ಪಾಲಿನ್, ವರವಾರಿ, ಬಾಂಡ್ಲಿ, ಸನಿಕೆ ಮತ್ತು ಕುಡಗೋಲುಗಳನ್ನು ಪಾವಗಡ ತಾಲ್ಲೂಕಿನ ಸುತ್ತಮುತ್ತಲಿನ ಬುಡಕಟ್ಟು ಜನಾಂಗದ 300 ಫಲಾನುಭವಿಗಳಿಗೆ ವಿತರಿಸಲಾಯಿತು.

- AICRP on Seed (Crops) organized training on recent techniques in seed production under Tribal Sub Plan programme and distributed agricultural implements- one tarpaulin, one varavari, one bandli, one sanike and one sickle at Doddahalli village, Pavagada taluk, Tumkuru District on 24th March, 2023 for 300 tribal beneficiaries.

### 3.10 ಭಾರತೀಯ ಕೃಷಿ ಅನುಸಂಧಾನ ಪರಿಷತ್–ಉನ್ನತ ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕೇಂದ್ರ

ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ರಾಷ್ಟ್ರೀಯ ಕೃಷಿ ಉನ್ನತ ಶಿಕ್ಷಣ ಯೋಜನೆಯ (ಎನ್.ಎ.ಹೆಚ್.ಇ.ಪಿ.) ಉನ್ನತ ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕೇಂದ್ರ ಯೋಜನೆಯಡಿಯಲ್ಲಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಾಲ್ಕು ನಿರ್ದಿಷ್ಟ ಕ್ಷೇತ್ರಗಳಲ್ಲಿ ಹೊಂದಾಣಿಕೆ ಕೃಷಿಯಲ್ಲಿನ ಮುಂದಿನ ಪೀಳಿಗೆಯ ತಂತ್ರಜ್ಞಾನಗಳ ಕಾರ್ಯಕ್ರಮವನ್ನು 2018–19ರಲ್ಲಿ ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ನಾಲ್ಕು ಉದ್ದೇಶಗಳಿವೆ, ಇದರಲ್ಲಿ ಸಂಶೋಧನಾ ಘಟಕ, ಕೌಶಲ್ಯ ಅಭಿವೃದ್ಧಿ, ತರಬೇತಿ ಮತ್ತು ಪ್ರಾತ್ಯಕ್ಷಿಕೆಗಳು ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮೂಲಸೌಕರ್ಯಗಳನ್ನು ಬಲಪಡಿಸುವುದಾಗಿದೆ. ಉನ್ನತ ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕೇಂದ್ರ ಯೋಜನೆಯಡಿಯಲ್ಲಿ ಆಧುನಿಕ ಮೂಲಸೌಕರ್ಯ ಸೌಲಭ್ಯಗಳನ್ನು ರಚಿಸಲಾಗಿದೆ ಮತ್ತು ಉಪನ್ಯಾಸ ಕಾರ್ಯಾಗಾರಗಳು ಮತ್ತು ಪ್ರಾಯೋಗಿಕ ಚಟುವಟಿಕೆಗಳಂತಹ ಅನೇಕ ತರಬೇತಿ ಕಾರ್ಯಕ್ರಮಗಳನ್ನು ಅಧ್ಯಾಪಕರು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನಡೆಸಲಾಯಿತು. ಕಾರ್ಯಕ್ರಮವು 14 ಅಧ್ಯಾಪಕರು ಮತ್ತು ಐದು ಪಿಜಿ ವಿದ್ಯಾರ್ಥಿಗಳಿಗೆ ಅಂತರರಾಷ್ಟ್ರೀಯ ತರಬೇತಿಯನ್ನು ಬೆಂಬಲಿಸಿತು. ಈ ಕಾರ್ಯಕ್ರಮದಡಿಯಲ್ಲಿ ಸ್ಥಾಪಿಸಲಾದ ಕಡಿಮೆಯಾದ ಮಳೆ ನೀರಿನ ಸವಳಿಕೆಯ ಪ್ರಾತ್ಯಕ್ಷಿಕೆ ಘಟಕಗಳು ಮತ್ತು ಕೇಂದ್ರೀಯ ಸಲಕರಣೆ ಸೌಲಭ್ಯವನ್ನು ಬೋಧನೆ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಬಳಸಲಾಗುತ್ತಿದೆ.

### 3.10 Indian Council for Agriculture Research-Centre for Advanced Agricultural Science & Technology (CAAST)

A program on Next Generation Technologies (NGT) in Adaptive Agriculture (AA) in four specific areas has been initiated at the University of Agricultural Sciences, Bangalore under the Centre for Advance Agriculture Science and Technology (CAAST) scheme of the National Agricultural Higher Education Project (NAHEP) of the Indian Council of Agricultural Research (ICAR) during the year 2018-19. There are four objectives in this program, which include a research component, skill development, training and demonstrations, and strengthening infrastructure for post-graduate programs of the UASB. Under CAAST modern infrastructure facilities have been created, and many training programs like lecture workshops and hands-on activities were conducted for benefit of faculty and post-graduate students. The CAAST program supported international training for 14 faculty and five PG students. The Reduced Runoff Farming Demonstration Units and Central Instrumentation Facility established under this program is being used for teaching and research activities.

### 3.11 ಕೇಂದ್ರೀಯ ಉಪಕರಣ ಸೌಲಭ್ಯ

ಕೇಂದ್ರೀಯ ಉಪಕರಣ ಸೌಲಭ್ಯವನ್ನು (CIF) 2021 ರಲ್ಲಿ ICAR-NAHEP-CAAST (ಸೆಂಟರ್ ಫಾರ್ ಅಡ್ವಾನ್ಸ್ಡ್ ಅಗ್ರಿಕಲ್ಚರಲ್ ಸೈನ್ಸ್ ಅಂಡ್ ಟೆಕ್ನಾಲಜಿ) ಕಾರ್ಯಕ್ರಮದ ಅಡಿಯಲ್ಲಿ ಸ್ಥಾಪಿಸಲಾಯಿತು. ಕೇಂದ್ರೀಯ ಉಪಕರಣ ಸೌಲಭ್ಯವು ಸ್ಕ್ಯಾನಿಂಗ್ ಎಲೆಕ್ಟ್ರಾನ್ ಮೈಕ್ರೋಸ್ಕೋಪ್ (SEM, Zeiss EVO 18), ಕ್ರಿಟಿಕಲ್ ಪಾಯಿಂಟ್ ಡ್ರೈಯರ್ (ಕೋರಮ್ K850), ಸ್ಪುಟರ್ ಕೋಟರ್ (ಕೋರಮ್ SC7620), ಲೇಸರ್ ಸ್ಕ್ಯಾನಿಂಗ್ ಕಾನ್ಫೋಕಲ್ ಮೈಕ್ರೋಸ್ಕೋಪ್ (ಲೈಕಾ SP8) ಮತ್ತು UPLC (ವಾಟರ್ಸ್/ ಎಜಿಲೆಂಟ್ ಜಿಸಿ) ನಂತಹ ಆಧುನಿಕ ನಿಖರವಾದ ವೈಜ್ಞಾನಿಕ ಉಪಕರಣಗಳನ್ನು ಹೊಂದಿದೆ. ಶೈಕ್ಷಣಿಕ ಸಂಶೋಧನೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳ ಮುಖ್ಯ ಧ್ಯೇಯವಾಕ್ಯದೊಂದಿಗೆ ಹೆಚ್ಚು ತರಬೇತಿ ಪಡೆದ ಸಿಬ್ಬಂದಿ ಮತ್ತು ತಂತ್ರಜ್ಞರು ಈ ಸೌಲಭ್ಯವನ್ನು ನಡೆಸುತ್ತಾರೆ. ಹೊರಗಿನ ಬಳಕೆದಾರರಾದ ಕೈಗಾರಿಕೆಗಳು ಮತ್ತು ಸಂಶೋಧನಾ ಪ್ರಯೋಗಾಲಯಗಳಿಗೆ ಕನಿಷ್ಠ ಶುಲ್ಕದೊಂದಿಗೆ ಕೇಂದ್ರೀಯ ಉಪಕರಣ ಸೌಲಭ್ಯವು ಸೇವೆಗಳನ್ನು ಒದಗಿಸುತ್ತದೆ.

2022–23 ಶೈಕ್ಷಣಿಕ ವರ್ಷದಲ್ಲಿ, ಕೇಂದ್ರೀಯ ಉಪಕರಣ ಸೌಲಭ್ಯವು ಒಟ್ಟು 96 ವಿನಂತಿಗಳನ್ನು ಸ್ವೀಕರಿಸಿದೆ, ಇದರಲ್ಲಿ ವಿದ್ಯಾರ್ಥಿಗಳಿಂದ, ಸಂಶೋಧಕರಿಂದ ಹಾಗೂ ವಿಜ್ಞಾನಿಗಳಿಂದ 661 ಶಿಲೀಂಧ್ರಗಳು, ಬ್ಯಾಕ್ಟೀರಿಯಾ, ಸಸ್ಯ ಅಂಗಾಂಶಗಳು, ಬೀಜಗಳು, ಆಹಾರ ಪದಾರ್ಥಗಳು, ನ್ಯಾನೊ–ಕಣಗಳಂತಹ ವೈವಿಧ್ಯಮಯ ಮಾದರಿಗಳು

### 3.11 Central Instrumentation Facility

The central instrumentation facility (CIF) established in 2021 under ICAR_NAHEP_CAAST (Centre for Advanced Agricultural Science and Technology) program houses modern scientific instruments such as Scanning Electron Microscope (SEM, Zeiss EVO 18), Critical Point Drier (Quorum K850), Sputter coater (Quorum SC7620), Laser Scanning Confocal Microscope (Leica SP8), UPLC-GC/MSMS (Waters/ Agilent GC).

The facility is run by highly trained personnel and technicians with the main motto of academic research and human resource development activities. The CIF provides services to outside UAS-B users like industries, and research laboratories with minimal

ಸೇರಿವೆ. ಒಂದು ಎಸ್.ಇ.ಎಮ್. ಚಿತ್ರವು ಕ್ರಾಪ್ ಸೈನ್ಸ್ ಜರ್ನಲ್‌ನ ಮುಖ ಪುಟದಲ್ಲಿ ಬಂದಿರುತ್ತದೆ.

charges. In the academic year 2022-23, the facility received a total number of 96 requests for CIF services, which included 661 samples for SEM image analysis of diverse samples such as fungi, bacteria, plant tissues, seeds, food ingredients, nano-particles, insects and animal tissues, from students, researchers and scientists. One SEM image appeared on the cover page of the Crop Science journal.

SEM, LC-MS/MS ಮತ್ತು ಕಾನ್ಫೋಕಲ್ ಮೈಕ್ರೋಸ್ಕೋಪ್‌ನಲ್ಲಿ 30 ಕ್ಕೂ ಹೆಚ್ಚು ಪ್ರಾಯೋಗಿಕ ತರಗತಿಗಳನ್ನು ನಡೆಸಲಾಯಿತು. ಉಪಕರಣದ ಇತ್ತೀಚಿನ ಮಾಹಿತಿಯನ್ನು ಹಂಚಿಕೊಳ್ಳಲು ಸೇವಾ ಎಂಜಿನಿಯರ್‌ಗಳ ಸಹಾಯದಿಂದ ಆಂತರಿಕ ತರಬೇತಿ ಮತ್ತು ಕಾರ್ಯಾಗಾರಗಳನ್ನು ಸಹ ನಡೆಸಲಾಯಿತು.

Over 30 practical classes were conducted on SEM, LC-MS/MS and Confocal microscope. In-house training and workshops were also conducted with the help of service engineers to share the latest information on the instrumentation.

ಅಧ್ಯಾಯ IV / Chapter IV

# 4. ಕೃಷಿ ವಿಸ್ತರಣಾ ಶಿಕ್ಷಣ ಮತ್ತು ಸೇವೆಗಳು
# Agricultural Extension Education & Services

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಮೂರು ಪ್ರಮುಖ ಕಾರ್ಯಗಳನ್ನು ನಿರ್ವಹಿಸುತ್ತದೆ; ಅವುಗಳೆಂದರೆ ಬೋಧನೆ, ಸಂಶೋಧನೆ ಹಾಗೂ ವಿಸ್ತರಣೆ. ವಿಸ್ತರಣಾ ನಿರ್ದೇಶನಾಲಯವು ದಕ್ಷಿಣ ಕರ್ನಾಟಕದ ಬೆಂಗಳೂರು ಗ್ರಾಮೀಣ ಮತ್ತು ಬೆಂಗಳೂರು ನಗರ, ರಾಮನಗರ, ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ತುಮಕೂರು, ಚಾಮರಾಜನಗರ ಹಾಗೂ ಮೈಸೂರು ಈ ಹತ್ತು ಜಿಲ್ಲೆಗಳಲ್ಲಿ ವಿಸ್ತರಣಾ ಸೇವೆಯನ್ನು ಕೈಗೊಳ್ಳುವ ಜವಾಬ್ದಾರಿಯನ್ನು ಹೊಂದಿದೆ.

### 4.1 ಅಧ್ಯಾದೇಶಗಳು

ಅ) ವಿಸ್ತರಣಾ ಶೈಕ್ಷಣಿಕ ಕಾರ್ಯಕ್ರಮಗಳು ಕೃಷಿಯ ಉನ್ನತ/ಉತ್ತಮ ಅಭಿವೃದ್ಧಿಗಾಗಿ ತಂತ್ರಜ್ಞಾನಗಳ ಪರಿಶೀಲನೆ ಮತ್ತು ಪರಿಷ್ಕರಣೆಯ ಮೂಲಕ ರೈತರು ಹಾಗೂ ಇತರರಿಗೆ, ತಂತ್ರಜ್ಞಾನಗಳ ಅಳವಡಿಕೆಯನ್ನು ಸುಲಲಿತಗೊಳಿಸುವುದಾಗಿರುತ್ತದೆ. ಇದು ವಿಭಿನ್ನ ಫಲಾನುಭವಿಗಳ ಪ್ರಯೋಜನಕ್ಕಾಗಿ ತರಬೇತಿ ಹಾಗೂ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಬೇಕಾಗಿದೆ. ವಿಸ್ತರಣಾ ನಿರ್ದೇಶನಾಲಯವು ವಿಶ್ವವಿದ್ಯಾನಿಲಯದ ವಿವಿಧ ಘಟಕಗಳು ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಂಬಂಧಿತ ಇಲಾಖೆಗಳ ಸಹಯೋಜನೆಯೊಂದಿಗೆ ಕಾರ್ಯನಿರ್ವಹಿಸುವುದು.

ಆ) ವಿಶ್ವವಿದ್ಯಾನಿಲಯವು ರಾಜ್ಯದಲ್ಲಿ ಕೃಷಿ ವಿಸ್ತರಣೆಯ ಸೂಕ್ತ ಮಾದರಿಗಳನ್ನು ಅಭಿವೃದ್ಧಿಪಡಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತದೆ.

### 4.2 ಉದ್ದೇಶಗಳು

ವಿಶ್ವವಿದ್ಯಾನಿಲಯದ ವಿಸ್ತರಣಾ ಸೇವೆಯು ಮೂರು ಹಂತದ ಉದ್ದೇಶಗಳನ್ನು ಹೊಂದಿದೆ.

ಅ) ರೈತರಿಗೆ ನವೀನ, ವಿಶ್ವಾಸನೀಯ, ಲಾಭದಾಯಕ, ಸಾಮಾಜಿಕವಾಗಿ ಸ್ವೀಕಾರಾರ್ಹ, ಪರಿಸರ ಸುಸ್ಥಿರ ಹಾಗೂ ಸಕಾಲಿಕ ಮಾಹಿತಿಯನ್ನು ಒದಗಿಸುವುದು.

ಆ) ಸಂಶೋಧನಾ ವ್ಯವಸ್ಥೆಗೆ ರೈತರು ನವೀನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಹಿಮ್ಮಾಹಿತಿಯನ್ನು ಒದಗಿಸುವುದು ಹಾಗೂ ತನ್ಮೂಲಕ ತಂತ್ರಜ್ಞಾನಗಳ ಅನುಸರಣೆಯಲ್ಲಿನ ಸಮಸ್ಯೆಗಳನ್ನು ಪರಿಶೀಲಿಸುವುದು ಮತ್ತು ಅವಶ್ಯಕವಿದ್ದಲ್ಲಿ ಅವುಗಳನ್ನು ಪರಿಷ್ಕರಿಸಲು ಅನುವು ಮಾಡಿಕೊಡುವುದು.

ಇ) ವಿಸ್ತರಣಾ ಕಾರ್ಯದ ಗುಣಮಟ್ಟ ಮತ್ತು ಪರಿಣಾಮವನ್ನು ಸುಧಾರಿಸುವಂತಹ ಮಾರ್ಗೋಪಾಯಗಳನ್ನು ಕಂಡು ಕೊಳ್ಳುವುದು.

### 4.3 ಕಾರ್ಯಚಟುವಟಿಕೆಗಳು

ಮೇಲೆ ಪ್ರಸ್ತಾಪಿಸಿದ ಉದ್ದೇಶಗಳನ್ನು ನೆರವೇರಿಸಲು ವಿಸ್ತರಣಾ ನಿರ್ದೇಶನಾಲಯವು ಈ ಮುಂದಿನ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದು.

The University of Agricultural Sciences, Bangalore is performing three prime activities *viz.,* teaching, research and extension. The Directorate of Extension is vested with the responsibility to carry out the extension services in 10 districts of Southern Karnataka *viz.,* Bengaluru Rural, Bengaluru Urban, Ramanagara, Mandya, Kolar, Chikkaballapura, Hassan, Tumakuru, Chamarajanagara and Mysuru.

### 4.1 Mandates

a) The extension education programmes shall ensure technology assessment and refinement and facilitate adoption of technologies by farmers and others for accelerated agricultural growth. It shall conduct demonstrations and training programmes for the benefit of farmers and other stake holders. Director of Extension shall Co-ordinate with different units of the University and other appropriate agencies of the centre and the state.

b) The University shall be responsible for developing suitable models of Agricultural Extension in the state

### 4.2 Objectives

The University Extension Service has three fold objectives:

a) To provide new, dependable, profitable, socially acceptable, ecologically sustainable and timely information to the farmers

b) To provide feedback on adoption of new technologies by the farmers to research system in order to examine the problems in adoption and modify/re-orient the technologies, if any and

c) To device ways and means for improving the quality and effectiveness of extension work.

### 4.3 Functions

In order to accomplish the above stated objectives, the Directorate of Extension is carrying out the following functions:

ಅ) ಕ್ಷೇತ್ರ ವಿಸ್ತರಣಾ ಕಾರ್ಯಕರ್ತರು ಮತ್ತು ರೈತರಿಗೆ ಕೃಷಿ ಮಾಹಿತಿಯನ್ನು ಪೂರೈಸುವ ಪ್ರಾಥಮಿಕ/ಪ್ರಮುಖ ಮೂಲವಾಗಿ ನಿರ್ವಹಿಸುವುದು.

ಆ) ಕ್ಷೇತ್ರ ವಿಸ್ತರಣಾ ಕಾರ್ಯಕರ್ತರು ಹಾಗೂ ರೈತ ಸಮುದಾಯ ಗಳಿಗೆ ಅಗತ್ಯ ಸಲಹಾ ಸೇವೆಯನ್ನು ಒದಗಿಸುವುದು.

ಇ) ಹೊಸ ಸಂಶೋಧನಾ ಫಲಿತಾಂಶಗಳನ್ನು ಆಧರಿಸಿ ಕ್ಷೇತ್ರ ಪ್ರಯೋಗ ಹಾಗೂ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು.

ಈ) ವಿಸ್ತರಣಾ ಸಿಬ್ಬಂದಿ ಮತ್ತು ರೈತರಿಗೆ ಹೊಸ ಕೃಷಿ ತಾಂತ್ರಿಕತೆಯ ಕುರಿತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.

ಉ) ಸಂಶೋಧನೆಗೆ ಪ್ರೇರಣೆಯನ್ನು ನೀಡುವುದರೊಂದಿಗೆ ಬೋಧನಾ ಕಾರ್ಯದಲ್ಲಿ ಪಾಲ್ಗೊಳ್ಳುವುದು.

### 4.4 ವಿಸ್ತರಣಾ ನಿರ್ದೇಶನಾಲಯದ ಘಟಕ/ವಿಭಾಗಗಳು

- ಸಿಬ್ಬಂದಿ ತರಬೇತಿ ಘಟಕ
- ರಾಜ್ಯ ಕೃಷಿ ವಿಸ್ತರಣಾ ನಿರ್ವಹಣೆ ಹಾಗೂ ವಿಸ್ತರಣಾ ತರಬೇತಿ ಸಂಸ್ಥೆ
- ಬೇಕರಿ ತರಬೇತಿ ಘಟಕ
- ರೈತ ತರಬೇತಿ ಸಂಸ್ಥೆ
- ಕೃಷಿ ಮಾಹಿತಿ ಘಟಕ
- ದೂರ ಶಿಕ್ಷಣ ಘಟಕ
- ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ
- ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯ
- ವಿಸ್ತರಣಾ ಶಿಕ್ಷಣ ಘಟಕ
- ರಾಷ್ಟ್ರೀಯ ಕೃಷಿ ವಿಸ್ತರಣಾ ಪ್ರಾಯೋಜನೆ ಹಾಗೂ
- ಕೃಷಿ ವಿಜ್ಞಾನ ಕೇಂದ್ರಗಳು

### 4.4.1 ಸಿಬ್ಬಂದಿ ತರಬೇತಿ ಘಟಕ

ಸಿಬ್ಬಂದಿ ತರಬೇತಿ ಘಟಕದ ಧ್ಯೇಯೋದ್ದೇಶಗಳೆಂದರೆ, ವಿಶ್ವವಿದ್ಯಾನಿಲಯದ ಸಿಬ್ಬಂದಿಗೆ, ಅಭಿವೃದ್ಧಿ ಇಲಾಖೆಗಳು ಮತ್ತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು/ಸಿಬ್ಬಂದಿಗೆ ಅವಶ್ಯಕವಾದ ತರಬೇತಿಗಳನ್ನು ಆಯೋಜಿಸುವುದು, ತರಬೇತಿ ಕಾರ್ಯಕ್ರಮಗಳಿಗೆ ಸೂಕ್ತವಾದ ವಿಷಯ ಹಾಗೂ ವಿಧಾನಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ವಿಶ್ವವಿದ್ಯಾನಿಲಯ ಮತ್ತು ಪ್ರಾಯೋಜಕತ್ವ ಸಂಸ್ಥೆಗಳ ನಡುವೆ ಸಮನ್ವಯ ಸಾಧಿಸುವುದು. ಪ್ರಸ್ತುತ ವರ್ಷದಲ್ಲಿ ಘಟಕವು ಒಂದು ಪುನಶ್ಚೇತನ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 23 ಸಹಾಯಕರಿಗೆ ಆಯೋಜಿಸಿತ್ತು. ಸಮಗ್ರ ಪೋಷಕಾಂಶಗಳ ನಿರ್ವಹಣೆಯಲ್ಲಿ ಪ್ರಾಯೋಜಕತ್ವದ 15 ದಿನಗಳ ಅವಧಿಯ ಮೂರು (3) ಸರ್ಟಿಫಿಕೇಟ್ ಕೋರ್ಸ್‌ಅನ್ನು 83 ತುಮಕೂರು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತ, ಮಂಗಳೂರಿನ ಸಿಬ್ಬಂದಿಗೆ ಮೂರು ತಂಡಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ವಮ್ಯಾನೇಜ್, ಹೈದರಬಾದ್‌ನ ಪ್ರಾಯೋಜಕತ್ವದೊಂದಿಗೆ ಎರಡು ಅನ್‌ಲೈನ್ ತರಬೇತಿಗಳನ್ನು ಆಯೋಜಿಸಲಾಗಿತ್ತು ಇದರಲ್ಲಿ 108 ಅಭ್ಯರ್ಥಿಗಳು ಭಾಗವಹಿಸಿದ್ದರು

a) Serving as the primary source of agricultural information to the field extension functionaries and farmers.

b) Rendering advisory services to field extension functionaries and farming community.

c) Conducting Farm Trials on new research findings and organise Front Line Demonstrations.

d) Organizing Training Programmes to extension professionals and farmers on latest farm technologies and

e) To stimulate research and impart teaching.

### 4.4 Units of Directorate of Extension

- Staff Training Unit (STU)
- State Agricultural Extension Management and Extension Training Institute (SAMETI)
- Bakery Training Unit (BTU)
- Farmers' Training Institute (FTI)
- Farm Information Unit (FIU)
- Distance Education Unit (DEU)
- Agricultural Technology Information Centre (ATIC)
- Agricultural Sciences Museum (ASM)
- Extension Education Units (EEUs)
- National Agricultural Extension Project (NAEP) and
- Krishi Vigyan Kendra (KVK)s

### 4.4.1 Staff Training Unit (STU)

The mandates of the Staff Training Unit (STU) are to organize need based training programmes to the Staff of University, Developmental Departments and Allied Institutions, to develop Training Programmes in terms of appropriate content and methodology and to coordinate between the University and the Sponsoring Agencies. Keeping the mandates in view during the period the unit has organized One Refresher training programme and 23 Assistants of UAS(B) were participated. In addition, also organized three (15 days duration) sponsored Certificate Courses on Integrated Nutrient Management (CCINM) for 83 staff of the Tumakuru and South Canara Districts Central Cooperative Bank Ltd., Mangalore in three batches. Further, Two online training programmes were conducted for 108 participants sponsored by

ಮತ್ತು ಕೃಷಿ ವಿಸ್ತರಣಾ ಸೇವೆಗಳಲ್ಲಿ ಪರಿಕರ ವಿತರಕರಿಗಾಗಿ ಡಿಪ್ಲೋಮಾ ಕಾರ್ಯಕ್ರಮವನ್ನು ಎರಡು ತಂಡಗಳಲ್ಲಿ 75 ಪರಿಕರ ಮಾರಾಟಗಾರರಿಗೆ ಆಯೋಜಿಸಲಾಗಿದೆ. ಇದರ ವಿವರಗಳನ್ನು ಅನುಬಂಧ 3.1 ಮತ್ತು ಅನುಬಂಧ 3.1 (ಅ) ರಲ್ಲಿ ನೀಡಲಾಗಿದೆ.

### 4.4.2 ರಾಜ್ಯ ಕೃಷಿ ವಿಸ್ತರಣಾ ನಿರ್ವಹಣೆ ಹಾಗೂ ವಿಸ್ತರಣಾ ತರಬೇತಿ ಸಂಸ್ಥೆ – ದಕ್ಷಿಣ (ಸಮೇತಿ–ದಕ್ಷಿಣ)

#### ಒಳ ಆವರಣ ತರಬೇತಿಗಳು

ಪ್ರಸ್ತುತ ವರ್ಷದಲ್ಲಿ ಸಮೇತಿ (ದಕ್ಷಿಣ) ಒಂದು ಪುನಶ್ಚೇತನ ತರಬೇತಿಯನ್ನು ಕೃಷಿ ಇಲಾಖೆಯ 21 ಸಿಬ್ಬಂದಿಗಳಿಗೆ ಆಯೋಜಿಸಿತ್ತು ಮತ್ತು ಹೊಸದಾಗಿ ನೇಮಕಗೊಂಡ 75 ಆತ್ಮ ಸಿಬ್ಬಂದಿಗೆ ಎರಡು ನೇಮಕಾತಿ ತರಬೇತಿಗಳನ್ನು ಆಯೋಜಿಸಲಾಗಿದ್ದು, ಮುಂದುವರೆದು, ವಿಸ್ತರಣಾ ಶಿಕ್ಷಣ ಸಂಸ್ಥೆ, ಹೈದರಬಾದ್ ಸಹಭಾಗಿತ್ವದಲ್ಲಿ ಎರಡು ಪುನಶ್ಚೇತನ ತರಬೇತಿಗಳನ್ನು ಆಯೋಜಿಸಲಾಗಿದ್ದು 60 ಶಿಕ್ಷಣಾರ್ಥಿಗಳು ಭಾಗವಹಿಸಿದ್ದರು.

#### ಅನ್‌ಲೈನ್ ತರಬೇತಿಗಳು

ಪ್ರಸ್ತುತ್ತ ವರ್ಷದಲ್ಲಿ ಸಮೇತಿ (ದಕ್ಷಿಣ) ಕೃಷಿ ತಂತ್ರಜ್ಞಾನ ನಿರ್ವಹಣೆ ಸಂಸ್ಥೆ (ಆತ್ಮ)ಯ 2492 ಸಿಬ್ಬಂದಿಗಳಿಗೆ 35 ಅನ್‌ಲೈನ್ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. ವಿವರವನ್ನು ಅನುಬಂಧ 3.2 ಮತ್ತು ಅನುಬಂಧ 3.2 (ಅ) ರಲ್ಲಿ ನೀಡಲಾಗಿದೆ.

#### ವಿಸ್ತರಣಾ ಸೇವೆಗಳಲ್ಲಿ ಕೃಷಿ ಪರಿಕರ ಮಾರಾಟಗಾರರಿಗೆ ಡಿಪ್ಲೋಮಾ (ದೇಸಿ)

ಈ ಅವಧಿಯಲ್ಲಿ ನಡೆಯುತ್ತಿರುವ ಕೃಷಿ ವಿಸ್ತರಣಾ ಸೇವೆಗಳಲ್ಲಿ ಪರಿಕರ ವಿತರಕರಿಗೆ ಡಿಪ್ಲೋಮಾ ಕೋರ್ಸ್ ಕಾರ್ಯಕ್ರಮವನ್ನು 17 ನೋಡಲ್ ತರಬೇತಿ ಕೇಂದ್ರಗಳಲ್ಲಿ 48 ತಂಡಗಳಿಂದ 1920 ಜನ ಪರಿಕರ ವಿತರಕರಿಗೆ ಹಮ್ಮಿಕೊಳ್ಳಲಾಗುತ್ತಿದೆ. ಜೊತೆಗೆ 21 ನೋಡಲ್ ತರಬೇತಿ ಕೇಂದ್ರಗಳಲ್ಲಿ 23 ತಂಡಗಳಲ್ಲಿ 883 ಪರಿಕರ ವಿತರಕರಿಗೆ ತರಬೇತಿ ಪೂರ್ಣಗೊಳಿಸಲಾಗಿದೆ. ಇದರ ವಿವರಗಳನ್ನು ಅನುಬಂಧ 3.2 (ಆ) ಮತ್ತು ಅನುಬಂಧ 3.2 (ಇ) ರಲ್ಲಿ ನೀಡಲಾಗಿದೆ.

### 4.4.3 ಬೇಕರಿ ತರಬೇತಿ ಘಟಕ

ಬೇಕರಿ ತರಬೇತಿ ಘಟಕದ ಮುಖ್ಯ ಉದ್ದೇಶಗಳಾದ ಉತ್ತಮ ಗುಣಮಟ್ಟದ ಬೇಕರಿ ಹಾಗೂ ಬೇಕರಿ ಉತ್ಪನ್ನಗಳ ತಯಾರಿಕಾ ಜ್ಞಾನವನ್ನು ಒದಗಿಸುವುದು, ವೃತ್ತಿ ನಿರ್ವಹಣಾ ಕೌಶಲ್ಯಗಳನ್ನು ತಿಳಿಸುವುದು ಹಾಗೂ ಬೇಕರಿ ಉದ್ಯಮ ಕ್ಷೇತ್ರದಲ್ಲಿ ತಾಂತ್ರಿಕ ಸಿಬ್ಬಂದಿಗಳನ್ನು ಉತ್ತೇಜಿಸಲಾಗುತ್ತಿದೆ. ಘಟಕದ ಉತ್ಪನ್ನಗಳನ್ನು ವಿಶ್ವವಿದ್ಯಾನಿಲಯದ ಮಾರಾಟ ಮಳಿಗೆಯಲ್ಲಿ ಮಾರಾಟ ಮಾಡುತ್ತಿರುತ್ತದೆ. ಪ್ರಸ್ತುತ ಉದ್ದೇಶಗಳೊಂದಿಗೆ ಘಟಕವು ಆಯೋಜಿಸಿದ ತರಬೇತಿ ಕಾರ್ಯಕ್ರಮಗಳು ಮತ್ತು ಇತರ ಚಟುವಟಿಕೆಗಳ ವಿವರಗಳನ್ನು ಅನುಬಂಧ 3.3ರಲ್ಲಿ ನೀಡಲಾಗಿದೆ.

MANAGE, Hyderabad and Two Diploma in Agricultural Extension Services for Input Dealers (DAESI) are being conducted for 75 Input Dealers. The details are provided in Annexure 3.1 & Annexure 3.1(a).

### 4.4.2 State Agricultural Extension Management and Extension Training Institute-South (SAMETI-South)

#### On Campus training progrmmes

During the period SAMETI (South) organized One on campus refresher training programme for 21 officials of Agriculture Department. In addition two induction training programmes were organized for 75 newly recruited officials of Agriculture Technology Management Agency (ATMA). Further, two refresher training programmes were also organized in collaboration with Extension Education Institute, Hyderabad for the benefit of 60 participants.

#### Online training programmes

During the period SAMETI (South) organized 35 online training programmes for the staff of Agriculture Technology Management Agency (ATMA) and 2492 were participated. The details are provided in Annexure 3.2 and Annexure 3.2 (a)

#### Diploma in Agricultural Extension Services for Input Dealers (DAESI)

During the period on-going Diploma in Agricultural Extension Services for Input Dealers (DAESI) programme was conducted in 17 Nodal Training Centers for 48 batches covering 1920 input dealers. Further, in 20 nodal training centers for 23 batches covering 883 input dealers were completed. The details are provided in Annexure 3.2 (b) and Annexure 3.2 (c)

### 4.4.3 Bakery Training Unit (BTU)

The primary objectives of BTU are to impart knowledge on quality baking and bakery; to impart professional management skills and to promote technical personnel in the field of bakery industry. The products of the unit are sold in the university outlets. The details of the training programmes conducted and other activities are provided in Annexure 3.3.

2022–23 ನೇ ಸಾಲಿನಲ್ಲಿ ಬೇಕರಿ ತರಬೇತಿ ಘಟಕವು 79 ಜನ ಅಭ್ಯರ್ಥಿಗಳಿಗೆ ಬೇಕರಿ ತಂತ್ರಜ್ಞಾನದಲ್ಲಿ 14 ವಾರಗಳ ಸರ್ಟಿಫಿಕೇಟ್ ಕೋರ್ಸಿನ 3 ಕಾರ್ಯಕ್ರಮಗಳನ್ನು, 203 ಜನ ತರಬೇತಿದಾರರಿಗೆ 4 ವಾರಗಳ 12 ಬೇಕಿಂಗ್ ಕೋರ್ಸ್‌ಗಳನ್ನು ಆಯೋಜಿಸಿತ್ತು. ಇದರೊಂದಿಗೆ, ಘಟಕವು, ಪಾಲ್ಗೊಂಡ 833 ತರಬೇತಿದಾರರಿಗೆ ವಿವಿಧ ಅಲ್ಪಾವಧಿಯ 43 ಆವರಣ ಕೋರ್ಸ್‌ಗಳನ್ನು 465 ಅಭ್ಯರ್ಥಿಗಳಿಗೆ 14 ದೃಷ್ಟಿಕೋನ ಕಾರ್ಯಕ್ರಮ ಮತ್ತು 231 ಸದಸ್ಯರಿಗೆ 10 ಸಹಕಾರಿ / ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಮತ್ತು ವಿವಿಧ ತರಬೇತಿ ಎಸ್‌ಡಿಸಿ, ಕೃವಿವಿ (ಬೆಂ.) ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ 12 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ, ಇದರಲ್ಲಿ 100 ಅಭ್ಯರ್ಥಿಗಳು ಭಾಗವಹಿಸಿದ್ದರು. ಅಲ್ಲದೆ, ಘಟಕದ ವತಿಯಿಂದ 1750 ತರಬೇತಿದಾರರ ಪ್ರಯೋಜನಕ್ಕಾಗಿ ಮನೆಯಲ್ಲಿ ತಯಾರಿಸುವ, ರಾಗಿ ಮೌಲ್ಯವರ್ಧನೆ, ಸಿರಿಧಾನ್ಯ, ಹಾಲು ಹಾಗೂ ಹಾಲಿನ ಉತ್ಪನ್ನಗಳು, ಮಸಾಲೆಪುಡಿ, ಮೊಟ್ಟೆ ರಹಿತ ಬೇಕರಿ ಉತ್ಪನ್ನಗಳು ಮತ್ತು ವಿಶೇಷ ಕೇಕ್‌ಗಳ ತಯಾರಿಕೆ, ಬೇಕರಿ ಉತ್ಪನ್ನಗಳು, ಪೌಷ್ಟಿಕಾಂಶಗಳ ಮಹತ್ವ ಮುಂತಾದವುಗಳ ಕುರಿತು ಬೇಕರಿ ಹಾಗೂ ಮೌಲ್ಯವರ್ಧನೆ ಉತ್ಪಾದನೆಯಲ್ಲಿ 1035 ವಿಧಾನ/ಕೌಶಲ್ಯ ಅಭಿವೃದ್ಧಿ /ಪ್ರಾತ್ಯಕ್ಷಿಕೆಯ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

### 4.4.4 ರೈತ ತರಬೇತಿ ಸಂಸ್ಥೆ

ರೈತ ತರಬೇತಿ ಸಂಸ್ಥೆಯ ಮುಖ್ಯ ಉದ್ದೇಶವು ರೈತ/ರೈತ ಮಹಿಳೆ/ ಯುವ ರೈತರು / ಸ್ವ ಸಹಾಯ ಗುಂಪುಗಳ ಸದಸ್ಯರಿಗೆ ಅವರ ಅಗತ್ಯಗಳ ಆಧಾರದ ಮೇರೆಗೆ (ಪ್ರಾಯೋಜಿತ) ವಿವಿಧ ಅಭಿವೃದ್ಧಿ ಇಲಾಖೆಗಳು ಹಾಗೂ ಸಂಸ್ಥೆಗಳಿಂದ ಪ್ರಾಯೋಜಿತ ಕೃಷಿ ಹಾಗೂ ಸಂಬಂಧಿತ ಕ್ಷೇತ್ರಗಳ ಮೇಲೆ ತರಬೇತಿಯನ್ನು ಹಮ್ಮಿಕೊಳ್ಳುವುದು. ಪ್ರಸಕ್ತ 2022–23 ನೇ ಸಾಲಿನಲ್ಲಿ ಹೈದರಾಬಾದ್‌ನ ಮ್ಯಾನೇಜ್ ಸಂಸ್ಥೆಯ ಸಹಭಾಗಿತ್ವದಲ್ಲಿ ಹಾಗೂ ಕರ್ನಾಟಕ ರಾಜ್ಯ ಕೃಷಿ ಇಲಾಖೆಯ ಸಾಮಾನ್ಯ ವಿಸ್ತರಣಾ ಸೇವೆ (ಜಿಇಎಸ್), ಅಡಿಯಲ್ಲಿ ಗ್ರಾಮೀಣ ಯುವಕರಿಗೆ ಕೌಶಲ್ಯಾಭಿವೃದ್ಧಿ ತರಬೇತಿ, ಸಂಜೀವಿನಿ – ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಕರ್ನಾಟಕ ಸರ್ಕಾರ, ಇವರ ಪ್ರಾಯೋಜಕತ್ವದಲ್ಲಿ ಕೃಷಿ ಪರಿಸರ ವಿಧಾನಗಳು ಕುರಿತು ಒಟ್ಟು ಆರು ತರಬೇತಿಗಳು, ಸಮಗ್ರ ಕೃಷಿ ಪದ್ಧತಿ (ಪ.ಜಾ.ಉ.ಯೋ) ಮತ್ತು ಆರ್‌ಕೆವಿವೈ ಪ್ರಾಯೋಜನೆ, ಅಭಾಸುಸಂಯೋ (ಕೃಷಿ ನಿರತ ಮಹಿಳೆಯರು) (ಕಳೆ ನಿರ್ವಹಣೆ) ಜಿಕೆವಿಕೆ, ಬೆಂಗಳೂರು ಮತ್ತು ಪೀಪಲ್ ಟ್ರಸ್ಟ್, ಜುವಾರಿ ಫಾರ್ಮ್ ಹಬ್ ಲಿಮಿಟೆಡ್, ಸಿರಿಧಾನ್ಯಗಳ ಅತ್ಯುತ್ಕೃಷ್ಟತಾ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು, ಸಾವಯವ ಮತ್ತು ಸಹಜ ಕೃಷಿಯ ಪ್ರಾದೇಶಿಕ ಕೇಂದ್ರ, ಬೆಂಗಳೂರು, ಕೌಶಲ್ಯ ಅಭಿವೃದ್ಧಿ ಮಂಡಳಿ ಪ್ರಾಯೋಜಿತ ಕೌಶಲ್ಯ ತರಬೇತಿ, ಅಭಾಸುಸಂಯೋ (ಹರಳು), ಜಿಕೆವಿಕೆ, ಬೆಂಗಳೂರು ಅಡಿಯಲ್ಲಿ ಕುರಿತು ಒಟ್ಟು 30 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ 1013 ಜನ/ರೈತ ಮಹಿಳೆ/ ಯುವ ರೈತರಿಗೆ ತರಬೇತಿಯನ್ನು ನೀಡಲಾಗಿದೆ. ತರಬೇತಿ ಕಾರ್ಯಕ್ರಮದ ವಿವರಗಳನ್ನು ಅನುಬಂಧ: 3.4ರಲ್ಲಿ ಒದಗಿಸಲಾಗಿದೆ.

**ತರಬೇತಿಯ ಪರಿಣಾಮ:** ಜಿಇಎಸ್ ತರಬೇತಿಯ ಪರಿಣಾಮ ಅಧ್ಯಯನದಿಂದ ಅಭ್ಯರ್ಥಿಗಳ ಸರಾಸರಿ ಜ್ಞಾನಗಳಿಕೆಯ ಪ್ರಮಾಣವು ಸರಾಸರಿ ಶೇ. 11.97 ರಷ್ಟು ಅಧಿಕಗೊಂಡಿರುವುದು ಕಂಡು ಬಂದಿದೆ. ತರಬೇತಿ ನಿರ್ವಹಣೆಯ ಸಾಮರ್ಥ್ಯ ಸೂಚ್ಯಂಕವು ಸರಾಸರಿ ಶೇ. 94.14 ರಷ್ಟು ಹಾಗೂ ವಿಷಯ ಸಾಮರ್ಥ್ಯದ ಸೂಚ್ಯಂಕವು ಶೇ.

The unit has organized 3 programmes of 79 weeks commercial baking technology for 71 participants and 12 baking courses of 4 weeks duration for 203 participants during 2022-23. Besides, the unit conducted 43 on-campus short courses of different duration involving 833 trainees, 14 orientation programme for 465 members, 10 collaborative/ sponsored Training Programmes organized for 231 members and 12 training programmes were organized under different Skill Development Council (SDC), UAS (B) sponsored projects in which 100 members participated. Further, the unit organized 1035 method/ skill demonstrations of bakery and value added products in training programmes on home baking, value addition of ragi, millets, milk and milk products, spice powders, eggless baked products & special cakes bakery products, nutritional importance in human health etc., for the benefit of 1750 trainees.

### 4.4.4 Farmers' Training Institute (FTI)

Farmers' Training Institute has the mandate to organize sponsored need based training programmes to farmers / farm women / farm youth /members of Self Help Groups as per the requirements of sponsoring agencies on agriculture and allied fields. During 2022-23, in total 30 training programmes were organised in collaboration with various departments and organizations *viz.,* MANAGE, Hyderabad, Karnataka State Department of Agriculture (KSDA), GoK under General Extension Service (GES), Sanjeevini –Karnataka State Rural Livelihood Promotion Society, GoK, Integrated Farming System (SCSP) and RKVY projects, AICRP (Women in Agriculture) UAS, GKVK, Bangalore, AICRP on Weed management, UAS, Bangalore and People's Trust, Zuari Farm Hub Limited, Bangalore, Centre of Excellence for Small Millets, UAS, GKVK, Bangalore, Regional Centre for Organic and Natural Farming, Bangalore, Skill Development Centre and AICRP on Castor, ZARS, GKVK, Bangalore and trained 1013 farmers / farm women / farm youth. The details are provided in Annexure 3.4

**Training Impact**: Pre and post Evaluation of Knowledge gain of GES Training Programs(06 Nos) was assessed using the suitable pre structured questionnaire and it was observed that average knowledge gain was 11.97 which indicated the

92.72 ರಷ್ಟಾಗಿದೆ. ಮುಂದುವರೆದು, ಆರು ಕೃಷಿ ಸಖಿ ತರಬೇತಿಗಳ ಸರಾಸರಿ ಜ್ಞಾನಗಳಿಕೆಯ ಪ್ರಮಾಣವನ್ನು ಅವಲೋಕಿಸಿದಾಗ ಶೇ. 12.91 ರಷ್ಟು ಜ್ಞಾನವರ್ಧನೆಯಾಗಿದ್ದು ತರಬೇತಿಯು ಪರಿಣಾಮಕಾರಿಯೆಂದು ಕಂಡುಬಂದಿದೆ. ತರಬೇತಿ ನಿರ್ವಹಣೆಯ ಸಾಮರ್ಥ್ಯದ ಸೂಚ್ಯಂಕವು (TMEI) ಶೇ. 96.63 ರಷ್ಟು ಹಾಗೂ ವಿಷಯ ನಿರ್ವಹಣೆ ಸೂಚ್ಯಂಕವು (SMEI) ಶೇ. 94.44 ರಷ್ಟು ಕಂಡುಬಂದಿದೆ.

effectiveness of training programs. The average value of TMEI and SMEI were 94.14 & 92.72 per cent, respectively. Similarly, the average knowledge gain of six training programs for Krishi Sakhi's under Sanjeevini, KSRLPS was 12.91 per cent and the average value of Training Management Efficiency Index (TMEI) & Suject Matter Efficiency Index (SMEI) were 96.63 per cent & 94.44 per cent respectively.

ಸಿರಿಧಾನ್ಯಗಳ ಕೌಶಲ್ಯ ತರಬೇತಿಯ ಪೂರ್ವ ಮತ್ತು ಅಂತಿಮ ಜ್ಞಾನ ಮೌಲ್ಯಮಾಪನವನ್ನು ಸೂಕ್ತ ಪ್ರಶ್ನಾವಳಿ ಮೂಲಕ ವಿಶ್ಲೇಷಿಸಿದಾಗ ಶಿಬಿರಾರ್ಥಿಗಳ ಜ್ಞಾನ ಮಟ್ಟವು ಶೇ. 8 ರಷ್ಟು ಅಧಿಕಗೊಂಡಿದ್ದು ಕಂಡುಬಂದಿದೆ. ಅಲ್ಲದೇ ತರಬೇತಿ ನಿರ್ವಹಣೆಯ ಸಾಮರ್ಥ್ಯ ಸೂಚ್ಯಂಕವು ಶೇ. 91.18 ಇದ್ದುದ್ದು ದೃಢಪಟ್ಟಿದೆ. ಶೇ. 50 ರಷ್ಟು ಶಿಭಿರಾರ್ಥಿಗಳು ತಮ್ಮದೇ ಆದ ಸಿರಿಧಾನ್ಯಗಳ ಆಧಾರಿತ ಉದ್ಯಮ ಶೀಲತೆಯನ್ನು ಪ್ರಾರಂಭಿಸಲು ಸಿದ್ಧರಾಗಿದ್ದಾರೆ. ವಿವರಗಳನ್ನು ಅನುಬಂಧ: 3.5 ರಲ್ಲಿ ನೀಡಲಾಗಿದೆ.

Three days skill training was organised on Convenient Mixes of Millets for Livelihood Security in collaboration with Skill Development Centre, UAS(B) and CoE on small millets, UAS(B), impact of training was evident by 8 per cent of knowledge gain after training. The TMEI was 91.18 per cent which indicated effective training management. It was observed that 98 per cent of trainees intended to prepare and use the convenient products demonstrated in training for consumption on regular basis. 50 per cent of participants expressed their willingness to start their own millet based entrepreneurship. The details are provided in Annexure 3.5

### ಕ್ಷೇತ್ರ ಭೇಟಿ

ಪ್ರತಿ ತರಬೇತಿ ಕಾರ್ಯಕ್ರಮದ ಸಂದರ್ಭದಲ್ಲಿ ಭಾಗವಹಿಸಿದ ತರಬೇತಿದಾರರಿಗೆ ಕ್ಷೇತ್ರ ಭೇಟಿಯ ಅನುಭವದಿಂದ ಪರಿಣಾಮಕಾರಿ ಕಲಿಕೆ ಹಾಗು ಅಳವಡಿಕೆಯ ಲಾಭಕ್ಕಾಗಿ ಜಿಕೆವಿಕೆ ಆವರಣದ ಪ್ರಾಯೋಗಿಕ ತಾಕುಗಳು, ವಿಭಾಗಗಳು, ಪ್ರಗತಿಪರ ರೈತರ ತಾಕುಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಂಶೋಧನಾ ಕೇಂದ್ರಗಳು ಹಾಗು ಸಂಬಂಧಿತ ಕೃಷಿ ಸಂಸ್ಥೆಗಳಿಗೆ ಒಟ್ಟು 38 ಕ್ಷೇತ್ರ ಭೇಟಿಗಳನ್ನು ವ್ಯವಸ್ಥೆ ಮಾಡಲಾಗಿರುತ್ತದೆ.

### Field Visits

In all the training programmes, field visits were organised for exposing the trainees to new technologies adopted. About 38 field visits were made as a part of training programmes to the progressive farmers fields, research centres of State and Central Government etc.

### ಪದ್ಧತಿ ಪ್ರಾತ್ಯಕ್ಷಿಕೆಗಳು

ಒಟ್ಟು 59 ಪದ್ಧತಿ ಪ್ರಾತ್ಯಕ್ಷಿಕೆ/ವಿವಿಧ ಆಯಾಮಗಳಲ್ಲಿ ಕೌಶಲ್ಯ ತರಬೇತಿಗಳಾದ ಮಣ್ಣು ಪರೀಕ್ಷೆಗೆ ಮಣ್ಣು ಮಾದರಿಗಳ ಸಂಗ್ರಹ, ಮಣ್ಣಿನ ಪರೀಕ್ಷೆ, ಕಸಿಮಾಡುವುದು/ಕಸಿವಿಧಾನ/ಹಸಿರುಗೊಬ್ಬರ, ಮಿಶ್ರಗೊಬ್ಬರದ ಘಟಕ ತಯಾರಿಕೆ, ಗೊಬ್ಬರ ತಯಾರಿಕೆಯಿಂದ ತ್ಯಾಜ್ಯ ನಿರ್ವಹಣೆ, ಮೌಲ್ಯವರ್ಧನೆ ಮತ್ತು ಆಹಾರ ಸಂಸ್ಕರಣೆ, ಜೇನು ಸಾಕಾಣಿಕೆ, ಸಸ್ಯ ಉತ್ಪಾದನಾ ತಂತ್ರಗಳು ಹಾಗೂ ರೇಷ್ಮೆ ಕೃಷಿ ತಂತ್ರಜ್ಞಾನಗಳಂತ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು ತಂತ್ರಜ್ಞಾನ ವರ್ಗಾವಣೆಗೆ ಪೂರಕವಾಗಿದೆ.

### Method Demonstrations

About 59 method/skill demonstrations on various aspects such as collection of soil samples for soil testing, grafting/layering / mulching, preparation of compost pit, bee keeping, waste management by manuring, value addition & food processing, plant protection techniques and silkworm & mulberry technologies were organized.

**ದೂರ ಶಿಕ್ಷಣ ಘಟಕದ ಅಧ್ಯಯನ ಕೇಂದ್ರವಾಗಿ ಸೇವೆ ಸಲ್ಲಿಕೆ:** ರೈತ ತರಬೇತಿ ಸಂಸ್ಥೆಯು ದೂರ ಶಿಕ್ಷಣ ಘಟಕದ ಅಧ್ಯಯನ ಕೇಂದ್ರವಾಗಿ ಸೇವೆ ಸಲ್ಲಿಸುತ್ತಿದ್ದು 2021–22ನೇ ಸಾಲಿನ ಒಂದು ವರ್ಷದ ಕೃಷಿ ಡಿಪ್ಲೊಮಾ ಕೋರ್ಸ್‌ನ ಎರಡನೇ ಸೆಮಿಸ್ಟರಿನ ಲಿಖಿತ ಪರೀಕ್ಷೆಗಳನ್ನು 49 ಅಭ್ಯರ್ಥಿಗಳಿಗೆ ಆಯೋಜಿಸಿತ್ತು. ಮುಂದುವರೆದು, 2022–23ನೇ ಸಾಲಿನ ಮೊದಲನೇ ಸೆಮಿಸ್ಟರಿನಲ್ಲಿ ಸಂಪರ್ಕ ತರಗತಿಗಳನ್ನು

**Study Centre for Distance Education Unit:** As a study centre, Farmers' Training Institute has conducted written examination for one year diploma in Agriculture course for 49 candidates during 2nd Semester of 2021-22. Further, conducted contact

ಮತ್ತು ಲಿಖಿತ ಪರೀಕ್ಷೆಗಳನ್ನು ಆಯೋಜಿಸಲಾಗಿದ್ದು ಒಟ್ಟು 45 ಅಭ್ಯರ್ಥಿಗಳು ಹಾಜರಿದ್ದರು.

**ದೇಸಿ ಕಾರ್ಯಕ್ರಮದ ನೋಡಲ್ ತರಬೇತಿ ಕೇಂದ್ರವಾಗಿ ಸೇವೆ ಸಲ್ಲಿಕೆ:** ರೈತ ತರಬೇತಿ ಸಂಸ್ಥೆಯು ಹೈದರಾಬಾದ್‌ನ ಮ್ಯಾನೇಜ್ ಸಂಸ್ಥೆಯಿಂದ ಪ್ರಾಯೋಜಿತ ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿ ವಿಸ್ತರಣೆ ಸೇವೆಯಲ್ಲಿ ಡಿಪ್ಲೊಮಾ ಕಾರ್ಯಕ್ರಮದ (ದೇಸಿ) ನೋಡಲ್ ತರಬೇತಿ ಕೇಂದ್ರವಾಗಿ ಸೇವೆ ಸಲ್ಲಿಸುತ್ತಿದ್ದು ಪ್ರಸ್ತುತ ಸಾಲಿನಲ್ಲಿ ಎರಡು ತಂಡಗಳಲ್ಲಿ ಒಟ್ಟು 78 ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಿದೆ {ತಂಡ–4 (40) ಮತ್ತು ತಂಡ–5(38)}. ತರಬೇತಿ ಅವಧಿಯಲ್ಲಿ ಮ್ಯಾನೇಜ್ ಸಂಸ್ಥೆಯ ಪಠ್ಯಕ್ರಮದ ಅನುಸಾರವಾಗಿ 40 ತರಗತಿಗಳು, 08 ಕ್ಷೇತ್ರ ಭೇಟಿ, ಮಾಸಿಕ ಪರೀಕ್ಷೆಗಳು, ಪ್ರಾಯೋಗಿಕ ಪರೀಕ್ಷೆ ಹಾಗೂ ಅಂತಿಮ ಲಿಖಿತ ಪರೀಕ್ಷೆಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿರುತ್ತದೆ.

### 4.4.5 ಕೃಷಿ ಮಾಹಿತಿ ಘಟಕ

ರೈತ ಮಾಹಿತಿ ಘಟಕದ ದೇಯ್ಯೋದ್ದೇಶಗಳೆಂದರೆ; ಸಮೂಹ ಮಾಧ್ಯಮಗಳೊಂದಿಗೆ ಸಂಯೋಜನೆ, ಸುಧಾರಿತ ಬೇಸಾಯ ಪದ್ಧತಿ ಪ್ರಕಟಣೆ, ತಾಂತ್ರಿಕತೆಗಳ ಕುರಿತು ಪ್ರಕಟಣೆ, ಕೃಷಿಮೇಳ ಮತ್ತು ಪ್ರದರ್ಶನಗಳ ಆಯೋಜನೆ / ಭಾಗವಹಿಸುವಿಕೆ ಮತ್ತು ದೃಶ್ಯ ಶ್ರವಣ ಸಾಧನಗಳ ಅಭಿವೃದ್ಧಿಪಡಿಸುವುದಾಗಿದೆ. ಪ್ರಸ್ತುತ ವರ್ಷದಲ್ಲಿ ಘಟಕವು ಈ ಮುಂದಿನ ಚಟುವಟಿಕೆಗಳನ್ನು ಕೈಗೊಂಡಿದೆ.

1. **ಪತ್ರಿಕಾ ಪ್ರಕಟಣೆ:** ಸ್ನಾತಕ, ಸ್ನಾತಕೋತ್ತರ ಹಾಗೂ ಡಿಪ್ಲೊಮಾ ಕೋರ್ಸ್‌ಗಳ ಪ್ರಕಟಣೆ ಮತ್ತು ಪ್ರವೇಶಾತಿ, ಘಟಿಕೋತ್ಸವ, ಸಂಸ್ಥಾಪನಾ ದಿನ, ಕೃಷಿಮೇಳ, ವಿಚಾರ ಸಂಕಿರಣ/ಕಾರ್ಯಗಾರ/ಸಮಾವೇಶ, ಆಚರಣೆಗಳು, ಪ್ರಶಸ್ತಿ, ವಿಶ್ವವಿದ್ಯಾನಿಲಯದ ಸಾಧನೆಗಳನ್ನು ಕುರಿತು ಘಟಕವು ಸಮೂಹ ಮಾಧ್ಯಮಗಳಿಗೆ 60 ಪತ್ರಿಕಾ ಪ್ರಕಟಣೆಗಳನ್ನು ಬಿಡುಗಡೆ ಮಾಡಿದೆ.
2. **ಸಮೂಹ ಮಾಧ್ಯಮಗಳ ಭೇಟಿ ಮತ್ತು ಮಾಧ್ಯಮ ಪ್ರಸಾರ:** ಘಟಕವು 31 ಬಾರಿ ವಿವಿಧ ಸಮೂಹ ಮಾಧ್ಯಮಗಳಿಗೆ ಭೇಟಿ ನೀಡಿ, ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಪ್ರತಿನಿಧಿಗಳನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿರುತ್ತದೆ. ವಿವಿಧ ಮಾಧ್ಯಮಗಳ ಮೂಲಕ 414 ಕ್ಕೂ ಹೆಚ್ಚು ಚಟುವಟಿಕೆಗಳನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡಲಾಗಿದೆ.
3. **ಪತ್ರಿಕಾ ಗೋಷ್ಠಿ:** ಪ್ರಮುಖ ಕಾರ್ಯಕ್ರಮಗಳ / ಚಟುವಟಿಕೆಗಳನ್ನು ಆಯೋಜಿಸುವಾಗ, ಅವುಗಳ ಗುರಿ ಉದ್ದೇಶಗಳನ್ನು ಸಾರ್ವಜನಿಕರಿಗೆ ತಿಳಿಸಲು ಮತ್ತು ವಿಶ್ವವಿದ್ಯಾನಿಲಯದ ಕುಲಪತಿಗಳು ಮತ್ತು ಅಧಿಕಾರಿಗಳು ವಿಶ್ವವಿದ್ಯಾಲಯದ ಸಾಧನೆ ವಿಶೇಷತೆಗಳನ್ನು ಹಂಚಿಕೊಳ್ಳಲು ಪತ್ರಿಕಾ ಗೋಷ್ಠಿಗಳನ್ನು ಕರೆಯುವುದು ಕೃಷಿ ವಿಶ್ವವಿದ್ಯಾನಿಲಯದ ಸಂಪ್ರದಾಯವಾಗಿದೆ. ಘಟಿಕೋತ್ಸವ, ಕೃಷಿ ಮೇಳ, ಅಂತರಾಷ್ಟ್ರೀಯ ಸಿರಿಧಾನ್ಯ ಶೃಂಗಸಭೆ ಮತ್ತು ಕೃಷಿ ಯುವಜನೋತ್ಸವ ಕುರಿತು 5 ಪತ್ರಿಕಾ ಗೋಷ್ಠಿಗಳನ್ನು ಘಟಕವು ಆಯೋಜಿಸಿತ್ತು. ಪತ್ರಿಕಾ ಗೋಷ್ಠಿಗಳಲ್ಲಿ ಕುಲಪತಿಗಳು ಮತ್ತು ಅಧಿಕಾರಿಗಳು ಭಾಗವಹಿಸಿದ್ದರು.
4. **ಜನಪ್ರಿಯ/ಯಶೋಗಾಥೆಗಳು:** ಘಟಕವು ಪ್ರಸ್ತುತ ವರ್ಷದಲ್ಲಿ ವಿಶ್ವವಿದ್ಯಾನಿಲಯದ ತಂತ್ರಜ್ಞಾನ ಮತ್ತು ಪ್ರಶಸ್ತಿ ವಿಜೇತ ಹಾಗೂ ಪ್ರಗತಿಪರ ರೈತ / ರೈತಮಹಿಳೆಯರ ಕುರಿತ 13 ಯಶೋಗಾಥೆಗಳು

classes and written examination for 1st Semester of 2022-23 year for which 45 candidates had attended.

**Nodal Training Centre of DAESI:** As Nodal Training Centre of Diploma in Agriculture Extension Services for Input Dealers (DAESI) sponsored by MANAGE Hyderabad, two batches were organised for 78 candidates of Batch –IV(40) and Batch – V(38) of Bangalore Urban and Rural District. As per the norms, 40 classes and eight Field visits were organised during the program for each batch and also monthly test, practical and written examinations were conducted.

### 4.4.5 Farm Information Unit (FIU)

The mandates of the Farm Information Unit (FIU) are to co-ordinate with mass media, publication of package of practices, publication of technical literature, organizing / participating in exhibitions & Krishimelas and developing audio – visual aids. The unit carried out the following activities during the year.

1. **Press releases:** The unit provided information to the mass media through 60 press releases. The information provided were broadly classified as U.G, P.G and Diploma courses notifications & admissions, convocation, foundation day, Krishimela, seminars / workshops / symposium, celebration of events, awards and achievements of the university.
2. **Press visits and media coverage:** The unit arranged 31 press visits. Both electronic and print media personnel were invited to the University. As many as 414 events covered by different medias.
3. **Press Conference:** It is a customary of the University to call for Press Conference prior to organizing important functions/activities to brief the press about the aims and objectives and to share the achievements of the University as and when it is required by the Vice-Chancellor and officers of the University. Five press conferences were addressed by the VC and officers of the University in view of Convocation, Krishimela, National Millet Summit and Agri Unifest.
4. **Popular / success stories:** During the year the unit involved in publication of 13 popular articles on the technologies of the University and success

/ ಜನಪ್ರಿಯ ಲೇಖನಗಳನ್ನು ಪ್ರಮುಖ ದಿನ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳಲ್ಲಿ ಪ್ರಕಟಿಸಲಾಯಿತು.

5. **ದೂರದರ್ಶನ ಸಂಯೋಜಿತ ಕಾರ್ಯಕ್ರಮಗಳು:** ಘಟಕವು ವಿಶ್ವವಿದ್ಯಾನಿಲಯದ ತಂತ್ರಜ್ಞಾನ ಮತ್ತು ಚಟುವಟಿಕೆಗಳನ್ನು ಕುರಿತು ದೂರದರ್ಶನ (ಚಂದನ-ಕನ್ನಡ ವಾಹಿನಿ), ಆಕಾಶವಾಣಿಯಲ್ಲಿ (ಕೃಷಿರಂಗ) ಮತ್ತು ಇತರೆ ಖಾಸಗಿ ಟಿ.ವಿ.ಚಾನಲ್‌ಗಳಲ್ಲಿ 219 ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ವಿದ್ಯುನ್ಮಾನ ಮಾಧ್ಯಮಗಳ ಜೊತೆ ಸಂಯೋಜನೆ ಕೈಗೊಂಡಿತ್ತು.
6. **ವಿಶೇಷ ಲೇಖನಗಳು/ಕಾರ್ಯಕ್ರಮಗಳು:** ಘಟಕವು ಕೃಷಿ ತಂತ್ರಜ್ಞಾನಗಳ ಕುರಿತು 64 ವಿಶೇಷ ಲೇಖನಗಳನ್ನು ಪ್ರಕಟಿಸಲು / ಪ್ರಸಾರ ಮಾಡಲು ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳ ಜೊತೆ ಸಂಯೋಜನೆ ಕೈಗೊಂಡಿತ್ತು ಮತ್ತು 85 ವಿಶೇಷ ಲೇಖನಗಳಿಗಾಗಿ ಮಾಧ್ಯಮ ವ್ಯಕ್ತಿಗಳ ಜೊತೆ ಸಮನ್ವಯ ಕೈಗೊಂಡಿತ್ತು.
7. **ವಸ್ತುಪ್ರದರ್ಶನ:** ಘಟಕವು ವಿಶ್ವವಿದ್ಯಾಲಯದ ತಂತ್ರಜ್ಞಾನವನ್ನು ಪ್ರದರ್ಶಿಸಲು ರಾಜ್ಯ ಮತ್ತು ರಾಷ್ಟ್ರಮಟ್ಟದ 10 ಪ್ರದರ್ಶನಗಳು / ಕೃಷಿ ಮೇಳಗಳಲ್ಲಿ ಭಾಗವಹಿಸಿತ್ತು. ಕೃಷಿ ವಿಶ್ವವಿದ್ಯಾನಿಲಯದ ತಂತ್ರಜ್ಞಾನಗಳು ಮತ್ತು ಚಟುವಟಿಕೆಗಳ ಕುರಿತು ಆರು ಶ್ರವಣ ದೃಶ್ಯ ಸಾಧನಗಳನ್ನು ತಯಾರಿಸಿ ಪ್ರದರ್ಶಿಸಲಾಯಿತು.
8. **ರಾಜ್ಯಮಟ್ಟದ ಮಾಧ್ಯಮ ಸಮನ್ವಯ ಸಮಿತಿ ಸಭೆಯಲ್ಲಿ ಭಾಗವಹಿಸುವಿಕೆ:** ಘಟಕವು ರಾಜ್ಯ ಮಟ್ಟದ ಸಮೂಹ ಮಾಧ್ಯಮ ಸಮನ್ವಯ ಸಮಿತಿಯ ಏಳು ಸಭೆಗಳಲ್ಲಿ ಭಾಗವಹಿಸಿತ್ತು.

### 4.4.6 ದೂರ ಶಿಕ್ಷಣ ಘಟಕ

ದೂರ ಶಿಕ್ಷಣ ಯೋಜನೆಗಳನ್ನು ನಿರ್ವಹಿಸುವ ದೂರ ಶಿಕ್ಷಣ ಘಟಕವನ್ನು ವಿಸ್ತರಣಾ ನಿರ್ದೇಶನಾಲಯುದಲ್ಲಿ 2012ರಲ್ಲಿ ವಿಲೀನಗೊಳಿಸಲಾಯಿತು. ದೂರ ಶಿಕ್ಷಣ ಘಟಕವು ರೈತ ಹಾಗೂ ಯುವರೈತರ ಪ್ರಯೋಜನಕ್ಕಾಗಿ ಈ ಮುಂದಿನ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುತ್ತಿದೆ. (1) ಒಂದು ವರ್ಷದ ಸ್ನಾತಕೋತ್ತರ ಕೃಷಿ ಡಿಪ್ಲೊಮಾ (ಪಿಜಿಡಿಎ) (2) ಒಂದು ವರ್ಷದ ಕೃಷಿ ಡಿಪ್ಲೊಮಾ (3) ಸಮಗ್ರ ಕೃಷಿ ಪದ್ಧತಿ (4) ಸಾವಯವ ಕೃಷಿ (5) ಜೇನುಸಾಕಣೆ (6) ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗಳು ಮತ್ತು (7) ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ ಕೋರ್ಸ್‌ಗಳು. ಸಂಭಂದಿತ ವಿವರಗಳನ್ನು ಅನುಬಂಧ 3.6ರಲ್ಲಿ ನೀಡಲಾಗಿದೆ.

### 4.4.7 ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ

**ಉದ್ದೇಶಗಳು**

1. ಸಾಂಸ್ಥಿಕ ಮಟ್ಟದಲ್ಲಿ ಏಕಗವಾಕ್ಷಿ ವ್ಯವಸ್ಥೆಯಡಿ ಕಾರ್ಯ ನಿರತವಾಗಿ ಕೃಷಿ ಮಾಹಿತಿ ಹಾಗೂ ಉತ್ಪನ್ನಗಳನ್ನು ರೈತರಿಗೆ ಒದಗಿಸುವುದು

stories of the award winning and progressive farmers / farm women in leading news papers and magazines.

5. **TV / Radio Co-ordinated programmes:** The unit co-ordinated with Prasarbrathi in telecasting / broad casting 219 programmes in Doordarshan (Chandana - channel) and Akashavani (Krishiranga) and Private TV Channels on University activities and technologies.
6. **Special Article / Feature:** The Unit co-ordinated with electronic and print media for publication / telecasting 64 special articles / features on agricultural technologies and 85 Co-ordination to media persons for special articles
7. **Exhibitions:** The Unit participated in 10 Krishimelas / exhibitions at regional, state and national level to showcase the technologies of the University. To exhibit the technologies effectively, six exhibits related to agriculture and allied activities on the important technologies released by UAS (B) were prepared and displayed in the exhibitions.
8. **Participation in State Level Media Co-ordination committee meeting:** The Unit attended seven state level media co-ordination committee meetings.

### 4.4.6 Distance Education Unit (DEU)

Distance Education Unit was started in the Directorate of Extension since 2012, after merging the distance education programmes functioning at GKVK. For the benefit of farmers and farm youth: The unit is offering the Diploma and Certificate Courses are (1) Post Graduate Diploma in Agriculture (PGDA) (2) One Year Diploma in Agriculture (3) Integrated Farming System (4) Organic Farming (5) Bee Keeping (6) Seed Production Technologies in Agriculture and (7) Agricultural Equipment Maintenance. The details are provided in Annexure 3.6.

### 4.4.7 Agricultural Technology Information Centre (ATIC)

**Objectives**

1. To offer single window delivery system for agricultural information and the products at institutional level

2. ವಿವಿಧ ವಿಷಯ ತಜ್ಞರುಗಳಿಂದ ರೈತರ ಸಮಸ್ಯೆಗಳಿಗೆ ತಾಂತ್ರಿಕ ಸಲಹೆಗಳನ್ನು ನೀಡುವುದು
3. ಸುಧಾರಿತ ಕೃಷಿ ತಂತ್ರಜ್ಞಾನಗಳ ಪ್ರಕಟಣೆಗಳು ಮತ್ತು ಮಾಧ್ಯಮಗಳ ಮೂಲಕ ರೈತರಿಗೆ ತಲುಪಿಸುವುದು
4. ಬಳಕೆದಾರರ ಅನಿಸಿಕೆ, ಅನುಭವಗಳನ್ನು ದಾಖಲಿಸಿ ಕೃಷಿ ವಿಶ್ವವಿದ್ಯಾನಿಲಯಕ್ಕೆ ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸುವುದು
5. ಮಾಹಿತಿ ಸಂವಹನಾ ತಂತ್ರಜ್ಞಾನಗಳ ಮೂಲಕ ತಾಂತ್ರಿಕ ಮಾಹಿತಿಯನ್ನು ಒದಗಿಸುವುದು

**ಸಲಹಾ ಸೇವೆಗಳು**

ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರವು ಎಂಟು ಕ್ಷೇತ್ರ ಭೇಟಿ, 2524 ದೂರವಾಣಿ ಕರೆ, 2662 ಸಮಾಲೋಚನೆಗಳು ಹಾಗೂ 6555 ವಾಟ್ಸಪ್ ಸಲಹೆಗಳನ್ನು ಒಳಗೊಂಡಂತೆ ಒಟ್ಟು 11,749 ರೈತ ಸಲಹಾ ಸೇವೆಗಳನ್ನು ಒದಗಿಸಲಾಗಿದೆ. ಅಲ್ಲದೆ, 50,880 ರೈತರು, ವಿಸ್ತರಣಾ ಕಾರ್ಯಕರ್ತರು ಹಾಗೂ ಇತರರು ಕೇಂದ್ರಕ್ಕೆ ಭೇಟಿ ನೀಡಿದ್ದಾರೆ.

**ಬೀಜ, ಸಸಿ, ಕೃಷಿ ಸಾಹಿತ್ಯ ಇತ್ಯಾದಿ ಉತ್ಪನ್ನಗಳ ಮಾರಾಟ**

ಕೇಂದ್ರವು ಬೀಜ, ಸಸಿ, ಕೃಷಿ ಪುಸ್ತಕ ಇತ್ಯಾದಿಗಳ ಮಾರಾಟದಿಂದ ರೂ.1,65,64,658/- (ಒಂದು ಕೋಟಿ ಅರವತ್ತೈದು ಲಕ್ಷ ಅರವತ್ತು ನಾಲ್ಕು ಸಾವಿರದ ಆರು ನೂರ ಐವತ್ತೆಂಟು ರೂಪಾಯಿಗಳು ಮಾತ್ರ) ವಹಿವಾಟು ನಡೆಸಿದೆ. ಈ ಕೇಂದ್ರದ ಚಟುವಟಿಕೆ ಮತ್ತು ಮಾರಾಟ ವಿವರಗಳನ್ನು ಅನುಬಂಧ 3.7ರಲ್ಲಿ ನೀಡಲಾಗಿದೆ.

**4.4.8 ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯ**

ಜಿ.ಕೆ.ವಿ.ಕೆ. ಕ್ಯಾಂಪಸ್‌ನ ಪ್ರವೇಶದ್ವಾರದಲ್ಲಿ ಸ್ಥಾಪಿಸಲಾದ ಕೃಷಿ ವಿಜ್ಞಾನಗಳ ವಸ್ತು ಸಂಗ್ರಹಾಲಯದಲ್ಲಿ ಕೃಷಿಗೆ ಸಂಭಂದಿಸಿದ ಇತಿಹಾಸ, ತಂತ್ರಜ್ಞಾನ, ನಾವಿನ್ಯತೆ, ಇತ್ಯಾದಿ ಮಾಹಿತಿಯನ್ನು ವಿದ್ಯಾರ್ಥಿಗಳ, ರೈತರ ಹಾಗೂ ಸಾರ್ವಜನಿಕರ ಮಾಹಿತಿಗೆ ಮತ್ತು ಉಪಯೋಗಕ್ಕೆ ವ್ಯವಸ್ಥಿತವಾಗಿ ಪ್ರದರ್ಶಿಸಲಾಗಿದೆ. ಪೋಸ್ಟರ್, ನಕ್ಷೆ, ಗ್ರಾಫಿಕ್ಸ್, ಛಾಯಾಚಿತ್ರ, ಮಾದರಿಗಳು ಮುಂತಾದ ಶ್ರವಣ ದೃಷ್ಟಿ ಮಾಧ್ಯಮದ ಮೂಲಕ ಕೃಷಿಗೆ ಸಂಭಂಧಿತ ವಿಚಾರವನ್ನು ಪರಿಣಾಮಕಾರಿಯಾಗಿ ಸಂದರ್ಶಕರ ಮನಮುಟ್ಟಿಸಲು ಪ್ರಯತ್ನಿಸಲಾಗಿದೆ. ಸುಮಾರು 800 ಚದುರ ಮೀಟರ್‌ಗಳ ಪ್ರದೇಶದ ವಸ್ತು ಸಂಗ್ರಹಾಲಯ ಕಟ್ಟಡವನ್ನು ನಿರ್ಮಾಣ ಮಾಡಿ ಕೃಷಿ ಮಾಹಿತಿಯನ್ನು ಪ್ರದರ್ಶಿಸಲು ಕೃಷಿ ಇತಿಹಾಸ, ಕರ್ನಾಟಕದ ಕೃಷಿ, ಕೃಷಿ ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತು ಬೆಳವಣಿಗೆ, ರೇಷ್ಮೆ ಕೃಷಿ, ಜೇನು ಸಾಕಾಣಿಕೆ, ಕೃಷಿ ಅರಣ್ಯ, ಹವಾಮಾನ ಬದಲಾವಣೆ, ಕೃಷಿ ಯಾಂತ್ರಿಕರಣ, ಪುನರ್ಬಳಕೆ ಇಂಧನ, ಧಾನ್ಯ ಶೇಖರಣೆ ಮತ್ತು ವಿಸ್ತರಣಾ ತಂತ್ರಜ್ಞಾನಗಳಿಗೆ ಸಂಭಂದಿತ ವಿಷಯಗಳ ಬಗ್ಗೆ ಪ್ರದರ್ಶನವನ್ನು ಈಗಾಗಲೇ ಏರ್ಪಡಿಸಲಾಗಿದೆ. ಇತರೆ ವಿಷಯಗಳಿಗೆ ಸಂಭಂದಿಸಿದಂತೆ ಪ್ರದರ್ಶನದ ಕೆಲಸ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದ್ದು, ಕೃಷಿಮಾರುಕಟ್ಟೆ, ಹೈನುಗಾರಿಕೆ, ಕೋಳಿ ಸಾಕಣೆ ಮತ್ತು ಮೀನು ಸಾಕಣೆ ವಿಷಯಗಳ ಬಗ್ಗೆ ಪ್ರದರ್ಶನದ ಕೆಲಸ ಕಾಮಗಾರಿಗಳು ಕೈಗೊಳ್ಳಲಾಗುತ್ತಿದೆ. 2022–23ರಲ್ಲಿ 8,840 ಜನ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಿದ್ದಾರೆ.

2. To render farm advisory services to solve problems through multidisciplinary approach from different Subject Matter Specialists
3. To provide improved agricultural technologies through publications and other medias to the farmers
4. To establish a mechanism to get the feedback from the users to the University
5. To disseminate technical information through Information and Communication Technologies

## Advisory Services

The ATIC rendered 11,749 farm advisories comprising of eight field visits, 2524 telephone calls, 2662 face to face consultations, 6555 whatsapp messages. More than 50,880 farmers, extension workers and other stakeholders visited the centre.

## Marketing of different seeds / plants / literature

The ATIC has made total transaction of an amount of Rs. 1,65,64,658/- (Rupees one crore sixty five lakhs sixty four thousand six hundred fifty eight only) by the sale of products, plants, literature, seeds etc. and the details are provided in Annexure 3.7.

## 4.4.8 Agricultural Sciences Museum (ASM)

Information about history, technologies, innovations and other information related to agriculture have been displayed systematically at Agricultural Sciences Museum (ASM) for the benefit of students, farmers and general public. The museum has been established at the entrance of GKVK Campus. The posters, charts, photographs, graphics, modals, live specimens and other audio visual format have been developed to depict the information to the visitors. Nearly 800 Sq. mts building has been constructed exclusively for the said purpose. Exhibits related to history of agriculture, Karnataka agriculture, genesis and growth of Agricultural University, sericulture, apiculture, farm forestry, climate change, farm mechanization, bio-energy, grain storage and extension technologies have been developed and displayed. During the year display work with respect to the topics *viz.,* agriculture marketing, animal husbandry, poultry and fisheries have been developed and implementation is under progress. During 2022-23, nearly 8,840 people visited the museum.

### 4.4.9 ವಿಸ್ತರಣಾ ಶಿಕ್ಷಣ ಘಟಕ

ವಿಸ್ತರಣಾ ಶಿಕ್ಷಣ ಘಟಕಗಳು, ನಾಗನಹಳ್ಳಿ (ಮೈಸೂರು) ಮತ್ತು ಕೋಲಾರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಂಶೋಧನಾ ಫಲಿತಾಂಶಗಳ ಕಾರ್ಯಕ್ಷಮತೆಯ ಮೌಲ್ಯಮಾಪನ, ರುಜುವಾತಾದ ಫಲಿತಾಂಶಗಳ ಪ್ರಾತ್ಯಕ್ಷಿಕೆ, ತರಬೇತಿ ಕಾರ್ಯಕ್ರಮಗಳ ಆಯೋಜನೆ ಹಾಗೂ ಇತರ ಅಭಿವೃದ್ಧಿ ಇಲಾಖೆಗಳ, ಪರಿಕರ ಸಂಸ್ಥೆಗಳ ಮತ್ತು ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ವಿಸ್ತರಣಾ ಚಟುವಟಿಕೆಗಳ ಆಯೋಜನೆಯ ಆಧ್ಯಾದೇಶವನ್ನಾಗಿಸಿಕೊಂಡಿದೆ. ಘಟಕವು ಪ್ರಸ್ತುತ ವರದಿಯ ವರ್ಷದಲ್ಲಿ ಈ ಮುಂದಿನ ಚಟುವಟಿಕೆಗಳನ್ನು ಕೈಗೊಂಡಿದೆ:

**ಕ್ಷೇತ್ರ ಪ್ರಯೋಗಗಳು:** ರೈತರ ಜಮೀನುಗಳಲ್ಲಿ ಸಂಶೋಧನೆಯ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಲು ಸಂಶೋಧನೆಯ ಅಂತಿಮ ಹಂತವಾಗಿ ಕ್ಷೇತ್ರ ಪ್ರಯೋಗಗಳನ್ನು ಕೈಗೊಳ್ಳಲಾಗಿತ್ತು. ಒಟ್ಟು 11 ಕ್ಷೇತ್ರ ಪ್ರಯೋಗಗಳನ್ನು 45 ರೈತರನ್ನೊಳಗೊಂಡಂತೆ ನಡೆಸಲಾಗಿತ್ತು. ವಿವರಗಳನ್ನು ಅನುಬಂಧ 3.8ರಲ್ಲಿ ನೀಡಲಾಗಿದೆ.

**ಮುಖ್ಯಾಂಶಗಳು**

1. ಭತ್ತದ ತಳಿ ಕೆ.ಆರ್.ಹೆಚ್–4 ತಳಿಯು ಪ್ರತೀ ಹೆಕ್ಟೇರಿಗೆ 7856 ಕಿ.ಗ್ರಾಂ ನಷ್ಟು ಕಾಳಿನ ಇಳುವರಿಯನ್ನು ಹೊಂದಿದ್ದು, ಪರೀಕ್ಷಾ ತಳಿಯಾದ ಕೆ.ಆರ್.ಹೆಚ್–11 ತಳಿಯು ಪ್ರತೀ ಹೆಕ್ಟೇರಿಗೆ 7352 ಕಿ.ಗ್ರಾಂ ನಷ್ಟು ಇಳುವರಿಯನ್ನು ಹೊಂದಿರುತ್ತದೆ. ಒಟ್ಟಿನಲ್ಲಿ ಕೆ.ಆರ್.ಹೆಚ್–4 ತಳಿಯು ಪರೀಕ್ಷಾ ತಳಿಯಾದ ಕೆ.ಆರ್.ಹೆಚ್–11 ತಳಿಗಿಂತ ಶೇ. 6.85 ರಷ್ಟು ಹೆಚ್ಚಿನ ಕಾಳಿನ ಇಳುವರಿ ಹೊಂದಿರುತ್ತದೆ.
2. ಸಾಮೆ ತಳಿ ಜಿ.ಪಿ.ಯು.ಎಲ್–11 ತಳಿಯು ಪ್ರತೀ ಹೆಕ್ಟೇರಿಗೆ 1385 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಹೊಂದಿದ್ದು, ಹೋಲಿಕೆ ತಳಿಯಾದ ಬಿ.ಎಲ್–6 ತಳಿಯು ಹೆಕ್ಟೇರಿಗೆ 1085 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಹೊಂದಿರುತ್ತದೆ. ಜಿ.ಪಿ.ಯು.ಎಲ್–11 ತಳಿಯು ಹೋಲಿಕೆ ತಳಿ ಬಿ.ಎಲ್–6 ತಳಿಗಿಂತ ಶೇ. 27.65 ರಷ್ಟು ಹೆಚ್ಚಿನ ಕಾಳಿನ ಇಳುವರಿ ಹೊಂದಿರುತ್ತವೆ.
3. ಬರಗು ತಳಿ ಜಿ.ಪಿ.ಯು.ಪಿ–32 ತಳಿಯು ಪ್ರತೀ ಹೆಕ್ಟೇರಿಗೆ 1300 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಹೊಂದಿದ್ದು, ಹೋಲಿಕೆ ತಳಿಯಾದ ಜಿ.ಪಿ.ಯು.ಪಿ–21 ತಳಿಯು ಹೆಕ್ಟೇರಿಗೆ 1165 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಹೊಂದಿರುತ್ತದೆ. ಸರಾಸರಿ ಶೇ.11.59 ರಷ್ಟು ಹೆಚ್ಚಿನ ಕಾಳಿನ ಇಳುವರಿ ಹೊಂದಿರುತ್ತವೆ.
4. ನಾಟಿ ಭತ್ತದಲ್ಲಿ ಜೈವಿಕ ಗೊಬ್ಬರಗಳ ಬಳಕೆಯ ಮರು ಮೌಲೀಕರಣದ ಪ್ರತೀ ಹೆಕ್ಟೇರಿಗೆ 8020 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಹೊಂದಿದ್ದು, ಉಪಚಾರ ರಹಿತ ತಾಕಿನಲ್ಲಿ ಪ್ರತೀ ಹೆಕ್ಟೇರಿಗೆ 7255 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಹೊಂದಿರುತ್ತದೆ. ಒಟ್ಟಿನಲ್ಲಿ ಉಪಚಾರ ರಹಿತ ಭತ್ತದ ತಾಕಿಗೆ ಹೋಲಿಸಿದ್ದಲ್ಲಿ ಜೈವಿಕ ಮಿಶ್ರಣ ಗೊಬ್ಬರದ ತಾಕಿನಲ್ಲಿ ಶೇ. 10.54 ರಷ್ಟು ಹೆಚ್ಚಿನ ಕಾಳಿನ ಇಳುವರಿ ಹೊಂದಿರುತ್ತದೆ.
5. ಮುಸುಕಿನ ಜೋಳದಲ್ಲಿ ಸೂಕ್ಷ್ಮ ಪೋಷಕಾಂಶಗಳ ಮಿಶ್ರಣದ ಬಳಕೆಯಲ್ಲಿ ತಾಕಿನಲ್ಲಿ ಪ್ರತೀ ಹೆಕ್ಟೇರಿಗೆ 7648 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಹೊಂದಿದ್ದು, ಶಿಫಾರಸ್ಸು ಮಾಡಿರುವ ರಸಗೊಬ್ಬರದ ತಾಕಿನಲ್ಲಿ ಪ್ರತೀ ಹೆಕ್ಟೇರಿಗೆ 6940 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಹೊಂದಿರುತ್ತದೆ. ಒಟ್ಟಿನಲ್ಲಿ ಶಿಫಾರಸ್ಸು

### 4.4.9 Extension Education Units (EEUs)

The Extension Education Unit (EEU), Naganahalli, Mysore and Kolar, has the mandate to evaluate the performance of research findings, to demonstrate the proven research findings, to conduct training programmes and other extension educational activities with the collaboration of developmental departments, input agencies and NGO's. The following activities were performed during the year 2022-23.

**Farm trials:** The farm trials were conducted to evaluate the performance of research findings on the farmers field as a tail end research. There were 11 farm trials were conducted involving 45 farmers. The details are provided in Annexure 3.8.

### Highlights

1. KRH-4 paddy hybrid produced higher grain yield of 7856 kg/ha over test variety of KRH-11 (7352 kg/ha). The mean grain yield was increased by 6.85 per cent over test variety.
2. Little millet variety of GPUL-11 resulted higher grain yield of 1385 kg/ha than check variety of BL-6 (1085 kg/ha). The mean yield was increased 27.65 per cent over check.
3. Proso millet variety GPUP-32 recorded higher grain yield of 1300 kg/ha compared to check variety GPUP-21 (1165 kg/ha). The mean yield was increased by 11.59 per cent than check.
4. Revalidation of bio fertilizer in Paddy crop recorded higher grain yield of 8020 kg/ha compared to recommended dose of fertilizer (7255 kg/ha). The mean yield was increased by 10.54 per cent than check.
5. The use of micronutrient mixture in Maize at 40 and 60 DAS recorded 7648 kg/ha compared to recommended dose of fertilizer (6940 kg/ha). The mean yield was increased by 10.20 per cent than check.

ಮಾಡಿರುವ ರಸಗೊಬ್ಬರದ ತಾಕಿಗೆ ಹೋಲಿಸಿದ್ದಲ್ಲಿ ಸೂಕ್ಷ್ಮ ಪೋಷಕಾಂಶಗಳ ಮಿಶ್ರಣದ ಬಳಕೆಯ ತಾಕಿನಲ್ಲಿ ಶೇ. 10.20 ರಷ್ಟು ಹೆಚ್ಚಿನ ಕಾಳಿನ ಇಳುವರಿ ದಾಖಲಾಗಿರುತ್ತದೆ.

6. ಗುಣಿ ವಿಧಾನದಲ್ಲಿ ರಾಗಿ ಬೆಳೆಯ ಕ್ಷೇತ್ರ ಪ್ರಯೋಗದಲ್ಲಿ 30 x 30 ಸೆಂ.ಮೀ. ಅಂತರದಲ್ಲಿ ನಾಟಿ ಮಾಡಿದ 20ನೇ ಹಾಗೂ 40ನೇ ದಿನದಲ್ಲಿ ಅಂತರ ಬೇಸಾಯ ಪದ್ಧತಿಯಲ್ಲಿ ಪ್ರತೀ ಹೆಕ್ಟೇರಿಗೆ 3680 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಹೊಂದಿದ್ದು, ಶಿಫಾರಸ್ಸು ಮಾಡಿರುವ ರಸಗೊಬ್ಬರದ ತಾಕಿನಲ್ಲಿ ಪ್ರತೀ ಹೆಕ್ಟೇರಿಗೆ 3170 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಹೊಂದಿರುತ್ತದೆ. ಒಟ್ಟಿನಲ್ಲಿ ಶಿಫಾರಸ್ಸು ಮಾಡಿರುವ ರಸಗೊಬ್ಬರದ ತಾಕಿಗೆ ಹೋಲಿಸಿದರೆ ಗುಣಿ ವಿಧಾನ ಪದ್ಧತಿಯಲ್ಲಿ ಶೇ. 16.08 ರಷ್ಟು ಹೆಚ್ಚಿನ ಕಾಳಿನ ಇಳುವರಿ ಹೊಂದಿರುತ್ತದೆ.

7. ಭತ್ತದ ಕೃಷಿಯಲ್ಲಿ ಸ್ಲಾಗ್ ಆಧಾರಿತ ಜಿಪ್ಸಂ ಬಳಕೆಯ ಕ್ಷೇತ್ರ ಪ್ರಯೋಗದಲ್ಲಿ $T_2$ (ಶಿ.ಪ್ರ.ಗೊ + 450 ಕೆ.ಜಿ ವಾಣಿಜ್ಯ ಬಳಕೆಯ ಜಿಪ್ಸಂ ಪ್ರತಿ ಹೆಕ್ಟೇರ್‌ಗೆ (CG) ಉಪಚಾರ ತಾಕಿನಲ್ಲಿ ಪ್ರತೀ ಹೆಕ್ಟೇರಿಗೆ 7792 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಮತ್ತು $T_1$ ಉಪಚಾರ ತಾಕಿನಲ್ಲಿ (ಶಿಫಾರಸ್ಸಿನ ಪ್ರಮಾಣದ ಗೊಬ್ಬರ (ಶಿ.ಪ್ರ.ಗೊ – RDF) ಪ್ರತೀ ಹೆಕ್ಟೇರಿಗೆ 7125 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಹೊಂದಿರುತ್ತದೆ. ಒಟ್ಟಿನಲ್ಲಿ $T_1$ ತಾಕಿಗೆ ಹೋಲಿಸಿದ್ದಲ್ಲಿ $T_2$ ತಾಕಿನಲ್ಲಿ ಶೇ. 9.36 ರಷ್ಟು ಹೆಚ್ಚಿನ ಕಾಳಿನ ಇಳುವರಿ ದಾಖಲಾಗಿರುತ್ತದೆ.

8. ಮುಸುಕಿನ ಜೋಳದ ಕೃಷಿಯಲ್ಲಿ ಸ್ಲಾಗ್ ಆಧಾರಿತ ಜಿಪ್ಸಂ ಬಳಕೆಯ ಕ್ಷೇತ್ರ ಪ್ರಯೋಗದಲ್ಲಿ T2 ಉಪಚಾರದ ತಾಕಿನಲ್ಲಿ (ಶಿ.ಪ್ರ.ಗೊ + 450 ಕೆ.ಜಿ ವಾಣಿಜ್ಯ ಬಳಕೆಯ ಜಿಪ್ಸಂ ಪ್ರತಿ ಹೆಕ್ಟೇರ್‌ಗೆ (CG)) ಪ್ರತೀ ಹೆಕ್ಟೇರಿಗೆ 7150 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಮತ್ತು T1 ಉಪಚಾರದ ತಾಕಿನಲ್ಲಿ (ಶಿಫಾರಸ್ಸಿನ ಪ್ರಮಾಣದ ಗೊಬ್ಬರ (ಶಿ.ಪ್ರ.ಗೊ – RDF) ಪ್ರತೀ ಹೆಕ್ಟೇರಿಗೆ 6508 ಕಿ.ಗ್ರಾಂ ನಷ್ಟು ಕಾಳಿನ ಇಳುವರಿ ಬಂದಿರುತ್ತದೆ. ಒಟ್ಟಿನಲ್ಲಿ T1 ತಾಕಿಗೆ ಹೋಲಿಸಿದ್ದಲ್ಲಿ T2 ತಾಕಿನಲ್ಲಿ ಶೇ. 9.86 ರಷ್ಟು ಹೆಚ್ಚಿನ ಕಾಳಿನ ಇಳುವರಿ ಹೊಂದಿರುತ್ತದೆ.

9. ಭತ್ತದ ಒಣ ಸಸಿಮಡಿಯಲ್ಲಿ ಉದಯ ಪೂರ್ವ ಕಳೆನಾಶಕ ಬಿಸ್ಪಿರಿಬಾಕ್ ಸೋಡಿಯಂ (10% ಎಸ್.ಸಿ) @25 ಗ್ರಾಂ. ಎ.ಐ /ಹೆ 10–12ನೇ ದಿನದಲ್ಲಿ ಬಳಸಿದ ತಾಕಿನಲ್ಲಿ 10ನೇ ದಿನದಲ್ಲಿ ಕೈಯಿಂದ ಕಳೆ ತೆಗೆದಿರುವ ತಾಕಿಗಿಂತ ಉತ್ತಮವಾದ ಕಳೆ ನಿರ್ವಹಣೆಯಾಗಿರುವುದು ಕಂಡುಬಂದಿರುತ್ತದೆ.

10. ಭತ್ತದ ಕೆಸರು ಸಸಿಮಡಿಯಲ್ಲಿ ಉದಯ ಪೂರ್ವ ಕಳೆನಾಶಕ ಬಿಸ್ಪಿರಿಬಾಕ್ ಸೋಡಿಯಂ (10% ಎಸ್.ಸಿ) @25 ಗ್ರಾಂ. ಎ.ಐ /ಹೆ 10–12ನೇ ದಿನದಲ್ಲಿ ಬಳಸಿದ ತಾಕಿನಲ್ಲಿ 10ನೇ ದಿನದಲ್ಲಿ ಕೈಯಿಂದ ಕಳೆ ತೆಗೆದಿರುವ ತಾಕಿಗಿಂತ ಉತ್ತಮವಾದ ಕಳೆ ನಿರ್ವಹಣೆಯಾಗಿರುವುದು ಕಂಡುಬಂದಿರುತ್ತದೆ.

11. ರಾಗಿ ತಳಿಯ ಕ್ಷೇತ್ರ ಪ್ರಯೋಗದಲ್ಲಿ ML 322 ತಳಿಯು ಹೋಲಿಕೆ ತಳಿಯಾದ KMR 301 ತಳಿಗಿಂತ ಪ್ರತೀ ಹೆಕ್ಟೇರಿಗೆ 2126.2 ಕಿ.ಗ್ರಾಂ ನಷ್ಟು ಹೆಚ್ಚಿನ ಕಾಳಿನ ಇಳುವರಿಯನ್ನು ಹೊಂದಿರುತ್ತದೆ.

**ಮುಂಚೂಣಿ ಪ್ರಾತ್ಯಕ್ಷಿಕೆಗಳು:** ವಿಸ್ತರಣಾ ಶಿಕ್ಷಣ ಘಟಕ, ನಾಗನಹಳ್ಳಿ (ಮೈಸೂರು) ಮತ್ತು ಕೋಲಾರ ಕೇಂದ್ರಗಳಿಂದ 91.2 ಹೆ. ಕ್ಷೇತ್ರದಲ್ಲಿ

6. Ragi cultivation in guni method with spacing of 30x30 cm, inter cultivation @ 20 and 40 DAS recorded 3680 kg/ha compared to recommended dose of fertilizer (3170 kg/ha). The mean yield was increased by 16.08 per cent than check.

7. Use of slag based Gypsum in paddy crop $T_3$ (at the time of sowing Urea-2.63 kg, DAP-3.26 kg, MOP-2.49 kg, Application of 13.50 kg Slag based Gypsum and at 30 DAS Urea-1.31kg, at 60 DAS Urea-1.31kg) produced higher grain yield of 8275 kg/ha over $T_1$ (7125 kg/ha) and $T_2$ (7792 kg/ha). The mean of $T_2$ was increased by 9.36 per cent over $T_{1.}$

8. Use of slag based Gypsum in maize crop $T_2$ (at the time of sowing Urea-3.93 kg, DAP-4.89 kg, MOP-2.00 kg Application of 13.50 kg Slag based gypsum, at 30 DAS Urea-1.96 kg, at 60 DAS-Urea:1.96 kg) produced higher grain yield of 7625 kg/ha over $T_1$ (6508 kg/ha) and $T_2$ (7150 kg/ha). The mean of $T_2$ was increased by 9.86 per cent over $T_{1.}$

9. Application of Bispyribac sodium 10% SC at 25 g a.i /ha applied at 10 days after sowing in dry paddy nursery resulted in better weed control than hand weeding at 10 days after sowing.

10. Application of Bispyribac sodium 10% SC at 25g a.i /ha applied at 10 days after sowing in wet Paddy nursery resulted in better weed control than hand weeding at 10 days after sowing.

11. ML 322 Finger millet variety produced higher grain yield of 2126.2 kg/ha over check variety of KMR 301 (2006.8 kg/ha).

**Frontline Demonstrations (FLDs):** The Extension Education Unit, Naganahalli, Mysore and Kolar has

434 ಜನ ರೈತರನ್ನು ಒಳಗೊಂಡಂತೆ 374 ಸ್ಥಳಗಳಲ್ಲಿ ಮೈಸೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ 34 ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗಿತ್ತು. ಈ ಪ್ರಾತ್ಯಕ್ಷಿಕೆಗಳನ್ನು ಭತ್ತದ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ, ಭತ್ತದ ನೇರಬಿತ್ತನೆ, ಡ್ರಂ ಸೀಡರ್ ಭತ್ತದ ಬೇಸಾಯ, ಸಾವಯವ ಕೃಷಿಯಲ್ಲಿ ಭತ್ತ, ಮುಸುಕಿನಜೋಳ, ರಾಗಿ, ನವಣೆ ಬೆಳೆಗಳಲ್ಲಿ ಸಮಗ್ರ ಬೆಳೆ ನಿರ್ವಹಣೆ, ಬಿ.ಆರ್.ಜಿ–5 ತೊಗರಿ, ಹೆಚ್.ಎ–4 ಅವರೆ ಬೆಳೆಯಲ್ಲಿ ತಳಿಗಳ ಪ್ರಾತ್ಯಕ್ಷಿಕೆ, ಟೊಮ್ಯಾಟೋ, ಮೆಣಸಿನಕಾಯಿ, ಮಾವಿನಹಣ್ಣು, ಬಾಳೆ, ಶುಂಠಿ ಬೆಳೆಗಳಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ, ಬಹುಕಟಾವು ಮೇವು: COFS–31, COFS–29 ಮತ್ತು ಅಣಬೆ ಬೇಸಾಯ, ಪೌಷ್ಟಿಕ ಕೈತೋಟ ಪರಿಚಯ ಪ್ರಾತ್ಯಕ್ಷಿಕೆಗಳನ್ನು ಪರಿಚಯಿಸಲು ಕೈಗೊಳ್ಳಲಾಗಿತ್ತು. ಪ್ರಾತ್ಯಕ್ಷಿಕೆಗಳ ವಿವರಗಳನ್ನು ಅನುಬಂಧ 3.9 ರಲ್ಲಿ ನೀಡಲಾಗಿದೆ.

**ಮುಂಚೂಣಿ ಪ್ರಾತ್ಯಕ್ಷಿಕೆಯ ಮುಖ್ಯಾಂಶಗಳು**

1. ಭತ್ತದ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆಯನ್ನು ಕೆ.ಆರ್.ಹೆಚ್–4 ಹೈಬ್ರಿಡ್ ಭತ್ತ ಹಾಗೂ ಇತರೆ ಉತ್ಪಾದನಾ ತಾಂತ್ರಿಕತೆಗಳನ್ನು ಅಳವಡಿಸಿ 4.00 ಹೆಕ್ಟೇರ್ ಪ್ರದೇಶದಲ್ಲಿ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಗಿತ್ತು. ಪ್ರಾತ್ಯಕ್ಷಿಕೆ ಫಲಿತಾಂಶದಲ್ಲಿ ಹೆಕ್ಟೇರಿಗೆ 7762 ಕೆ.ಜಿ. ಇಳುವರಿ ಬಂದಿದ್ದು, ರೈತರ ಪದ್ಧತಿಯಲ್ಲಿ ಹೆಕ್ಟೇರಿಗೆ 6732 ಕೆ.ಜಿ. ಇಳುವರಿ ಬಂದಿರುತ್ತದೆ. ಪ್ರಾತ್ಯಕ್ಷಿಕೆ ಫಲಿತಾಂಶದಲ್ಲಿ ರೈತರ ಪದ್ಧತಿಗಿಂತ ಶೇ.15.35 ರಷ್ಟು ಹೆಚ್ಚಿನ ಕಾಳಿನ ಇಳುವರಿ ದಾಖಲಾಗಿರುತ್ತದೆ.

2. ಭತ್ತದ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆಯನ್ನು ಕೆ.ಎಂ.ಪಿ–220 ಭತ್ತದ ತಳಿ ಹಾಗೂ ಉತ್ಪಾದನಾ ತಾಂತ್ರಿಕತೆಗಳನ್ನು ಅಳವಡಿಸಿ 4.00 ಹೆಕ್ಟೇರ್ ಪ್ರದೇಶದಲ್ಲಿ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಗಿತ್ತು, ಪ್ರಾತ್ಯಕ್ಷಿಕೆ ಫಲಿತಾಂಶದಲ್ಲಿ ಹೆಕ್ಟೇರಿಗೆ 5583 ಕೆ.ಜಿ ಇಳುವರಿ ಬಂದಿದ್ದು, ರೈತರ ಪದ್ಧತಿಯಲ್ಲಿ ಹೆಕ್ಟೇರಿಗೆ 4761 ಕೆ.ಜಿ ಇಳುವರಿ ಬಂದಿರುತ್ತದೆ. ಪ್ರಾತ್ಯಕ್ಷಿಕೆ ಫಲಿತಾಂಶದಲ್ಲಿ ರೈತರ ಪದ್ಧತಿಗಿಂತ ಶೇ. 17.26 ರಷ್ಟು ಹೆಚ್ಚಿನ ಕಾಳಿನ ಇಳುವರಿ ದಾಖಲಾಗಿರುತ್ತದೆ.

3. ಕೆಸರು ಗದ್ದೆಯ ನೇರ ಬಿತ್ತನೆ ಪ್ರಾತ್ಯಕ್ಷಿಕೆಯನ್ನು 2.80 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು, ಪ್ರಾತ್ಯಕ್ಷಿಕೆ ಫಲಿತಾಂಶದಲ್ಲಿ ಹೆಕ್ಟೇರಿಗೆ 5120 ಕೆ.ಜಿ. ಇಳುವರಿ ದಾಖಲಾಗಿದ್ದರೆ, ರೈತರ ಪದ್ಧತಿಯಲ್ಲಿ ಹೆಕ್ಟೇರಿಗೆ 4598 ಕೆ.ಜಿ ಇಳುವರಿ ಬಂದಿರುತ್ತದೆ. ರೈತರ ಪದ್ಧತಿಗಿಂತ (ನಿರಂತರವಾಗಿ ನೀರು ನಿಲ್ಲಿಸಿ, 25–30 ದಿನದ ಪೈರನ್ನು ನಾಟಿ ಮಾಡುವ ಪದ್ಧತಿಯಲ್ಲಿ) ಪ್ರಾತ್ಯಕ್ಷಿಕೆಯಲ್ಲಿ ಶೇ.11.35 ರಷ್ಟು ಹೆಚ್ಚಿನ ಕಾಳಿನ ಇಳುವರಿ ದಾಖಲಾಗಿರುತ್ತದೆ.

4. ಸಾವಯವ ಭತ್ತದ ಪ್ರಾತ್ಯಕ್ಷಿಕೆಯನ್ನು 2.40 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು, ಪ್ರಾತ್ಯಕ್ಷಿಕೆ ಫಲಿತಾಂಶದಲ್ಲಿ ಹೆಕ್ಟೇರಿಗೆ 4199 ಕೆ.ಜಿ. ಇಳುವರಿ ಬಂದಿದ್ದು, ರೈತರ ಪದ್ಧತಿಯಲ್ಲಿ ಹೆಕ್ಟೇರಿಗೆ 3633ಕೆ.ಜಿ. ಇಳುವರಿ ಬಂದಿದ್ದು, ರೈತರು ಅನುಸರಿಸಿ ಬೇಸಾಯ ಮಾಡುವ ಸಾವಯವ ಪದ್ಧತಿಗಿಂತ ಪ್ರಾತ್ಯಕ್ಷಿಕೆಯು ಶೇ. 15.57 ರಷ್ಟು ಹೆಚ್ಚಿನ ಕಾಳಿನ ಇಳುವರಿ ಜೊತೆಗೆ ಮಣ್ಣಿನ ಸಾವಯವ ಇಂಗಾಲ ಹೆಚ್ಚಳವಾಗಿರುವುದು ದಾಖಲಾಗಿರುತ್ತದೆ.

conducted 34 demonstrations in 374 locations involving 434 farmers in an area of 91.2 ha of Mysore and Kolar districts. The demonstrations were conducted on integrated crop management in paddy, drum seeded rice, wet direct seeded rice, orgainc farming in rice, integrated crop management in Finger millet, Maize, Foxtail millet, Redgram var. BRG-5, Blackgram LBG-791, Field bean HA-4, Chilli, Mango, Tomato, Banana, Ginger, Multicut fodder Sorghum: COFS-31, COFS-29, oyster mushroom production and establishment of nutritional garden for farm families. The details are provided in Annexure 3.9.

**Highlights of demonstrations:**

1. Integrated crop management in Paddy involving KRH-4 hybrid with improved production technologies was conducted in an area of 4.00 ha during kharif 2022, indicates that mean yield due to adoption of ICM practices is 7762 kg/ha over farmers practice (6732 kg/ha). The mean yield due to adoption of ICM in Paddy hybrid was increased by 15.35 per cent than farmers practice.

2. Integrated crop management in Paddy involving high yielding Paddy variety KMP-220 with improved production technologies was implemented in an area of 4.00 ha during kharif 2022 resulted in 5583 kg/ha higher grain yield than farmer practice of 4761 kg/ha. The mean yield due to adoption of ICM in paddy (KMP-220) was increased by 17.26 per cent than farmers practice.

3. Integrated crop management in wet direct seeded Paddy was conducted in an area of 2.80 ha wherein the yield in demo plot recorded higher grain yield of 5120 kg/ha as against farmers practice of 4598 kg/ha.

4. Demonstration on organic farming practices in Paddy was conducted in an area of 2.40 ha, resulted higher grain yield of 4199 kg/ha over farmers practice of organic Paddy cultivation (3633 kg/ha).The mean yield due to adoption of organic farming practices was increased by 15.57 per cent besides improvement in organic carbon content compared to farmer practice of organic Paddy cultivation.

5. ರಾಗಿ ಬೆಳೆಯ ಸಮಗ್ರ ಪ್ರಾತ್ಯಕ್ಷಿಕೆಯನ್ನು 6.0 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು, (ರಾಗಿ ಹೊಸ ತಳಿ ಕೆ.ಎಂ.ಆರ್–630 ಹಾಗೂ ಉತ್ಪಾದನಾ ತಾಂತ್ರಿಕತೆಗಳು) ಪ್ರಾತ್ಯಕ್ಷಿಕೆ ಫಲಿತಾಂಶದಲ್ಲಿ ಹೆಕ್ಟೇರಿಗೆ 2685 ಕೆ.ಜಿ ಇಳುವರಿ ಬಂದಿದ್ದರೆ, ರೈತರ ಪದ್ದತಿಯಲ್ಲಿ ಹೆಕ್ಟೇರಿಗೆ 2275 ಕೆ.ಜಿ. ಇಳುವರಿ ಬಂದಿರುತ್ತದೆ. ರೈತರ ಪದ್ದತಿಗಿಂತ ಪ್ರಾತ್ಯಕ್ಷಿಕೆ ಫಲಿತಾಂಶದಲ್ಲಿ ಶೆ. 18.02 ರಷ್ಟು ಹೆಚ್ಚಿನ ಕಾಳಿನ ಇಳುವರಿ ಕಂಡುಬಂದಿರುತ್ತದೆ.

6. ತೊಗರಿ ಬೆಳೆಯ ಪ್ರಾತ್ಯಕ್ಷಿಕೆಯನ್ನು 8.0 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು (ಬಿ.ಆರ್.ಜಿ–5 ತಳಿ ಹಾಗೂ ಉತ್ಪಾದನಾ ತಾಂತ್ರಿಕತೆಗಳು) ಪ್ರಾತ್ಯಕ್ಷಿಕೆ ಫಲಿತಾಂಶದಲ್ಲಿ ಹೆಕ್ಟೇರಿಗೆ 1256 ಕೆ.ಜಿ ಇಳುವರಿ ಬಂದಿದ್ದರೆ, ರೈತರ ಪದ್ದತಿಯಲ್ಲಿ ಹೆಕ್ಟೇರಿಗೆ 1028 ಕೆ.ಜಿ ಇಳುವರಿ ಬಂದಿರುತ್ತದೆ. ಬಿ.ಆರ್.ಜಿ–5 ತಳಿಯು ಸ್ಥಳೀಯ ತಳಿಗಿಂತ ಹೆಚ್ಚು ಕವಲುಗಳು, ದಪ್ಪವಾದ ಕಾಳನ್ನು ಹೊಂದಿರುವುದಲ್ಲದೇ, ಸೊರಗುರೋಗ ನಿರೋಧಕತೆಯನ್ನು ಹೊಂದಿದ್ದು, ಶೇ.22.17 ರಷ್ಟು ಹೆಚ್ಚಿನ ಕಾಳಿನ ಇಳುವರಿ ಬಂದಿರುತ್ತದೆ.

7. ಅವರೆ ಬೆಳೆಯ ಪ್ರಾತ್ಯಕ್ಷಿಕೆಯನ್ನು 4.00 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು, ಪ್ರಾತ್ಯಕ್ಷಿಕೆ ಫಲಿತಾಂಶದಲ್ಲಿ ಹೆಕ್ಟೇರಿಗೆ 3402 ಕೆ.ಜಿ ಇಳುವರಿ ಬಂದಿದ್ದರೆ, ಹೆಚ್.ಎ–4 ತಳಿಯು, ರೈತರು ಬಳಸುವ ಸ್ಥಳೀಯ ತಳಿಗಿಂತ ಬೇಗ ಕಟಾವಿಗೆ ಬರುವುದಲ್ಲದೇ, ಮಣಿ ಅವರೆ ರೀತಿಯ ಸೊಗಡು ಹಾಗೂ ಕಾಯಿಗಳನ್ನು ಹೊಂದಿದ್ದು, ಶೇ.16.94 ರಷ್ಟು ಹೆಚ್ಚಿನ ಇಳುವರಿ ದಾಖಲಾಗಿರುತ್ತದೆ.

8. ಮುಸುಕಿನಜೋಳದಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆಯ ಪ್ರಾತ್ಯಕ್ಷಿಕೆಯನ್ನು 4.00 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು, ರೈತರ ಪದ್ದತಿಗಿಂತ (ಶೆ.12.5) ಪ್ರಾತ್ಯಕ್ಷಿಕೆ ಫಲಿತಾಂಶದಲ್ಲಿ (ಶೇ.5.50 ರಷ್ಟು) ಕಡಿಮೆ ರೋಗ / ಕೀಟದ ಬಾಧೆ ಕಂಡುಬಂದಿರುತ್ತದೆ. ಒಟ್ಟಾರೆ ಪ್ರಾತ್ಯಕ್ಷಿಕೆಯ ಫಲಿತಾಂಶವು ರೈತರ ಪದ್ಧತಿಗಿಂತ ಶೇ. 56.87 ರಷ್ಟು ಕಡಿಮೆ ರೋಗ / ಕೀಟ ಬಾಧೆ ಹೊಂದಿರುವುದು ಕಂಡುಬಂದಿದೆ.

9. ಭತ್ತದ ಬೆಳೆಯಲ್ಲಿ ಕಂದುಚುಕ್ಕೆ ರೋಗದ ಸಮಗ್ರ ನಿರ್ವಹಣೆಯ ಪ್ರಾತ್ಯಕ್ಷಿಕೆಯನ್ನು 4.00 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು, ರೈತರ ಪದ್ದತಿಂಯಲ್ಲಿ ಶೇ.17.90 ರಷ್ಟು ಬೆಂಕಿರೋಗ ಕಂಡುಬಂದಿದ್ದರೆ, ಪ್ರಾತ್ಯಕ್ಷಿಕೆ ಫಲಿತಾಂಶದಲ್ಲಿ ಶೇ.9.00 ರಷ್ಟು ಬೆಂಕಿರೋಗ ಕಾಣಿಸಿರುತ್ತದೆ, ಅಂದರೆ ಪ್ರಾತ್ಯಕ್ಷಿಕೆಯ ಫಲಿತಾಂಶವು ರೈತರ ಪದ್ದತಿಗಿಂತ ಶೇ. 49.83 ರಷ್ಟು ಕಡಿಮೆ ಬೆಂಕಿರೋಗದ ಬಾಧೆ ದಾಖಲಾಗಿರುತ್ತದೆ.

11. ಪೌಷ್ಠಿಕ ಕೈತೋಟ ತಾಂತ್ರಿಕತೆಯ ಪ್ರಾತ್ಯಕ್ಷಿಕೆಯನ್ನು 20 ಜನ ರೈತರ ತಾಕುಗಳಲ್ಲಿ ಕೈಗೊಳ್ಳಲಾಗಿತ್ತು, ಪ್ರಾತ್ಯಕ್ಷಿಕೆಯಿಂದ ರೈತರು ತಮ್ಮ ತೋಟದಲ್ಲಿ ಬೆಳದಂತಹ ವಿವಿಧ ಪೋಷಕಾಂಶಗಳುಳ್ಳ ತರಕಾರಿಗಳನ್ನು ಸೇವಿಸುವುದರ ಜೊತೆಗೆ ಉಳಿದ ತರಕಾರಿಗಳನ್ನು ಮಾರಾಟ ಮಾಡಿ ಜೀವನೋಪಾಯ ವೃದ್ದಿಸಿಕೊಳ್ಳುವುದರ ಜೊತೆಗೆ ಆರೋಗ್ಯವೂ ಕೂಡಾ ಸುಧಾರಿಸಿರುವುದು ಕಂಡುಬಂದಿರುತ್ತದೆ.

5. Integrated crop management in Finger millet (Ragi) was conducted in an area of 6.0 ha with introduction of KMR-630 and production technologies resulted in higher grain yield of 2685 kg/ha over farmers practice (2275 kg/ha).The mean yield of demonstration was increased by 18.02 per cent compared to farmers practice (Local variety).

6. Integrated Crop Management in Red gram variety BRG-5 was implemented in an area of 8.0 ha. Results of the demonstration indicates that higher seed yield of 1256 kg/ha was obtained due to adoption of ICM practices than farmer practice (1028 kg/ha). The mean yield was increased by 22.17 per cent over farmers practice.

7. Integrated Crop Management in Field bean variety HA-4 was conducted in an area of 4.0 ha resulted higher green pod yield of 3402 kg/ha than farmers practice (2909 kg/ha).The mean yield was increased by 16.94 per cent due to adoption of ICM practices over farmers practice.

8. Demonstration on management of Fall Army worm in Maize was conducted in an area of 4.00 ha recorded lower per cent of pest incidence (5.50%) than check (12.50%). The mean per cent of pest incidence was decreased by 56.87 per cent than check.

9. Demonstration of management of brown leaf spot in Paddy was conducted in an area of 4.00 ha following spraying of Carbendazim 50 WP @ 2g/l at 25 DAT, 50 DAT and at the time of grain filling stage recorded lower per cent of disease incidence (9.00%) than check (17.90%). The mean per cent of disease incidence was decreased by 49.83 per cent than check.

11. Demonstration of nutritional garden for farm families was established in 35 locations with an objective to overcome malnutrition among rural farmers. After introduction the results of the demonstrations indicates that consumption rate of fresh vegetables, leafy vegetables and fruits increased which resulted in improvement in health of farm families.

12. ಟೊಮ್ಯಾಟೋ ಬೆಳೆ ಪದ್ಧತಿಯ ಪ್ರಾತ್ಯಕ್ಷಿಕೆಯನ್ನು 2.00 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು, ಪ್ರಾತ್ಯಕ್ಷಿಕೆ ತಾಕಿನಲ್ಲಿ (75100 ಕೆ.ಜಿ./ಹೆ.) ಇಳುವರಿ ಬಂದಿದ್ದರೆ, ರೈತರ ಪದ್ಧತಿಯಿಂದ ಹೆಕ್ಟೇರಿಗೆ (68100 ಕೆ.ಜಿ./ಹೆ.) ಇಳುವರಿ ಬಂದಿರುತ್ತದೆ. ಪ್ರಾತ್ಯಕ್ಷಿಕೆಯಲ್ಲಿ ರೈತರು ಅನುಸರಿಸುತ್ತಿರುವ ಪದ್ದತಿಗಿಂತ ಶೇ. 9.01 ರಷ್ಟು ಹೆಚ್ಚಿನ ಇಳುವರಿಯನ್ನು ಹೊಂದಿದೆ.
13. ಬಹು ಕಟಾವು ಮೇವಿನ ತಳಿ ಸಿ.ಓ.ಎಫ್.ಎಸ್–31 ಪ್ರಾತ್ಯಕ್ಷಿಕೆಯನ್ನು 2.0 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು, ರೈತರ ಪದ್ದತಿಗಿಂತ ಪ್ರಾತ್ಯಕ್ಷಿಕೆಯು ಶೇ. 28.57 ರಷ್ಟು ಹೆಚ್ಚಿನ ಇಳುವರಿಯನ್ನು ಹೊಂದಿರುತ್ತದೆ.
14. ಬಹು ಕಟಾವು ಮೇವಿನ ತಳಿ ಸಿ.ಓ.ಎಫ್.ಎಸ್–29 ಪ್ರಾತ್ಯಕ್ಷಿಕೆಯನ್ನು 2.0 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದು, ರೈತರ ಪದ್ದತಿಗಿಂತ ಪ್ರಾತ್ಯಕ್ಷಿಕೆಯು ಶೇ. 25.31 ರಷ್ಟು ಹೆಚ್ಚಿನ ಇಳುವರಿಯನ್ನು ಹೊಂದಿರುತ್ತದೆ.

**ತರಬೇತಿ ಕಾರ್ಯಕ್ರಮಗಳು**

ಘಟಕವು 901 ರೈತರ ಪ್ರಯೋಜನಕ್ಕಾಗಿ, ಸಮಗ್ರ ಸಾವಯವ ಕೃಷಿ, ತೆಂಗು ಮಾವು, ಬಾಳೆ, ಶುಂಠಿ ಉತ್ಪಾದನಾ ತಾಂತ್ರಿಕತೆಗಳು, ಹೈನುಗಾರಿಕೆ ಉತ್ಪನ್ನಗಳ ಮೌಲ್ಯವರ್ಧನೆ, ಅಣಬೆ ಬೇಸಾಯದ ತಾಂತ್ರಿಕತೆ, ಸಿರಿಧಾನ್ಯಗಳ ಮಹತ್ವ ಮತ್ತು ಉತ್ಪಾದನಾ ತಾಂತ್ರಿಕತೆಗಳು, ಭತ್ತ ಮತ್ತು ರಾಗಿ ಉತ್ಪಾದನೆ ಹಾಗೂ ಸಸ್ಯ ಸಂರಕ್ಷಣಾ ತಾಂತ್ರಿಕತೆಗಳು, ತೆಂಗಿನ ಬೆಳೆಯಲ್ಲಿ ರುಗೋಸಾ ಬಿಳಿನೊಣದ ನಿರ್ವಹಣೆಗಳನ್ನೊಳಗೊಂಡ 26 ಒಳಾವರಣ ತರಬೇತಿಗಳನ್ನು ಆಯೋಜಿಸಲಾಗಿತ್ತು. ಅಲ್ಲದೆ 1793 ರೈತರ ಪ್ರಯೋಜನಕ್ಕಾಗಿ ಸಾವಯವ ಕೃಷಿ, ಶುಂಠಿ, ತೋಟಗಾರಿಕೆ ಬೆಳೆಗಳು, ತರಕಾರಿ ಬೆಳೆ, ಭತ್ತ, ಸಿರಿಧಾನ್ಯ ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳು, ಹೈನುಗಾರಿಕೆ ಉತ್ಪನ್ನಗಳ ಮೌಲ್ಯವರ್ಧನೆ, ಸಾವಯವ ಕೃಷಿ, ತೆಂಗಿನ ಬೆಳೆಯಲ್ಲಿ ಬಿಳಿ ನೊಣದ ನಿರ್ವಹಣೆ, ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ, ಶುದ್ದ ಹಾಲಿನ ಉತ್ಪಾದನೆ ಮತ್ತು ಚರ್ಮಗಂಟು ರೋಗದ ನಿರ್ವಹಣೆ, ಪೌಷ್ಠಿಕ ಆಹಾರ ಭದ್ರತೆ ಇತ್ಯಾದಿಗಳ 37 ಹೊರಾವರಣ ತರಬೇತಿಗಳನ್ನು ಅಯೋಜಿಸಲಾಗಿತ್ತು. 15 ಕ್ಷೇತ್ರೋತ್ಸವಗಳನ್ನು ವಿವಿಧ ತಾಂತ್ರಿಕತೆಗಳಾದ ರಾಗಿ ಎಂ.ಎಲ್–365, ಉದ್ದು ಎಲ್.ಬಿ.ಜಿ 791, ಅಲಸಂದೆ ಕೆ.ಬಿ.ಸಿ–9, ಮುಸುಕಿನಜೋಳ 14–5, ಅವರೆ ಹೆಚ್.ಎ–4, ಭತ್ತ ಕೆ.ಆರ್.ಹೆಚ್–4, ಕೆ.ಎಂ.ಪಿ–220, ಸೈಲೇಜ್ ಉತ್ಪಾದನೆ, ಅಣಬೆ ಬೇಸಾಯ ಇತ್ಯಾದಿ ಕ್ಷೇತ್ರೋತ್ಸವಗಳನ್ನು ಆಯೋಜಿಸಲಾಗಿ 1191 ರೈತರು ಇದರ ಪ್ರಯೋಜನವನ್ನು ಪಡೆದಿರುತ್ತಾರೆ. ವಿವರಗಳನ್ನು ಅನುಬಂಧ 3.10 ರಲ್ಲಿ ನೀಡಲಾಗಿದೆ.

**ಗ್ರಾಮೀಣ ಯುವಕ/ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ**

ವಿಸ್ತರಣಾ ಶಿಕ್ಷಣ ಘಟಕ, ನಾಗನಹಳ್ಳಿ, ಮೈಸೂರು ರವರು ಒಂದು ಕೌಶಲ್ಯಾಭಿವೃದ್ಧಿ ತರಬೇತಿ (ಆರು ದಿನಗಳ) ಕಾರ್ಯಕ್ರಮವನ್ನು ಹಾಗೂ ಎರಡು ದಿನಗಳ 2 ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಆರು ದಿನಗಳ

12. Demonstration of ICM practice in tomato was implemented in an area of 2 ha, the mean yield of demo plot (75100 kg/ha) was increased by 9.01 per cent compare to farmers practice (68100 kg/ha).
13. Demonstration of Multicut fodder sorghum Co-FS 31 with improved crop management practice was conducted in an area of 2 ha resulted higher yield of 28.57 per cent over farmers practice.
14. Demonstration of Multicut fodder sorghum Co-FS 29 with improved crop management practice was conducted in an area of 2 ha produced higher yield of 25.31 per cent over farmers practice.

**Training Programmes**

The units organized 26 on campus training programmes on organic farming, Production technologies of Coconut, Mango, Banana, Ginger, value addition of diary products and mushroom production technlogy, importance of Millets and production tenchonoligies of Paddy, Ragi, pest & disease management in Paddy, Rugosa white fly managemnt in Coconut etc., for the benefit of 901 farmers. Further, organized 37 off-campus training programmes on organic farming, production technologies of Ginger, horticulture crops, vegetable crops, Paddy, minor millets, value addition in dairy products and mushroom production technology, integrated organic farming practices, Rugosa white fly management, clean milk prodcution and management of lumpy skin disease, Integrated pest & disease management in Paddy, Nutritional food security for Anganawadi workers, importance of seed treatment in Paddy crop for the benefit of 1793 farmers and 15 field days on variuos technolgies on Ragi ML-365, Black gram LBG-791, Cowpea KBC-09, Maize hybrid MAH-14-5, Avare HA-4, Paddy Hybrid KRH-4 and high yielding variety KMP-220, Silage preparation, Mushroom cultivation for the benefit of 1,191 farmers. The details are provided in Annexure 3.10.

**Skilled Training programme for Rural Youth (STRY)**

The Extension Education Unit, Naganahalli, Mysore organised six days Skill training on Propagation techniques in horticulture crops involving 15 rural

ಕಾರ್ಯಕ್ರಮದಲ್ಲಿ 15 ಜನರಂತೆ ಹಾಗೂ ಎರಡು ದಿನಗಳ ಕಾರ್ಯಕ್ರಮಗಳಲ್ಲಿ ಒಟ್ಟು 65 ಜನ ಮೈಸೂರು ಜಿಲ್ಲೆಯ ಗ್ರಾಮೀಣ ಯುವಕ ಮತ್ತು ಯುವತಿಯರು ಕಾರ್ಯಕ್ರಮದಲ್ಲಿ ತರಬೇತಿ ಪಡೆದುಕೊಂಡಿರುತ್ತಾರೆ.

**ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿ ವಿಸ್ತರಣಾ ಸೇವೆಯ ಒಂದು ವರ್ಷದ ಡಿಪ್ಲೋಮಾ ತರಬೇತಿ**

ವಿಸ್ತರಣಾ ಶಿಕ್ಷಣ ಘಟಕ, ನಾಗನಹಳ್ಳಿ, ಮೈಸೂರು ಇವರು ಎರಡು ತಂಡಗಳ ದೇಸಿ ತರಗತಿಗಳನ್ನು ಆಯೋಜಿಸಿದ್ದು, ಒಂದು ತಂಡದಲ್ಲಿ 40 ಜನರಂತೆ ಎರಡು ತಂಡಗಳಿಂದ ಒಟ್ಟು 80 ಜನರಿಗೆ ತರಬೇತಿಯನ್ನು ನೀಡಲಾಗುತ್ತಿದೆ

**ಶೈಕ್ಷಣಿಕ ಚಟುವಟಿಕೆಗಳು**

ವಿಸ್ತರಣಾ ಶಿಕ್ಷಣ ಘಟಕವು 472 ಸಮೂಹ ಚರ್ಚಸಭೆ, 154 ಪದ್ಧತಿ ಪ್ರಾತ್ಯಕ್ಷಿಕೆಗಳು, 736 ಕ್ಷೇತ್ರ ಭೇಟಿ, 19 ಕ್ಷೇತ್ರೋತ್ಸವಗಳನ್ನು ಆಯೋಜಿಸಲಾಗಿತ್ತು. ಒಟ್ಟು 2144 ಜನ ರೈತರು ಭಾಗಿಯಾಗಿದ್ದರು. ಮೈಸೂರು ಮತ್ತು ಕೋಲಾರ ವಿಸ್ತರಣಾ ಶಿಕ್ಷಣ ಘಟಕದ ವಿಜ್ಞಾನಿಗಳು 05 ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ. ಈ ಘಟಕವು ರೈತರಿಗೆ 65 ಸಲಹಾ ಸೇವೆಗಳನ್ನು ಒದಗಿಸಿದೆ

### 4.4.10 ರಾಷ್ಟ್ರೀಯ ಕೃಷಿ ವಿಸ್ತರಣಾ ಪ್ರಾಯೋಜನೆ

ರಾಷ್ಟ್ರೀಯ ಕೃಷಿ ವಿಸ್ತರಣಾ ಪ್ರಾಯೋಜನೆಯು ಕರ್ನಾಟಕ ರಾಜ್ಯ ಕೃಷಿ ಇಲಾಖೆ ಮತ್ತು ಇತರೆ ಸಂಬಂಧಿತ ಇಲಾಖೆಗಳ ವಿಸ್ತರಣಾ ಕಾರ್ಯಕರ್ತರ ಜ್ಞಾನಮಟ್ಟ ಹೆಚ್ಚಿಸಲು ಮತ್ತು ಕೌಶಲ್ಯವರ್ಧನೆ ತರಬೇತಿ ನೀಡಲು ಸ್ಥಾಪಿಸಲಾಗಿದೆ. ಪ್ರಾಯೋಜನೆಯ ಉದ್ದೇಶದಂತೆ ಜಿಲ್ಲಾ ಮಟ್ಟದ ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರ, ಜಿಲ್ಲಾ ಮಟ್ಟದಲ್ಲಿ ಬೆಳೆ ರೋಗ ತಪಾಸಣೆ ಸಮೀಕ್ಷೆ, ಜಿಲ್ಲಾವಾರು ಬೆಳೆ ಮತ್ತು ಕೃಷಿ ಉದ್ಯಮಗಳ ಕುರಿತಾಗಿ ಸಾಹಿತ್ಯ ಸಿದ್ದಪಡಿಸುವಿಕೆ ಹಾಗೂ ಹಂಚಿಕೆ ಹಾಗೆಯೇ ರೈತ ಸಂವಾದ ಗೋಷ್ಠಿಗಳನ್ನು ಆಯೋಜಿಸುವುದಾಗಿದೆ. 2022-23 ನೇ ಸಾಲಿನಲ್ಲಿ ಬೆಂಗಳೂರು ಮತ್ತು ಮಂಡ್ಯ ಘಟಕಗಳ ನೇತೃತ್ವದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಆಯೋಜಿಸಲಾಗಿವೆ:

**ಅ) ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರ**

10 ಜಿಲ್ಲೆಗಳಲ್ಲಿ 21 ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಯಿತು. ಈ ದ್ವೈಮಾಸಿಕ ಕಾರ್ಯಾಗಾರದಲ್ಲಿ ವಿಸ್ತರಣಾ ಕಾರ್ಯಕರ್ತರಿಂದ ತಾಲ್ಲೂಕುವಾರು ಹವಾಮಾನ ಸ್ಥಿತಿಗತಿಗಳ ವಿಶ್ಲೇಷಣೆ, ಕೃಷಿ ಕ್ಷೇತ್ರ ಸಂಬಂಧಿತ ಸಮಸ್ಯೆಗಳನ್ನು ಅವಲೋಕಿಸಿ ಚರ್ಚಿಸಲಾಯಿತು ಮತ್ತು ವಿಶ್ವವಿದ್ಯಾನಿಲಯದ ವಿಜ್ಞಾನಿಗಳ ಮೂಲಕ ಸೂಕ್ತ ಪರಿಹಾರಗಳನ್ನು ಸೂಚಿಸಲಾಯಿತು. ಅಲ್ಲದೆ ವಿಸ್ತರಣಾ ಕಾರ್ಯಕರ್ತರಿಗೆ 24 ಪಠ್ಯಕ್ರಮಗಳನ್ನು ಸಿದ್ದಪಡಿಸಿ ಹಂಚಲಾಗಿದೆ. ಅಗತ್ಯತೆಯನ್ನು ಆಧರಿಸಿ 28 ವಿಶೇಷ ಅತಿಥಿ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಇದರ ಜೊತೆಗೆ 5 ಪದ್ಧತಿ ಪ್ರಾತ್ಯಕ್ಷಿಕೆ, 8 ಗುಂಪು ಚರ್ಚೆಗಳನ್ನು ಆಯೋಜಿಸಲಾಗಿತ್ತು. 33 ಕ್ಷೇತ್ರ ಭೇಟಿ ಮತ್ತು 770 ಸಲಹಾ ಸೇವೆಗಳನ್ನು ರೈತರಿಗೆ ನೀಡಲಾಗಿದ್ದು, ಮೂರು ವಿಶೇಷ ದಿನಾಚರಣೆ ಮತ್ತು ಸರ್ಕಾರದ ವಿವಿಧ ಇಲಾಖೆಗಳ ಹಾಗೂ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಆಯೋಜಿಸಲಾದ 95 ಸಭೆಗಳಲ್ಲಿ ಭಾಗವಹಿಸಲಾಗಿದೆ.

youths of Mysuru district and two days training programme on Integrated organic farming and Beekeeping. Totally 65 rural youths were participated and trained under this programme.

**Diploma in Agricultural Extension Services for Input dealers (DAESI)**

The Extension Education Unit, Naganahalli, Mysuru conducting two batches of DAESI programmes with a total capacity of 80 candidates @ 40/batch.

**Educational Activities**

The EEUs organized 472 group discussion meetings, 154 method demonstrations, 736 field visits and 19 field days involving 2144 farmers. The scientists of EEU, Nagenahalli and Kolar participated in five Bimonthly Technical Workshops. The EEU provided 65 advisory services to the farmers.

### 4.4.10 National Agricultural Extension Project (NAEP)

The National Agricultural Extension Project (NAEP) was established to provide training to enhance the knowledge level and to upgrade the skills of extension functionaries of the state department of agriculture and other line departments in the district. The objectives of this project are; to organize district level bi-monthly technical workshops, district level pest and disease surveillance, developing and distribution of literature on crops and agri-enterprises as well as to organize farmers discussion forums. During 2022-23 the following activities were carried out by Bengaluru and Mandya units.

**a) Bi-monthly Technical Workshop:**

Twenty one bi-monthly technical workshops were organized in 10 districts. Taluka wise weather data was analysed, field problems observed by extension functionaries were discussed and suitable solutions were worked out under the guidance of the university scientists. Accordingly 24 lesson plans were developed and advocated to the extension functionaries. Depending on the need, 28 special guest lecturers were arranged. In addition five method demonstrations and eight group discussions meetings were conducted. 33 field visits and 770 consultancy services /advisory services were provided to the farmers. Participated in three important days celebration and also participated in 95 meetings conducted at the university and the government level.

### ಆ) ಕೌಶಲ್ಯ ಪ್ರಾತ್ಯಕ್ಷಿಕೆ

ಬೆಳೆಗಳಿಗೆ ತಗಲುವ ಪೀಡೆಗಳನ್ನು ಗುರುತಿಸುವ ವೈಜ್ಞಾನಿಕ ವಿಧಾನಗಳನ್ನು 4 ಜಿಲ್ಲೆಯ ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರಗಳಲ್ಲಿ ಆಯೋಜಿಸಲಾಯಿತು. ಹೈನುರಾಸುಗಳ ಸಮತೋಲನ ಆಹಾರ ಪದ್ಧತಿ ಪ್ರಾತ್ಯಕ್ಷಿಕೆ ಮತ್ತು ಗುಂಪು ಚರ್ಚೆ ಚಿಕ್ಕಗಂಗವಾಡಿ ಗ್ರಾಮ, ಮಂಡ್ಯ ಜಿಲ್ಲೆಯಲ್ಲಿ ಆಯೋಜಿಸಲಾಯಿತು. ಹೂವಿನ ಬೆಳೆಗಳಿಗೆ ಟ್ರೈಕೊಡರ್ಮಾ & ಸೂಡೋಮೊನಾಸ್‌ಗಳಂತಹ ಜೈವಿಕ ಗೊಬ್ಬರಗಳನ್ನು ಉಪಯೋಗಿಸುವ ಬಗ್ಗೆ ಪದ್ಧತಿ ಪ್ರಾತ್ಯಕ್ಷಿಕೆ ಚಿಕ್ಕಗಂಗವಾಡಿ ಗ್ರಾಮದಲ್ಲಿ ಆಯೋಜಿಸಲಾಯಿತು. ಅರಿಶಿಣ ರೈಜೋಮ್‌ಗಳು ಮತ್ತು ಆಲೂಗೆಡ್ಡೆ ಗೆಡ್ಡೆಗಳಲ್ಲಿ ಬ್ಯಾಕ್ಟೀರಿಯಾದ ಸೋರಿಕೆ ಪರೀಕ್ಷೆಯನ್ನು ಪತ್ತೆಹಚ್ಚಲು ವಿಧಾನ. ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಡ್ರೋನ್ ಉಪಯೋಗಿಸಿ ನ್ಯಾನೊ ಯೂರಿಯಾ ಸಿಂಪರಣೆ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಯಿತು. ರಾಗಿ ಬೆಳೆಯಲ್ಲಿ ಎಲೆ, ಕತ್ತು ಮತ್ತು ಇಲುಕು ಬೆಂಕಿ ರೋಗನಿರ್ಣಯ ಕುರಿತು ಕೌಶಲ್ಯ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಯಿತು.

### ಇ) ತಪಾಸಣಾ ಕ್ಷೇತ್ರ ಭೇಟಿ

ಮಂಡ್ಯ ಜಿಲ್ಲೆಯಲ್ಲಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳ ತಂಡದೊಂದಿಗೆ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳೊಂದಿಗೆ ಭತ್ತ, ಕಬ್ಬು, ಮುಸುಕಿನ ಜೋಳದ ತಾಕುಗಳಿಗೆ ತಪಾಸಣಾ ಕ್ಷೇತ್ರ ಭೇಟಿಗಳನ್ನು ಕೈಗೊಂಡು ಸೂಕ್ತ ವೈಜ್ಞಾನಿಕ ಸಲಹೆಗಳನ್ನು ನೀಡಲಾಯಿತು.

### ಉ) ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರದ ಸಂದರ್ಭದಲ್ಲಿ ವರದಿಯಾದ ಸಮಸ್ಯೆಗಳು

ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರದ ಸಂದರ್ಭದಲ್ಲಿ ವರದಿಯಾದ ಸಮಸ್ಯೆಗಳೆಂದರೆ; ಅಡಿಕೆ ಮತ್ತು ತೆಂಗಿನಲ್ಲಿ ರುಗೋಸ ಬಿಳಿ ನೊಣದ ಹಾವಳಿ, ಮುಸುಕಿನ ಜೋಳದಲ್ಲಿ ಸೈನಿಕ ಹುಳುವಿನ ಬಾಧೆ, ಅಲಸಂದೆ ಮತ್ತು ಉದ್ದು ಬೆಳೆಯಲ್ಲಿ ಹಳದಿ ಮೊಸಾಯಿಕ್ ನಂಜುರೋಗ, ಭತ್ತದಲ್ಲಿ ಬೆಂಕಿ ರೋಗ, ಗರಿ ಸುತ್ತುವ ಹುಳು, ಎಲೆ ಮಡಚುವ ಸುರಂಗಕೀಟ ಮತ್ತು ಕಂದು ಚುಕ್ಕೆ, ಟೊಮೊಟೊದಲ್ಲಿ ಪಿನ್ ವರ್ಮ್, ಸೂರ್ಯಕಾಂತಿ ಮತ್ತು ಉದ್ದು ಬೀಜದ ಲಭ್ಯತೆಯ ಕೊರತೆ, ಸಿರಿಧಾನ್ಯದಲ್ಲಿ ಮಿಲ್ಲಿಂಗ್ ಮತ್ತು ಮಾರುಕಟ್ಟೆ ಸಮಸ್ಯೆ.

### ಊ) ಕ್ಷೇತ್ರ ಪ್ರಯೋಗ ಮತ್ತು ಪ್ರಾತ್ಯಕ್ಷಿಕೆ ತಾಕುಗಳಿಗೆ ಭೇಟಿ ಆಯೋಜನೆ ಮತ್ತು ಮೇಲ್ವಿಚಾರಣೆ

ಕಳೆದ ಸಾಲಿನಲ್ಲಿ 14 ತಾಂತ್ರಿಕತೆಗಳ ಮೇಲೆ ಕ್ಷೇತ್ರ ಪ್ರಯೋಗಗಳನ್ನು ಏರ್ಪಡಿಸಲಾಗಿತ್ತು. ಕ್ಷೇತ್ರ ಪ್ರಯೋಗಗಳ ವಿವರ: ಸಂಕರಣ ಭತ್ತದ ತಳಿ ಕೆ.ಆರ್.ಹೆಚ್–4, ಸಾಮೆ ಜಿ.ಪಿ.ಯು.ಎಲ್–11, ಬರಗು ಜಿ.ಪಿ.ಯು.ಪಿ–32, ಸಂಕರಣ ನೇಪಿಯರ್ ಹುಲ್ಲು ಪಿ.ಬಿ.ಎನ್–341, ಗಿನಿ ಹುಲ್ಲು ಎಂ.ಎಂ.ಜಿ–1, ಸೂರ್ಯಕಾಂತಿ ಕೆ.ಬಿ.ಎಸ್.ಹೆಚ್–85, ಭತ್ತದ ನಾಟಿಯಲ್ಲಿ ಜೈವಿಕ ಗೊಬ್ಬರಗಳ ಬಳಕೆ, ಹತ್ತಿಯಲ್ಲಿ ಉದಯೋತ್ತರ ಕಳೆನಾಶಕ ಬಳಕೆ, ಮುಸುಕಿನ ಜೋಳದಲ್ಲಿ ಲಘು ಪೋಷಕಾಂಶಗಳ ನಿರ್ವಹಣೆ, ಮುಸುಕಿನ ಜೋಳದಲ್ಲಿ ಉದಯೋತ್ತರ ಕಳೆನಾಶಕ ಬಳಕೆ, ಹತ್ತಿಯಲ್ಲಿ ಬಹುಹಂತದ ಬೆಳೆ ಪದ್ಧತಿ, ಗುಳಿ ವಿಧಾನದಲ್ಲಿ ರಾಗಿ ಬೇಸಾಯ, ಭತ್ತದ ಕೃಷಿಯಲ್ಲಿ ಸ್ಲಾಗ್ ಆಧಾರಿತ ಜಿಪ್ಸಂನ ಬಳಕೆ ಮತ್ತು ಮೆಕ್ಕೆಜೋಳದ ಕೃಷಿಯಲ್ಲಿ ಸ್ಲಾಗ್ ಆಧಾರಿತ

### b) Skill Demonstrations

Skill demonstrations on diagnosis of pest and disease specimens of major crops in the dist. during Bimonthly Technical Workshops in four districts were organised. Feed management for milching animals at Chikkagangavadi village, Mandya district. Application of *Trichoderma* and *Pseudomonas* bioagents for flowering plants. To diagnose the Bacterial oozing testing in Potato tubers and Turmeric rhizomes. Nano urea application demo also organised by using drones in Mandya, Chamarajnagar and Mysore districts and organised skill demonstration on diagnosing Ragi leaf neck and finger blasts.

### c) Diagnostic Field Visits

Arranged district diagnostic field visits at Mandya district to the problematic Paddy, Sugarcane, Maize plots and rendered advisory services and submitted the report.

### d) Field problems reported in the bi-monthly workshop

Different problems identified and reported at Bimonthly Technical Workshops were; Rugosa white flies in coconut and areca nut, fall army worm in maize, yellow mosaic virus in Blackgram and Greengram, stem borer, brown spot, leaf blast & case worm in paddy, weed Pin worm in tomato, non-availability of sun flower seeds & Blackgram seeds, milling and marketing problem in millets.

### e) Visit and Supervision of Farm Trials and Demonstration

During the year, farm trails on 14 technologies were conducted *viz.,* Paddy : KRH-4, Little millet : GPUL-11, Proso millet : GPUPI-32, Napier grass : PBN-341, Gini grass : MMG-1, Sunflower : KBSH-85, Use of bio fertilizers in Paddy plantation, Post emergent weedicides in cotton, Use of micronutrients in Maize, Use of post emergent weedicides in maize, multiple method of growing cotton, Guli method of Ragi cultivation, Use of slag based Gypsum in Paddy and Use of slag based Gypsum in corn 8 field visits were under taken to the demonstration plots and farm trail

ಜಿಪ್ಸಂನ ಬಳಕೆ. ಪ್ರಾತ್ಯಕ್ಷಿಕೆ ಹಾಗೂ ಪ್ರಯೋಗಗಳ ತಾಕುಗಳಿಗೆ ಕ್ಷೇತ್ರ ಭೇಟಿಯನ್ನು ಕೈಗೊಂಡಿದ್ದು, ಈ ಸಂದರ್ಭದಲ್ಲಿ ಪ್ರಾತ್ಯಕ್ಷಿಕೆ / ಪ್ರಯೋಗಗಳ ಕಾರ್ಯನಿರ್ವಹಣೆಯನ್ನು ವೀಕ್ಷಿಸಿ ಕ್ಷೇತ್ರ ಕಾರ್ಯಕರ್ತರುಗಳಿಗೆ ಮಾರ್ಗದರ್ಶನ ನೀಡಲಾಯಿತು.

**ಊ) ವಲಯ ಸಂಶೋಧನಾ ವಿಸ್ತರಣಾ ಪ್ರಾಯೋಜನೆಯ ಸಭೆಯಲ್ಲಿ ಮಂಡಿಸಿದ ಸಮಸ್ಯೆಗಳು ಮತ್ತು ಹಿಮ್ಮಾಹಿತಿಗಳು**

**ಬೆಳೆ ಅಭಿವೃದ್ಧಿ**

ಹೈಬ್ರಿಡ್ ರಾಗಿ ತಳಿಗಳ ಲಭ್ಯತೆಯ ಕೊರತೆ, ಸುಧಾರಿತ ತಳಿಗಳಲ್ಲಿಯೂ ಧಾನ್ಯ ಹಾಗೂ ಹುಲ್ಲಿನ ಇಳುವರಿಯೊಂದಿಗೆ ಆರ್ಥಿಕ ಆದಾಯವು ಕಡಿಮೆಯಾಗಿದೆ, ಹಾಗಾಗಿ ಅಧಿಕ ಇಳುವರಿ ನೀಡುವ ರಾಗಿ ಹೈಬ್ರಿಡ್‌ಗಳ ಅವಶ್ಯಕತೆಯಿದೆ. ಮುಸುಕಿನ ಜೋಳದಲ್ಲಿ ಸೈನಿಕ ಹುಳು ಬಾಧೆಯಿಂದ ಇಳುವರಿ ನಷ್ಟವಾಗಿದೆ (ಕೆಲವೊಮ್ಮೆ 80% ರಷ್ಟು ನಷ್ಟ), ಸಹಿಷ್ಣುತೆಯುಳ್ಳ ತಳಿಗಳ ಮತ್ತು ಕಡಿಮೆ ವೆಚ್ಚದ ಸಮಗ್ರ ನಿರ್ವಹಣಾ ಕ್ರಮಗಳ ಅವಶ್ಯಕತೆಯಿದೆ. ಭತ್ತದಲ್ಲಿ ಕಡಿಮೆ ಇಳುವರಿಯ ಕಾರಣ ಅಸ್ತಿತ್ವದಲ್ಲಿರುವ ಸುಧಾರಿತ ತಳಿಗಳು ಖಾಸಗಿ ಹೈಬ್ರಿಡ್‌ತಳಿಗಳು ಹೆಚ್ಚು ಪ್ರದೇಶವನ್ನು ಆಕ್ರಮಿಸಲಾಗುತ್ತಿದೆ, ಅಧಿಕ ಇಳುವರಿ ನೀಡುವ ಸಣ್ಣ ಅಕ್ಕಿ ತಳಿಗಳ ಅವಶ್ಯಕತಯಿದೆ.

**ಬೆಳೆ ಉತ್ಪಾದನೆ**

ಚಿಯಾ ಬೆಳೆ ಹಾಗೂ ಸಿರಿಧಾನ್ಯಗಳಾದ ನವಣೆ, ಸಾಮೆ, ಹಾರಕ ಬೆಳೆಗಳಲ್ಲಿ ಇಳುವರಿ ಕಡಿಮೆ ಇರುವುದರಿಂದ ಉತ್ತಮ ಕೃಷಿ ಪದ್ಧತಿಗಳ ಅವಶ್ಯಕತೆಯಿದೆ.

**ಬೆಳೆ ಸಂರಕ್ಷಣೆ**

ತೆಂಗು ಬೆಳೆಯಲ್ಲಿ ರೂಗೋಸ್ ಬಿಳಿನೊಣಗಳ ಬಾಧೆಯಿಂದ ಕಾಯಿಗಳ ನಷ್ಟವಾಗುತ್ತಿದ್ದು, ಸಮಗ್ರ ನಿರ್ವಹಣಾ ಕ್ರಮಗಳ ಅವಶ್ಯಕತೆಯಿದೆ. ಭತ್ತದಲ್ಲಿ ಜಿಗಿ ಹುಳು ಬಾದೆಯಿಂದ ಇಳುವರಿ ನಷ್ಟವಾಗಿದೆ (ಕೆಲವಡೆ 70% ರಷ್ಟು ಇಳುವರಿ ನಷ್ಟ), ರೋಗನಿರೋಧಕ / ಸಹಿಷ್ಣುತೆಯುಳ್ಳ ತಳಿಗಳ ಹಾಗೂ ಪರಿಸರ ಸ್ನೇಹಿ ಸಮಗ್ರ ನಿರ್ವಹಣಾ ಪದ್ಧತಿಗಳ ಅವಶ್ಯಕತೆಯಿದೆ.

**ಕೃಷಿ ಇಂಜಿನಿಯರಿಂಗ್ ಮತ್ತು ಸಂಸ್ಕರಣೆ**

ಸಿರಿಧಾನ್ಯಗಳ ಸಂಸ್ಕರಣೆಗೆ ಸ್ಥಳೀಯ ಸ್ಥಳಗಳಲ್ಲಿ ಮಿಲ್ಲಿಂಗ್ ಯಂತ್ರಗಳ ಲಭ್ಯತೆಯ ಕೊರತೆ, ಕಡಿಮೆ ಗ್ರಾಹಕರು ಮತ್ತು ಲಾಭದಾಯಕ ಬೆಲೆ ಇರುವುದಿಲ್ಲ. ಆದ್ದರಿಂದ, ಸ್ಥಳೀಯ ಸಿರಿಧಾನ್ಯಗಳ ಸಂಸ್ಕರಣೆಗೆ ಮಿಲ್ಲಿಂಗ್ ಯಂತ್ರಗಳ ಸ್ಥಾಪನೆಯ ಅವಶ್ಯಕತೆಯಿದೆ ಮತ್ತು ನಗರಗಳೊಂದಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ಅವಶ್ಯಕವಿರುತ್ತದೆ.

**ಇತರೆ**

**ವಿಸ್ತರಣಾ, ಮಾರುಕಟ್ಟೆ ಮತ್ತು ಮೌಲ್ಯವರ್ಧನೆ:** ಬೆಂಕಿ ರೋಗ ನಿರ್ವಹಣೆಗೆ ರೈತರು ಕಡಿಮೆ ವೆಚ್ಚದ ಶಿಲೀಂದ್ರನಾಶಕಗಳಿಂದ ಬೀಜೋಪಚಾರವನ್ನು ಅಳವಡಿಸಿಕೊಂಡಿಲ್ಲದಿರುವುದರಿಂದ, ಪೂರಕವಾದ ವಿಧಾನ ಪ್ರದರ್ಶನಗಳನ್ನು ಆಯೋಜಿಸುವುದು. ಕಡಿಮೆ ಸೂಲಂಗಿ ಬರುವ ಕಬ್ಬು COVC–18061 ತಳಿಗೆ ಬೇಡಿಕೆ ಹೆಚ್ಚಿರುವುದರಿಂದ ಕಡಿಮೆ ದರದಲ್ಲಿ ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳ ಮೂಲಕ ಬೀಜ ಉತ್ಪಾದನೆ ಮತ್ತು ಪೂರೈಕೆ ವ್ಯವಸ್ಥೆಯನ್ನು ವಿಸ್ತರಿಸಬೇಕಾಗಿರುತ್ತದೆ. ಮಂಡ್ಯ ಹಾಗೂ ಪಕ್ಕದ ಜಿಲ್ಲೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ರಾಗಿ

plots to observe the performance of the technologies and to guide the field extension functionaries.

## f) Field Problems and Feedback Presented at ZREP Meetings

### Crop Improvement

Need of high yielding Ragi hybrids due to the low grain and straw yield including low economic returns even in available improved varieties. Yield loss due to Maize Fall Army worm above ETL (some cases up to 80% yield loss), so need of tolerant hybrids and low cost IPM measures. In Paddy crop large area is being occupied under private var / hybrids. There is a need of fine grain high yielding hybrids.

### Crop Production

Low yields in Chia crop ( *Salvia hispanica* L.) and minor millets such as Fox tail millet (*Setaria italica*), Little millet (*Panicum sumatrense)*, Kodo millet (*Paspalum scrobiculatum*) so need Good Agricultural Practices.

### Crop Protection

In Coconut, nut yield loss due to *Rugose Spiraling* whitefly: (*Aleudicus rugioperculatus*) (>70 %) palms affected, need low cost IPM practices. In Paddy BPH caused yield loss above ETL (in few locations). Resistant var or low cost, eco-friendly management practices / methods are needed.

### Agriculture Engineering and Processing

Less availability access to milling machines to process minor millets in nearby places. Less buyers and fetching low price. Need of cluster village milling machines to process the grains. Supply chain market linkages to Metro and Cities.

### Others

**Extension, Marketing & Value addition:** Farmers were not adopting the low cost, seed treatment with fungicides in Paddy and Maize to manage the Blast disease. Method demonstrations to be organized. Demand for shy flowering (less flowering) Sugarcane variety COVC-18061, shortage of supply and need to expand the seed production and supply arrangements through Sugar factories to the growers

ಬೆಳೆಯನ್ನು ಬದಲಿಸುವ ಮೂಲಕ ಮುಸುಕಿನ ಜೋಳ ಖಾಸಗಿ ಹೈಬ್ರಿಡ್ ತಳಿಗಳನ್ನು ಬೆಳೆಯುವ ಪ್ರದೇಶ ಹೆಚ್ಚುತ್ತಿದೆ. ಮುಂಬರುವ ಅಂತರಾಷ್ಟ್ರೀಯ ಸಿರಿಧಾನ್ಯಗಳ ವರ್ಷದ ದೃಷ್ಟಿಯಿಂದ ರಾಗಿಗೆ ಮೌಲ್ಯವರ್ಧಿತ ಉತ್ಪನ್ನಗಳು ಮತ್ತು ಮಾರುಕಟ್ಟೆ ಮೂಲಕ ಬೇಡಿಕೆ ಸೃಷ್ಟಿಸಿ ರಾಗಿ ಬೆಳೆ ಪ್ರದೇಶವನ್ನು ಹೆಚ್ಚಿಸಬೇಕು.

### 4.4.11 ಕೃಷಿ ವಿಜ್ಞಾನ ಕೇಂದ್ರಗಳು

ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ದೇಶದಲ್ಲಿ ಕೃಷಿ ವಿಜ್ಞಾನ ಕೇಂದ್ರಗಳ ಜಾಲವನ್ನು ರಚಿಸಿದ್ದು. ತಂತ್ರಜ್ಞಾನಗಳ ಪರಿಶೀಲನೆ, ಪರಿಷ್ಕರಣೆ ಹಾಗೂ ಪ್ರಾತ್ಯಕ್ಷಿಕೆಯು ಕೃಷಿ ವಿಜ್ಞಾನ ಕೇಂದ್ರಗಳ ಉದ್ದೇಶವಾಗಿದೆ. ಕೃಷಿ ವಿಜ್ಞಾನ ಕೇಂದ್ರಗಳು, ಕ್ಷೇತ್ರ ಪರೀಕ್ಷೆ, ಮುಂಚೂಣಿ ಪ್ರಾತ್ಯಕ್ಷಿಕೆ ಹಾಗೂ ತರಬೇತಿ ಚಟುವಟಿಕೆಗಳನ್ನು ಒಳಗೊಂಡಿವೆ. ಕೇಂದ್ರಗಳು ಜಿಲ್ಲೆಯ ಕೃಷಿ ಆರ್ಥಿಕತೆಯನ್ನು ಸುಧಾರಿಸಲು, ಸಾರ್ವಜನಿಕ, ಖಾಸಗಿ ಮತ್ತು ಸ್ವಯಂಸೇವ ವಲಯಗಳಲ್ಲಿ ಬೆಂಬಲ ಉಪಕ್ರಮಗಳಾಗಿ ಕೃಷಿ ತಂತ್ರಜ್ಞಾನಗಳ ಜ್ಞಾನ ಕೇಂದ್ರ ಮತ್ತು ಸಂಪನ್ಮೂಲ ಕೇಂದ್ರವಾಗಿಯೂ ಸಹ ಕಾರ್ಯನಿರ್ವಹಿಸುತ್ತವೆ. ಪ್ರಸ್ತುತ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಡಿಯಲ್ಲಿನ ಏಳು ಕೃಷಿ ವಿಜ್ಞಾನ ಕೇಂದ್ರಗಳು ಮುಂದೆ ಸೂಚಿಸಿದ ಉದ್ದೇಶಗಳೊಂದಿಗೆ ಕಾರ್ಯನಿರ್ವಹಿಸುತ್ತಿವೆ.

ಈ ಮೇಲಿನ ಆಧ್ಯಾದೇಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಏಳು ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅವುಗಳೆಂದರೆ. ಜಿಲ್ಲಾವಾರು ಇಂತಿವೆ; ಹಾಸನ–ಕಂದಲಿ, ತುಮಕೂರು–ಕೊನೆಹಳ್ಳಿ, ಚಾಮರಾಜನಗರ–ಹರದನಹಳ್ಳಿ, ಮಂಡ್ಯ–ವಿ.ಸಿ. ಫಾರಂ, ಬೆಂಗಳೂರು ಗ್ರಾಮೀಣ–ಹಾಡೋನಹಳ್ಳಿ, ಚಿಕ್ಕಬಳ್ಳಾಪುರ–ಚಿಂತಾಮಣಿ ಹಾಗೂ ರಾಮನಗರ–ಮಾಗಡಿ.

### ಆಧ್ಯಾದೇಶಗಳು

ಅ) ವಿವಿಧ ಬೇಸಾಯ ಪದ್ಧತಿಗಳಲ್ಲಿ ಸ್ಥಳ ನಿರ್ದಿಷ್ಟ ಕೃಷಿ ತಂತ್ರಜ್ಞಾನಗಳನ್ನು ಗುರುತಿಸಲು ಕ್ಷೇತ್ರದಲ್ಲಿಯೇ ಪರೀಕ್ಷೆಗಳನ್ನು ಕೈಗೊಳ್ಳುವುದು.

ಆ) ವಿವಿಧ ಬೆಳೆಗಳ ಉತ್ಪಾದನಾ ಸಾಮರ್ಥ್ಯ ಮತ್ತು ಉದ್ಯಮಗಳನ್ನು ಸ್ಥಾಪಿಸಲು ರೈತರ ಜಮೀನುಗಳಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು

ಇ) ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ, ತಂತ್ರಜ್ಞಾನ ಪರಿಶೀಲನೆ, ಪರಿಷ್ಕರಣೆ ಹಾಗೂ ಪ್ರಾತ್ಯಕ್ಷಿಕತೆಯ ಕೌಶಲ್ಯ ಮತ್ತು ಅರಿವು ವೃದ್ಧಿಸಿಗೊಳ್ಳಲು ಹಾಗೂ ವಿಸ್ತರಣಾ ಸಿಬ್ಬಂದಿಗೆ ಮುಂಚೂಣಿ ಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಅವರನ್ನು ಪ್ರೋತ್ಸಾಹಿಸಲು ತರಬೇತಿಗಳನ್ನು ಆಯೋಜಿಸುವುದು

ಈ) ಸೂಕ್ತ ವಿಸ್ತರಣಾ ಕಾರ್ಯಕ್ರಮಗಳ ಮೂಲಕ ವಿವಿಧ ಗ್ರಾಹಕರಲ್ಲಿ ಸುಧಾರಿತ ಕೃಷಿ ತಂತ್ರಜ್ಞಾನಗಳಿಗೆ ಸಂಬಂಧಿಸಿದಂತೆ ಅರಿವು ಮೂಡಿಸುವುದು

ಉ) ಗುಣಮಟ್ಟದ ಬೀಜ, ಬಿತ್ತನೆ ಸಾಮಗ್ರಿ, ಜಾನುವಾರು ತಳಿಗಳು, ಪ್ರಾಣಿಜನ್ಯ ಉತ್ಪನ್ನಗಳು, ಜೈವಿಕ ಉತ್ಪನ್ನಗಳನ್ನು ಇತ್ಯಾದಿ ವಿವಿಧ ಗ್ರಾಹಕರ ಬೇಡಿಕೆಯ ಮೇರೆಗೆ ಉತ್ಪಾದಿಸಿ ವಿತರಿಸುವುದು

at lower cost. In Maize private hybrids area in Mandya (Malavalli) and adjoining districts has been increasing by replacing Ragi crop in recent times. In view of the coming international year for millets, thee Ragi crop area should also be increased by creating demand through value added products and marketing.

### 4.4.11 Krishi Vigyan Kendras (KVKs)

The Indian Council of Agricultural Research (ICAR) has created network of KVKs in the country. The KVKs aims at assessment, refinement and demonstration of technologies & products. The activities of KVKs include on farm testing, frontline demonstrations and training. The KVKs also work as resource and knowledge centres of agricultural technology for supporting initiatives of public, private and voluntary sectors for improving the agricultural economy of the district. At present seven KVKs are working under the jurisdiction of UAS-B with following mandates.

Keeping in view the above mandates. The seven (7) KVKs have been established under the jurisdiction of UAS, Bangalore in the districts *viz.,* Kandali (Hassan), Konehally (Tumakuru), Haradanahalli (Chamarajanagar), V.C.Farm (Mandya), Hadonahalli (Bengaluru Rural), Chintamani (Chickballapur) and Magadi (Ramanagara).

### Mandates

a) Conducting on-farm testing to identify the location specificity of agricultural technologies under various farming systems

b) Organizing frontline demonstrations to establish production potentials of various crops and enterprises on the farmers fields

c) Organizing need-based training programmes for farmers to update their knowledge and skills in modern agril. technologies related to technology assessment, refinement & demonstration and training of extension personnel to orient them in the frontier areas of technology development

d) Creating awareness about improved agricultural technologies among various clientels through an appropriate extension programmes

e) Production of quality seeds, planting material, livestock breeds, animal products, bio-products etc. as per the demand and supply the same to different clienteles

ಊ)ಜಿಲ್ಲೆಯ ಕೃಷಿ ಆರ್ಥಿಕತೆಯನ್ನು ಸುಧಾರಿಸಲು ಸಾರ್ವಜನಿಕ, ಖಾಸಗಿ ಹಾಗೂ ಸ್ವಯಂ ಸೇವಾ ವಲಯಗಳಿಗೆ ಕೃಷಿ ತಂತ್ರಜ್ಞಾನ ಬೆಂಬಲ ಒದಗಿಸಲು ಸಂಪನ್ಮೂಲ ಹಾಗೂ ಜ್ಞಾನ ಕೇಂದ್ರಗಳಾಗಿ ಕಾರ್ಯನಿರ್ವಹಿಸುವುದು.

ಈ ಕೃಷಿ ವಿಜ್ಞಾನ ಕೇಂದ್ರಗಳು 2022-23 ಅವಧಿಯಲ್ಲಿ ಈ ಮುಂದಿನ ಚಟುವಟಿಕೆಗಳನ್ನು ಕೈಗೊಂಡಿವೆ

### 4.4.11.1 ಕ್ಷೇತ್ರದಲ್ಲಿ ನಡೆಸಲಾದ ಪರೀಕ್ಷೆಗಳು

ವಿವಿಧ ಬೇಸಾಯ ಪದ್ಧತಿಗಳಲ್ಲಿ ಸ್ಥಳ ನಿರ್ದಿಷ್ಟ ಕೃಷಿ ತಂತ್ರಜ್ಞಾನಗಳನ್ನು ಗುರುತಿಸಲು ಕ್ಷೇತ್ರದಲ್ಲಿಯೇ ಪರೀಕ್ಷೆಗಳನ್ನು ಕೈಗೊಳ್ಳಲಾಗಿತ್ತು. 2022-23 ರಲ್ಲಿ, 92 ರೈತರನ್ನು ಒಳಗೊಂಡಂತೆ 27.83 ಹೆ. ವಿವಿಧ ವಿಷಯುಗಳಲ್ಲಿ/ಕ್ಷೇತ್ರಗಳಡಿಯಲ್ಲಿ 24 ತಂತ್ರಜ್ಞಾನಗಳನ್ನು ಪರೀಕ್ಷಿಸಲಾಗಿದೆ. ವಿವರಗಳನ್ನು ಅನುಬಂಧ 3.11 ರಲ್ಲಿ ನೀಡಲಾಗಿದೆ.

### ಕ್ಷೇತ್ರದಲ್ಲಿ ನಡೆಸಲಾದ ಪರೀಕ್ಷೆಯ ಪ್ರಮುಖ ಸಂಶೋಧನೆಗಳು

1. **ಮೇವಿನ ಇಳುವರಿ ಮತ್ತು ಗುಣಮಟ್ಟಕ್ಕಾಗಿ ವಿವಿಧ ನೇಪಿಯರ್ ಸಂಕರಣ ತಳಿಗಳ ಮೌಲ್ಯಮಾಪನ:** ಈ ಪಿ.ಬಿ.ಎನ್ - 342 ಸಂಕರಣ ತಳಿಯು ಶೇ. 9.7 ರಷ್ಟು ಕಚ್ಚಾ ಪ್ರೋಟೀನ್ (ಕ್ರೂಡ್ ಪ್ರೋಟೀನ್) ಅನ್ನು ಹೊಂದಿದ್ದು, 136.3 ಟ/ಹೆ. (5 ಕಠಾವುಗಳು) ರಷ್ಟು ಇಳುವರಿಯಲ್ಲಿ ಹೆಚ್ಚಳವಾಗಿದ್ದು ಮತ್ತು ಶೇ. 88.1 ರಷ್ಟು ಸ್ವಾದಿಷ್ಠತೆಯನ್ನು ಹೊಂದಿದೆ. ರೈತರ ಪದ್ಧತಿ (ಸಿ.ಓ-3)ಯಲ್ಲಿ 113.2 ಟ/ಹೆ. ಇಳುವರಿ ಹಾಗೂ ಸ್ವಾದಿಷ್ಠತೆಯು ಶೇ. 83.4 ರಷ್ಟು ಬಂದಿದ್ದು, ಶಿಪಾರಿತ ಪದ್ಧತಿ (ಬಿ.ಎನ್.ಹೆಚ್-10) ಯಲ್ಲಿ ಇಳುವರಿಯು 126.7 ಟ/ಹೆ. ಕಂಡು ಬಂದಿದ್ದು, ಸ್ವಾದಿಷ್ಠತೆಯು ಶೇ. 85.3 ರಷ್ಟಿದೆ. ಬದಲಿ ಪದ್ಧತಿಯಲ್ಲಿ (ಸಿ.ಓ-5) ಇಳುವರಿಯು 121.4 ಟ/ಹೆ. ಇದ್ದು, ಸ್ವಾದಿಷ್ಠತೆಯು ಶೇ. 84.5 ರಷ್ಟು ಕಂಡು ಬಂದಿದೆ.
2. **ಆಲೂಗಡ್ಡೆ ಬೆಳೆಯಲ್ಲಿ ಗೆಡ್ಡೆ ಹಾಗೂ ಕುಡಿಕಾಂಡ ಸಸಿಗಳ ಬಳಕೆಯ ತಂತ್ರಜ್ಞಾನಗಳ ಪರಿಶೀಲನೆ:** ಯು.ಎಚ್.ಎಸ್. ಬಾಗಲಕೋಟೆ ಯಿಂದ ಅಭಿವೃದ್ಧಿಪಡಿಸಿದ ಕುಡಿ ಕಾಂಡದ ಸಸಿಗಳ ಗೆಡ್ಡೆಗಳನ್ನು ಅಳವಡಿಸಿಕೊಳ್ಳುವುದರಿಂದ ಇಳುವರಿಯನ್ನು 17.36% ಟನ್ / ಹೆಕ್ಟೇರಿಗೆ ಹೆಚ್ಚಿಸಲಾಗಿದೆ, ಇದು ರೈತರ ಅಭ್ಯಾಸದಲ್ಲಿದ್ದಾಗ 15.48 % ನಷ್ಟು ಹೆಚ್ಚಳವಾಗಿದೆ.
- Honorable Members of Board of Management, Dr. P. H. Ramanjini Gowda, Mr. T. M. Aravind, Mr. O. S. Dayananda, Mr. R. Srirama, Dr. K. C. Narayanaswamy, Director of Education, University of Agricultural Sciences, GKVK, Bengaluru, Dr. Basave Gowda, Registrar, University of Agricultural Sciences, GKVK, Bengaluru, Mr. Suresh Gouda Patil, Personal Secretary of Hon'ble Minister for Agriculture, Government of Karnataka and Dr. Mudalagiriyappa, Chief Scientist, AICRP for Dryland Agriculture, University of Agricultural Sciences, GKVK, Bengaluru visited agriculture and horticulture farms of Israel from 28.01.2023 to 03.02.2023. The important places visited were Kibbutz Ginosaur Banana plantations of Jordan Valley, Northern-East part of Israel, near the Sea of Galilee, Robotics Afikim dairy farm, Kibbutz, Kibbutz SDE eliyahu pollination technologies and biological pest control – Biobee, Caesarea, Carmel Market, Tel Aviv, International school of Agricultural Sciences (The Hebrew University of Jerusalem), Netafim Centre for Agriculture Research, Grape Vine yards, Kibbutz kalia desert farming. The team gained knowledge on soil and water conservation, Protected cultivation in large scale, Fertigation technology using smart nutrients, Use of Recycled water for vegetable and horticulture crops, Adoption of on farm post-harvest technique , Sterile insect technique for integrated pest management Use of artificial intelligence like robotics for managing dairy farms, Rearing of owl for rodents control, Rearing of bumble bees under protected cultivation for effective pollination and High density mango for easy harvest to reduce the drudgery.

- ಮಂಡ್ಯ ಕೃಷಿ ಮಹಾವಿದ್ಯಾಲಯದ ವಿದ್ಯಾರ್ಥಿನಿಯಾದ ಪ್ರೀತಿ ಕಾಂಬ್ಳೆ, ಇವರು ಫೆಬ್ರವರಿ 2023 ರ ಮಾಹೆಯಲ್ಲಿ ಕ್ಯಾಲಿಫೋರ್ನಿಯಾದ ವೆಂಚುರಾದಲ್ಲಿ ಫೋರ್ ಪಾಯಿಂಟ್ ಶೆರಟಾನ್‌ನಲ್ಲಿ ನಡೆದ ಪರಿಮಾಣಾತ್ಮಕ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಜಿಆರ್‌ಸಿ ಕುರಿತ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿರುತ್ತಾರೆ

### 5.4 ಬೋಧಕರು, ಬೋಧಕೇತರು ಮತ್ತು ವಿದ್ಯಾರ್ಥಿಗಳಿಗೆ ದೊರೆತ ಪ್ರಶಸ್ತಿ ಹಾಗೂ ಮನ್ನಣೆಗಳು

ವಿಶ್ವವಿದ್ಯಾನಿಲಯದ ಬೋಧಕರಿಗೆ ವಿದ್ಯಾರ್ಥಿಗಳಿಗೆ ವಿವಿಧ ಕ್ಷೇತ್ರಗಳಾದ ಬೋಧನೆ/ಸಂಶೋಧನೆ / ವಿಸ್ತರಣೆಯಲ್ಲಿ ಅವರ ಸಾಧನೆಗಳಿಗೆ ಪ್ರಶಸ್ತಿ ಹಾಗೂ ಮನ್ನಣೆಗಳು ದೊರಕಿದ್ದು ಅವುಗಳ ವಿವರಗಳು ಕೆಳಗಿನಂತಿವೆ :

**ಶಿಕ್ಷಕರು**

- ಡಾ. ಆರ್. ಸಿದ್ದರಾಜು, ಡಾ. ಎನ್. ನೇತ್ರ, ಡಾ. ಮುತ್ತುರಾಜು ಮತ್ತು ಡಾ. ಬಿ ಸುಮಲತಾ, ಅಖಿಲ ಭಾರತ ಸುಸಂಘಟಿತ ಬೀಜಗಳು (ಬೆಳೆಗಳು) ಸಂಶೋಧನಾ ಪ್ರಾಯೋಜನೆ, ಜಿಕೆವಿಕೆ, ಬೆಂಗಳೂರುರವರು 12 ನೇ ಮೇ, 2022 ರಂದು ಭಾರತೀಯ ಕೃಷಿ ಅನುಸಂಧಾನ ಪರಿಷತ್ –ಭಾರತೀಯ ಎಣ್ಣೆಬೀಜಗಳ ಸಂಶೋಧನಾ ಸಂಸ್ಥೆ, ಮಾವ್ ಇವರು ಆಯೋಜಿಸಿದ್ದ ಸಿರಿಧಾನ್ಯಗಳ ಇಳುವರಿ ಮತ್ತು ಗುಣಮಟ್ಟವನ್ನು ಹೆಚ್ಚಿಸಲು ಸಮಗ್ರ ವಿಧಾನ ಎಂಬ ಶೀರ್ಷಿಕೆಯೊಂದಿಗೆ ನಡೆದ ಅಖಿಲ ಭಾರತ ಸುಸಂಘಟಿತ ಬೀಜಗಳು (ಬೆಳೆಗಳು) 2021ರ – 36 ನೇ ವಾರ್ಷಿಕ ಗುಂಪು ಸಭೆಯಲ್ಲಿ ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ಕೊಡುಗೆ ನೀಡಿದ್ದಕ್ಕಾಗಿ ಪ್ರಮಾಣಪತ್ರವನ್ನು ಪಡೆದಿರುತ್ತಾರೆ.
- ಡಾ. ಓ.ಆರ್. ನಟರಾಜು, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪ್ರಾಣಿ ವಿಜ್ಞಾನ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ, ಅವರಿಗೆ 15.8.2022 ರಂದು ನವದೆಹಲಿಯಲ್ಲಿ ಪೌಲ್ಟ್ರಿ ಸೈನ್ಸ್ ವಿಷಯದಲ್ಲಿ ತಮ್ಮ ಅತ್ಯುತ್ತಮ ಕೆಲಸಕ್ಕಾಗಿ ಪಶುಧನ್ ಸಮೃದ್ಧಿ ಭಾರತ ಪ್ರಶಸ್ತಿ–2022 ಅನ್ನು ನೀಡಿ ಗೌರವಿಸಲಾಗಿದೆ. 23.07.2022 ರಂದು ಏಷ್ಯನ್ ಜರ್ನಲ್ ಆಫ್ ಡೈರಿ ಸೈನ್ಸ್ ಅಂಡ್ ಫುಡ್ ರೀಸರ್ಚ್‌ನಿಂದ ವಿಮರ್ಶಕ ಶ್ರೇಷ್ಠ ಪ್ರಶಸ್ತಿಯನ್ನು ನೀಡಲಾಗಿದೆ.
- ಅಕ್ಟೋಬರ್ 11, 2022 ರಂದು ನಡೆದ ವಿಶ್ವವಿದ್ಯಾನಿಲಯದ 57ನೇ ಸಂಸ್ಥಾಪನಾ ದಿನಾಚರಣೆಯ ಸಂದರ್ಭದಲ್ಲಿ 'ಡಾ. ಕಾಳಯ್ಯ ಕೃಷ್ಣ ಮೂರ್ತಿ ರಾಷ್ಟ್ರೀಯ ಪ್ರಶಸ್ತಿ' ಯನ್ನು ಡಾ. ಟಿ.ಇ. ನಾಗರಾಜ, ಪ್ರಾಧ್ಯಾಪಕರು ಮತ್ತು ಸಂಯೋಜಕರು, ಎಐಸಿಆರ್‌ಪಿ, ಮೈನರ್ ಮಿಲೆಟ್ಸ್, ಜಿಕೆವಿಕೆ, ಬೆಂಗಳೂರು ಇವರಿಗೆ ಸಂಶೋಧನೆಯಲ್ಲಿ ಅತ್ಯುತ್ತಮ ಕೊಡುಗೆಗಾಗಿ ನೀಡಲಾಯಿತು. ಜಿಕೆವಿಕೆ ಕೃಷಿ ಮಹಾವಿದ್ಯಾಲಯದ ಜೈವಿಕ ತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕಿ ಹಾಗೂ ಮುಖ್ಯಸ್ಥರಾದ ಡಾ. ಎಸ್. ಶ್ಯಾಮಲಮ್ಮ ಅವರಿಗೆ 'ನಾಗಮ್ಮ ದತ್ತಾತ್ರೇಯ ರಾವ್ ದೇಸಾಯಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಶ್ರೀಮತಿ ಮಾಲತಿ ಹೆಗಡೆ ಅವರ 'ನೆಲದ ನಂಟು' ಪುಸ್ತಕಕ್ಕೆ ಅತ್ಯುತ್ತಮ ಕನ್ನಡ ಪುಸ್ತಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜುವಾರಿ ಅಗ್ರೋ–ಇಂಡಸ್ಟ್ರೀಸ್ ಲಿಮಿಟೆಡ್‌ನ 'ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ'

- Ms. Preeti Kamble, student of B.Sc. (Agri.), CoA, Mandya attended the International conference on Quantitative Genetics and Genomics GRC held at Four point Sheraton, Ventura, California during February of 2023.

### 5.4 Recognitions / Awards Conferred on Faculty, Non-Teaching & Students

Many teachers & students have been bestowed with several awards and were recognised for their contribution in the field of teaching/research/ extension. The details are given below :

**Teachers**

- Dr. R. Siddaraju, Dr. N. Nethra, Dr. Muthuraju and Dr. B. Sumalatha from AICRP on Seeds (Crops) received certificate for technology development for having contributed in the development of technology entitled "Integrated approach for enhancing the seed yield and quality in millets" during 36th Annual group meeting of AICRP on seeds (Crops), 2021 organised virtually by ICAR- Indian institute of seed science, Mau on 12th May, 2022.
- Dr. O.R. Nataraju, Professor & Head, Department of Animal Science, College of Agriculture, GKVK, UAS, Bangalore has been honoured with Pashudhan Samriddhi India Award 2022 for his outstanding work in the subject of Poultry Science at New Delhi on 15th August 2022. He has also been conferred with Reviewer Excellance Award by the *Asian Journal of Dairy Science and Food Research* on 23rd July, 2022
- On the occasion of 57th Foundation Day of UAS-B held on 11th October, 2022 'Dr. Kalaiah Krishna Murthy National Award' was conferred to Dr. T.E. Nagaraja, Professor & Coordinator, AICRP on Minor Millets, GKVK, Bengaluru, for his outstanding contribution in research. Dr. S. Shyamalamma, Professor & Head, Department of Biotechnology, CoA, GKVK was presented with 'Nagamma Dattatreya Rao Desai Award'. Best Kannada Book Award was presented to Smt Malathi Hegde for her book 'Nelada Nantu'. M/ S Zuari Agro-Industries Limited 'Best Extension Worker Award' was bestowed to Dr. Mallikarjuna

ಯನ್ನು ಬೆಂಗಳೂರು ಗ್ರಾಮಾಂತರದ ಕೆವಿಕೆಯ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥ ಡಾ. ಮಲ್ಲಿಕಾರ್ಜುನ ಗೌಡ ಅವರಿಗೆ ಪ್ರದಾನ ಮಾಡಲಾಯಿತು. ಅತ್ಯುತ್ತಮ ಐಸಿಎಆರ್ ಶಿಕ್ಷಕ ಪ್ರಶಸ್ತಿಯನ್ನು ಡಾ.ಎಸ್.ಬಿ. ಯೋಗಾನಂದ, ಕೃಷಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕರು, ಕೃಷಿ ಕಾಲೇಜು, ಮಂಡ್ಯ ಅವರಿಗೆ ಪ್ರದಾನ ಮಾಡಲಾಯಿತು. 'ವಿಶ್ವವಿದ್ಯಾಲಯದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ'ಯನ್ನು ಡಾ.ಎಂ.ಎಸ್. ಗಣಪತಿ, ಪ್ರಾಧ್ಯಾಪಕರು, ಇನ್ಸ್ಟಿಟ್ಯೂಟ್ ಆಫ್ ಅಗ್ರಿಬಿಸಿನೆಸ್ ಮ್ಯಾನೇಜ್ಮೆಂಟ್, ಜಿಕೆವಿಕೆ; ಜಿಕೆವಿಕೆ ಕೃಷಿ ಮಹಾವಿದ್ಯಾಲಯದ ಕೃಷಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ಸಿ.ಸೀನಪ್ಪ; ರೇಷ್ಮೆ ಕೃಷಿ ಮಹಾವಿದ್ಯಾಲಯ ಚಿಂತಾಮಣಿಯ ಕೃಷಿ ವಿಸ್ತರಣಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಎಂ.ವಿ. ಶ್ರೀನಿವಾಸ ರೆಡ್ಡಿ, ಮತ್ತು ಕೃಷಿ ಮಹಾವಿದ್ಯಾಲಯ ಜಿಕೆವಿಕೆಯ ತೋಟಗಾರಿಕಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಸಿ. ಸುನೀತಾ ಇವರಿಗೆ ನೀಡಲಾಯಿತು. ಉತ್ತಮ ಕೃಷಿ ಮೇಲ್ವಿಚಾರಕ ಪ್ರಶಸ್ತಿಯನ್ನು ಡಾ.ಎಂ.ಎಸ್. ನಾಗರಾಜ್, ಕೃಷಿ ಮೇಲ್ವಿಚಾರಕರು, ಕೃಷಿ ಸಂಶೋಧನಾ ಕೇಂದ್ರ, ಗುಂಜೇವು ಇವರಿಗೆ ನೀಡಲಾಯಿತು. ಅತ್ಯುತ್ತಮ ಸೇವಾ ಸಿಬ್ಬಂದಿ ಪ್ರಶಸ್ತಿಗಳನ್ನು ಶ್ರೀ ಎಸ್.ಸಿ.ರಂಗನಾಥ್, ತಾಂತ್ರಿಕ ಅಧಿಕಾರಿ, ಕೆವಿಕೆ, ರಾಮನಗರ; ಶ್ರೀ ಎಸ್. ಶ್ರೀನಿವಾಸ್, ಉಪ ನಿಯಂತ್ರಣಾಧಿಕಾರಿ, ವಿಶ್ವವಿದ್ಯಾಲಯ ಪರೀಕ್ಷಾ ಕೇಂದ್ರ, ಜಿಕೆವಿಕೆ; ಶ್ರೀ ಹೆಚ್.ಸಿ. ರಾಮಚಂದ್ರ, ಸೀನಿಯರ್ ಫೀಲ್ಡ್ ಅಸಿಸ್ಟೆಂಟ್, ಎನ್.ಎಸ್.ಪಿ., ಜಿಕೆವಿಕೆ; ಶ್ರೀ ಶಿವಮಲ್ಲಯ್ಯ, ಹಿರಿಯ ಕ್ಷೇತ್ರ ಸಹಾಯಕ, ಸಾವಯವ ಕೃಷಿ ಸಂಶೋಧನಾ ಕೇಂದ್ರ, ಮೈಸೂರು ಮತ್ತು ಶ್ರೀಮತಿ. ರಂಗಮ್ಮ, ಹಿರಿಯ ಕಾರ್ಮಿಕರು, ಆಹಾರ ವಿಜ್ಞಾನ ಮತ್ತು ಪೌಷ್ಟಿಕಾಂಶ ವಿಭಾಗ, ಕೃಷಿ ಕಾಲೇಜು, ಜಿ.ಕೆ.ವಿ.ಕೆ. ಇವರಿಗೆ ನೀಡಲಾಯಿತು.

Gowda, Sr. Scientist & Head, KVK, Bengaluru Rural. Best ICAR Teacher Award was bestowed to Dr. S.B. Yogananda, Professor of Agronomy, CoA, Mandya. 'University Best Teacher Awards' were given to Dr. M.S. Ganapathy, Professor, Institute of Agribusiness Management, GKVK; Dr. C. Seenappa, Professor of Agronomy, CoA, GKVK; Dr. M.V. Srinivasa Reddy, Assistant Professor of Agricultural Extension, CoS, Chintamani and Dr. C. Suneetha, Assistant Professor of Horticulture, CoA, GKVK, Bengaluru. Best Farm Superintendent Award was given to Dr. M.S. Nagaraj, Farm Superintendent, ARS, Gunjevu. Best Service Personnel Awards were presented to Shri S.C. Ranganath, Technical Officer, KVK, Ramanagara; Shri S. Srinivas, Dy. Comptroller, University Examination Centre, GKVK; Shri H.C. Ramachandra, Sr. Field Assistant, NSP, GKVK; Shri Shivamallaiah, Sr. Field Assistant, Organic Farming Research Station, Mysuru and Smt. Rangamma, Sr. Labourer, Department of Food Science & Nutrition, CoA, GKVK.

- ಡಾ. ಮೋಹನ್ ಕುಮಾರ್, ಆರ್, ಸಹಾಯಕ ಪ್ರಾಧ್ಯಾಪಕರು (ಬೇಸಾಯಶಾಸ್ತ್ರ), ಅಖಿಲ ಭಾರತ ಸುಸಂಘಟಿತ ಹರಳು ಸಂಶೋಧನಾ ಪ್ರಾಯೋಜನೆ, ಇವರಿಗೆ ಕೃಷಿ ವಿಜ್ಞಾನ ತ್ರೈಮಾಸಿಕ ನಿಯತಕಾಲಿಕದಲ್ಲಿ ಪ್ರಕಟವಾದ ಸಮಗ್ರ ಕೃಷಿ ಮತ್ತು ಪಶುಸಂಗೋಪನೆಯ ಮೂಲಕ ಮಳೆಯಾಶ್ರಿತ ಕೃಷಿಯಲ್ಲಿ ಸುಸ್ಥಿರ ಜೀವನೋಪಾಯ ಎಂಬ ವೈಜ್ಞಾನಿಕ ಲೇಖನಕ್ಕಾಗಿ ಪ್ರೊ. ಬಿ.ವಿ. ವೆಂಕಟರಾವ್, 2021ರ ಅತ್ಯುತ್ತಮ ವೈಜ್ಞಾನಿಕ ಲೇಖನ ಪ್ರಶಸ್ತಿಯನ್ನು 3–6ನೇ, ನವೆಂಬರ್, 2022 ರವರೆಗೆ ಆಯೋಜಿಸಲಾದ ಕೃಷಿಮೇಳ 2022 ರಲ್ಲಿ ಪಡೆದಿರುತ್ತಾರೆ.

- Dr. Mohan Kumar, R., Assistant Professor (Agronomy), AICRP on Castor was awarded Prof. B.V. Venkat Rao Award in Krishimela 2022 for the best Scientific paper on 'Sustainable livelihood in rainfed agriculture through integrated farming and animal husbandry' published in Krishi Vignana quarterly magazine during 2021 organized during 3-6 November, 2022.

- ಮಹಾರಾಷ್ಟ್ರದ ರಾಹುರಿಯ ಮಹಾತ್ಮ ಫುಲೆ ಕೃಷಿ ವಿದ್ಯಾಪೀಠದಲ್ಲಿ ನವೆಂಬರ್ 15, 2022 ರಂದು ಇಂಡಿಯನ್ ಸೊಸೈಟಿ ಆಫ್ ಸಾಯಲ್ ಸೈನ್ಸ್‌ನ 86ನೇ ವಾರ್ಷಿಕ ಸಮಾವೇಶದಲ್ಲಿ ಡಾ: ಎನ್.ಬಿ.ಪ್ರಕಾಶ್, ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ಗಾಕೃವಿಕೆ, ಬೆಂಗಳೂರಿನ "ಮಣ್ಣಿನ ಫಲವತ್ತತೆ, ಸಸ್ಯ ಪೋಷಣೆಯಲ್ಲಿನ ಅತ್ಯುತ್ತಮ ಕೊಡುಗೆಗಳನ್ನು" ಗುರುತಿಸಿ ಇಂಡಿಯನ್ ಸೊಸೈಟಿ ಆಫ್ ಸಾಯಲ್ ಸೈನ್ಸ್‌ನ ಫೆಲೋ ಆಗಿ ಸೇರ್ಪಡೆಗೊಂಡಿದ್ದಾರೆ.

- Dr. N.B. Prakash, Dean (Agri.), College of Agriculture, GKVK, Bangalore is inducted as Fellow of the Indian Society of Soil Science in recognition of his outstanding contributions in soil fertility, plant nutrition at the 86th Annual Convention of the Indian Society of Soil Science held on 15th November, 2022 at Mahatma Phule Krishi Vidyapeeth, Rahuri, Maharashtra.

- ಡಾ ಎಂ.ಬಿ. ದರ್ಶನ್, ಸಹ ಪ್ರಾಧ್ಯಾಪಕರು (ಕೃಷಿ ಇಂಜನಿಯರಿಂಗ್), ಅಖಿಲ ಭಾರತ ಸುಸಂಘಟಿತ ಕೋಯ್ಲಿನೋತ್ತರ ಇಂಜನಿಯರಿಂಗ್ ಮತ್ತು ತಂತ್ರಜ್ಞಾನ ಸಂಶೋಧನಾ ಪ್ರಾಯೋಜನೆ, ಜಿಕೆವಿಕೆ ಇವರಿಗೆ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿನ ಕೊಡುಗೆಗಳಿಗಾಗಿ 10ನೇ ಡಿಸೆಂಬರ್,

- Dr M.B. Darshan, Assisstant Professor (Agril. Engineering), AICRP on Post harvest Engineering and Technology was awarded Karnataka Kalaa Kesari- 2022 jointly by Kannada mattu Samskruti Ilakhe, GoK & Chiguru Cultural and Charitable

2022 ರಂದು ಕಲಾಗ್ರಾಮ, ಬೆಂಗಳೂರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಮತ್ತು ಚಿಗುರು ಸಂಸ್ಕೃತಿ ಮತ್ತು ಚಾರಿಟಬಲ್ ಟ್ರಸ್ಟ್ ಇವರು ಕರ್ನಾಟಕ ಕೇಸರಿ-2022ರ ಪ್ರಶಸ್ತಿಯನ್ನು ನೀಡಿರುತ್ತಾರೆ.

- ದಿನಾಂಕ 17.03.2022 ರಂದು ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ವಿಜ್ಞಾನ ಮತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರದ ವತಿಯಿಂದ ಅಖಿಲ ಭಾರತ ಸುಸಂಘಟಿತ ಖುಷ್ಕಿ ಬೇಸಾಯ ಪ್ರಾಯೋಜನೆಯ ವಿಜ್ಞಾನಿಗಳು ಹೊರತಂದ "ಸಮಗ್ರ ಕೃಷಿ ಪದ್ಧತಿಗಳು" ಪುಸ್ತಕಕ್ಕೆ ಕೃಷಿ ವಿಭಾಗದ ಶ್ರೇಷ್ಠ ಪುಸ್ತಕ ಪ್ರಶಸ್ತಿ 2021-22, ದೊರಕಿದೆ.

### ವಿದ್ಯಾರ್ಥಿಗಳು

- ಶ್ರೀವಿದ್ಯಾ, ಆರ್. ವಿದ್ಯಾರ್ಥಿಯು ಬೆಂಗಳೂರಿನ ಜೈನ್ ಯೂನಿವರ್ಸಿಟಿ ಆವರಣದಲ್ಲಿ 2022ರ ಏಪ್ರಿಲ್ 24 ರಿಂದ ಮೇ 3ರವರೆಗೆ ಆಯೋಜಿಸಲಾಗಿದ್ದ 2ನೇ ಆವೃತಿಯ ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್ 2021 ರ ಫೆನ್ಸಿಂಗ್ ಕ್ರೀಡೆಯಲ್ಲಿ (ಇ.ಪೀ-ಮಹಿಳಾ ವಿಭಾಗ) ಕಂಚಿನ ಪದಕವನ್ನು ಪಡೆದುಕೊಂಡಿದ್ದಾರೆ.

- ಶ್ರೀ ಪ್ರಧಾನ್, ಪಿ., ಕೃಷಿ ಮಹಾವಿದ್ಯಾಲಯ, ಜಿಕೆವಿಕೆಯ ವಿದ್ಯಾರ್ಥಿ ಇವರಿಗೆ ವಿಶ್ವವಿದ್ಯಾನಿಲಯದ ಅತ್ಯುತ್ತಮ ನಿರ್ಗಮಿತ ವಿದ್ಯಾರ್ಥಿ ಪ್ರಶಸ್ತಿ-2021-22 ಅನ್ನು ದಿನಾಂಕ: 11-10-2022 ರ 57ನೇ ಸಂಸ್ಥಾಪನಾ ದಿನದಂದು ನೀಡಿ ಗೌರವಿಸಲಾಗಿದೆ.

- ಸಂಸ್ಕರಣೆ ಮತ್ತು ಆಹಾರ ಇಂಜಿನಿಯರಿಂಗ್ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳಾದ ಶ್ರೀ ಶ್ರೀಧರ್ ನಾಯ್ಕ್ ಮತ್ತು ಶ್ರೀ. ಭರತ್ ಎನ್., ರವರು ಡಾ. ದ್ರೋಣಾಚಾರಿ ಮಾನ್ವಿ, ಸಹಾಯಕ ಪ್ರಾಧ್ಯಾಪಕರು ಇವರ ಮಾರ್ಗದರ್ಶನದ ಅಡಿಯಲ್ಲಿ ತೋಟಗಾರಿಕ ವಿಶ್ವವಿದ್ಯಾನಿಲಯ, ಬಾಗಲಕೋಟೆ ಮತ್ತು ಎನ್‌ಎಹೆಚ್‌ಇಪಿ-ಐಡಿಪಿ, ಐಸಿಎಆರ್ ರವರು ಒಟ್ಟಾಗಿ ಅಕ್ಟೋಬರ್ 18-20 ರವರೆಗೆ ಆಯೋಜಿಸಿದ್ದ ಅಖಿಲ ಭಾರತ ಕೃಷಿ ನವೋದ್ಯಮಗಳ ಸಮಾವೇಶ-2022 ರಲ್ಲಿ ಭಾಗವಹಿಸಿ ಮೂರನೇ ಸ್ಥಾನವನ್ನು ಪಡೆದಿರುತ್ತಾರೆ.

- ಕುಮಾರಿ ಸೈಯದಾ ಇಫ್ತಾಕರ್ ಬಾನು, ಮೂರನೆ ವರ್ಷದ ಬಿ.ಎಸಿ. (ಆನ್ಸ್.) ಅಗ್ರಿಯ ವಿದ್ಯಾರ್ಥಿಯು 2022 ರ ಡಿಸೆಂಬರ್ 20 ರಿಂದ 23 ರವರೆಗೆ ಜಮ್ಮುವಿನ ಜಮ್ಮು ವಿಶ್ವವಿದ್ಯಾಲಯದಲ್ಲಿ ನಡೆದ ಅಖಿಲ ಭಾರತ ವಿಶ್ವವಿದ್ಯಾಲಯುದ ಫೆನ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಮಹಿಳೆಯರಿಗಾಗಿ ಫಾಯಿಲ್ ಸ್ಪರ್ಧೆಯಲ್ಲಿ ಕಂಚಿನ ಪದಕವನ್ನು ಪಡೆದರು. 2023 ರ ಮಾರ್ಚ್ 12 ರಿಂದ 15 ರವರೆಗೆ ಚೆನ್ನೈನ ಜವಾಹರ್ ಲಾಲ್ ನೆಹರು ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಖೇಲೋ ಇಂಡಿಯಾ ಮಹಿಳಾ ಫೆನ್ಸಿಂಗ್ ಲೀಗ್ ಮತ್ತು ರ್‍ಯಾಂಕಿಂಗ್ ಟೂರ್ನಮೆಂಟ್ ಹಂತ-3 ರಲ್ಲಿ ಮಹಿಳೆಯರಿಗಾಗಿ ಫಾಯಿಲ್ ಸ್ಪರ್ಧೆಯಲ್ಲಿ ಕಂಚಿನ ಪದಕವನ್ನು ಪಡೆದರು.

Trust (Reg), Bengaluru on 10-12-2022 at Kalagrama, Bengaluru for his contributions in the field of Art, Literature and Culture.

- Scientists of AICRP for Dryland Agriculture, received "Best Book Award for the book Integrated farming systems in Kannada Under Agriculture division from Karnataka science and technology academy, Department of Science and Technology, GoK on 17.03.2023.

### Students

- Srividya, R. (ID. No. EMB 0065) student of III B.Tech. (Agri. Engg.) has secured Bronze Medal in Fencing Sport (Epee – women category) in the 2nd edition of Khelo All India University Games 2021 held at Jain University Campus, Bengaluru from 28th April to 2rd May 2022.

- Mr. Pradhan, P., (ID. No. ALB 8173), College of Agriculture, GKVK has been awarded with Best Outgoing Student Award (2021-22) by UAS, Bangalore, during 57th Foundation Day of the University.

- Sridhar Naik and Bharat, N. student of M.Tech. (PFE), Department of Processing and Food Engineering, College of Agricultural Engineering, UAS, GKVK (under the guidance of Dr. Dronachari Manvi, Assistant Professor) has secured third place in start up concept in - 'All India Agri-start up Convention - 2022 jointly organizing by University of Horticultural Sciences, Bagalkot, NAHEP-IDP, ICAR held from 18-20· October, 2022.

- Kumari Syeda Ifthaquar Banu (AMB 0242) student of III B.Sc. (Hons.) Agri secured Bronze Medal in Foil event for Women in the All India University Fencing Championship held at University of Jammu from 20-23 December, 2022 and also secured Bronze Medal in Foil event for Women in the Khelo India Womens Fencing League and Ranking Tournament Phase-3 held at Jawaharlal Nehru Indoor Stadium, Chennai from 12-15 March, 2023.

- ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾಲಯದ 10 ವಿದ್ಯಾರ್ಥಿಗಳು ಗೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ ಹಾಗೂ 15 ವಿದ್ಯಾರ್ಥಿಗಳು ಜೆ.ಆರ್.ಎಫ್. ಪರೀಕ್ಷಯಲ್ಲಿ ಉತ್ತೀರ್ಣರಾಗಿರುತ್ತಾರೆ

- ಸಂಸ್ಕರಣೆ ಮತ್ತು ಆಹಾರ ಇಂಜಿನಿಯರಿಂಗ್ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳಾದ ಶ್ರೀ ಶ್ರೀಧರ್ ನಾಯ್ಕ್ ಮತ್ತು ಶ್ರೀ. ಭರತ್ ಎನ್., ರವರು ಡಾ. ದ್ರೋಣಾಚಾರಿ ಮಾನ್ವಿ, ಸಹಾಯಕ ಪ್ರಾಧ್ಯಾಪಕರು ಇವರ ಮಾರ್ಗದರ್ಶನದ ಅಡಿಯಲ್ಲಿ ಎಫ್.ಕೆ.ಸಿ.ಸಿ.ಐ.ನ 14ನೇ ಅಧ್ಯಾಯದ ಮಂಥಾನ್–2022 ರವರು ಆಯೋಜಿಸಿದ್ದ ದಕ್ಷಿಣ ಭಾರತದ ವ್ಯಾಪಾರ ಸ್ಪರ್ಧೆಯಲ್ಲಿ ಅಗ್ರ 32 ತಂಡಗಳಲ್ಲಿ ಒಂದಾಗಿ ಆಯ್ಕೆಯಾಗಿದ್ದಾರೆ. ಅವರು ಆಗ್ನೈಟ್ 3.0– ಎ–ಐಡಿಇಎ–ನಾರ್ಮನ ಸೆಂಟರ್ ಫಾರ್ ಅಗ್ರಿ ಇನ್ನೋವೇಶನ್‌ನಲ್ಲಿ ಅಂತಿಮ ಸುತ್ತಿನ ಪ್ರಸ್ತುತಿಗೆ ಆಯ್ಕೆಯಾದರು

## 5.5 ಸರ್ಕಾರದ ಮತ್ತು ಇತರ ಸಂಸ್ಥೆಗಳಿಗೆ ಅಧ್ಯಾಪಕರ ನಾಮ ನಿರ್ದೇಶನಗಳು

ಸರ್ಕಾರ ಮತ್ತು ಇತರ ಸಂಸ್ಥೆಗಳಿಗೆ ಅಧ್ಯಾಪಕರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದ ವಿವರಗಳು ಕೆಳಗಿನಂತಿವೆ :

- ಡಾ. ಎನ್.ಬಿ. ಪ್ರಕಾಶ್, ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ಗಾಕೃವಿಕೆ, ಬೆಂಗಳೂರು ಅವರು 2023 ಮತ್ತು 2024ರ ಅವಧಿಯಲ್ಲಿ ಎರಡು ವರ್ಷಗಳ ಕಾಲ ಇಂಡಿಯನ್ ಸೊಸೈಟಿ ಆಫ್ ಸಾಯಿಲ್ ಸೈನ್ಸ್, ನವದೆಹಲಿಯ ಜರ್ನಲ್‌ನ ಸಂಪಾದಕೀಯ ಮಂಡಳಿಯಲ್ಲಿ ಸಂಪಾದಕರಾಗಿ ಸೇವೆ ಸಲ್ಲಿಸಲು ನಾಮ ನಿರ್ದೇಶನಗೊಂಡಿದ್ದಾರೆ.

- ಡಾ. ಎಂ.ಎನ್. ವೆಂಕಟರಮಣ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕೃಷಿ ಅರ್ಥಶಾಸ್ತ್ರ ವಿಭಾಗ, ಜಿಕೆವಿಕೆ, ಬೆಂಗಳೂರು ಇವರು ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಇಲ್ಲಿ ಬಾಹ್ಯ ಪರೀಕ್ಷಕರಾಗಿ ಸೇವೆ ಸಲ್ಲಿಸಿರುತ್ತಾರೆ. ಇವರು ಕರ್ನಾಟಕ ಬೀಜ ನಿಗಮ, ಹೆಬ್ಬಾಳ, ಬೆಂಗಳೂರು ಇಲ್ಲಿ ಸಮಿತಿ ಸದಸ್ಯರಾಗಿ ನಾಮ ನಿರ್ದೇಶನಗೊಂಡಿದ್ದಾರೆ. ಕರ್ನಾಟಕ ಕೃಷಿ ಬೆಲೆ ಆಯೋಗ, ಬೆಂಗಳೂರು ಇಲ್ಲಿ ತಾಂತ್ರಿಕ ಅಧಿಕಾರಿಗಳ ನೇಮಕಾತಿ ಸಮಿತಿಯ ಸದಸ್ಯರಾಗಿ ನಾಮ ನಿರ್ದೇಶನ ಗೊಂಡಿದ್ದಾರೆ ಮತ್ತು ತೋಟಗಾರಿಕೆ ವಿಭಾಗ, ಲಾಲ್‌ಬಾಗ್, ಬೆಂಗಳೂರು ಇಲ್ಲಿ ಸಮಿತಿ ಸದಸ್ಯರಾಗಿ ನಾಮ ನಿರ್ದೇಶನಗೊಂಡಿದ್ದಾರೆ.

- ಡಾ. ಜಿ.ಎಂ. ಗಡ್ಡಿ, ಪ್ರಾಧ್ಯಾಪಕರು ಕೃಷಿ ಅರ್ಥಶಾಸ್ತ್ರ ವಿಭಾಗ, ಜಿಕೆವಿಕೆ, ಬೆಂಗಳೂರು ಇವರು ಸಕ್ಕರೆ ಮತ್ತು ಕಬ್ಬು ನಿಯಂತ್ರಣ ಸಮಿತಿ, ಕರ್ನಾಟಕ ಸರ್ಕಾರ, ಬೆಂಗಳೂರು ಇಲ್ಲಿ ಸಮಿತಿ ಸದಸ್ಯರಾಗಿ ನಾಮ ನಿರ್ದೇಶನಗೊಂಡಿದ್ದಾರೆ. ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರುನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ಸಂಶೋಧನೆಗಾಗಿ ನಬಾರ್ಡ ಗ್ರಾಮೀಣ ಚಿಂತನ ಯೋಜನೆಯ

- Ten students of College of Agricultural Engineering, GKVK qualified in GATE Examination and 15 students has cleared the JRF examination

- Sridhar Naik and Bharat, N. (PFE), Department of Processing and Food Engineering, College of Agricultural Engineering, UAS, GKVK (under the guidance of Dr. Dronachari Manvi, Assistant Professor) was selected under TOP 32 Teams - Business Plan Competition across South India during 14th Edition of MANTHAN-2022, Bengaluru. He was also selected for final round presentation at Aggnite 3.0- A-IDEA – NAARM, Center for Agri Innovation

## 5.5 Nominations of teachers for different assignment in Govt. and other agencies

The details of teachers who were nominated for different assignment in Government and other agencies as members during 2022-23 are presented here under

- Dr. N.B. Prakash, Dean (Agri.), College of Agriculture, GKVK, Bengaluru is nominated as an Editor in the Editorial Board of the Journal of the Indian Society of Soil Science, New Delhi for two years during 2023 and 2024.

- Dr. M.N. Venkataramana, Professor & Head of Agricultural Economics, CoA, GKVK, Bengaluru is nominated as member of External Examiner, Karnataka Lokaseva Ayoga, Bengaluru. He is nominated as member for Karnataka Seed Corporation, Hebbal, Bengaluru. He is nominated as member of Selection Committee for Recruitment of candidates for Technical Officer, Karnataka Price Commission, GoK, Bengaluru. He is also nominated as member, Department of Horticulture Committee, Lalbagh.

- Dr. G.M. Gaddi, Professor of Agricultural Economics, CoA, GKVK, Bengaluru is nominated as member of Sugar and Sugarcane control committee, GoK, Bengaluru. He is also nominated as member Coordinator of the Grameen Chinthan Project of NABARD for PG research of

ಸಂಯೋಜಕರಾಗಿ ನಾಮ ನಿರ್ದೇಶನಗೊಂಡಿದ್ದಾರೆ. ಬೆಲ್ಜಿಯಂನ ಐ.ಎಮ್.ಆರ್.ಡಿ ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದ ಸಂಯೋಜಕರಾಗಿ ನಾಮ ನಿರ್ದೇಶನಗೊಂಡಿದ್ದಾರೆ. ಕನಾಟಕ ರಾಜ್ಯ ಗಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಇಲ್ಲಿ ಪ್ರಶ್ನೆ ಪತ್ರಿಕೆಯನ್ನು ಹೊಂದಿಸಲು ಬಾಹ್ಯ ಪರೀಕ್ಷಕರಾಗಿ ನಾಮ ನಿರ್ದೇಶನಗೊಂಡಿದ್ದಾರೆ .

- ಡಾ. ಎಸ್.ಎಸ್. ಪ್ರಕಾಶ್, ಡೀನ್ (ಕೃಷಿ), ಕೃಷಿ ಮಹಾ ವಿದ್ಯಾಲಯ, ಮಂಡ್ಯ ಇವರು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಮಿಮ್ಸ್), ಮಂಡ್ಯ ಇಲ್ಲಿ ಸಾಂಸ್ಥಿಕ ನೈತಿಕ ಸಮಿತಿ ಅಧ್ಯಕ್ಷರಾಗಿ ನಾಮ ನಿರ್ದೇಶನಗೊಂಡಿರುತ್ತಾರೆ. ಇವರು ಅಣ್ಣಾಮಲೈ ವಿಶ್ವವಿದ್ಯಾನಿಲಯ, ತಮಿಳುನಾಡು ಇಲ್ಲಿ ಅಧ್ಯಯನ ಮಂಡಳಿಯಲ್ಲಿ ವಿಷಯ ತಜ್ಞರಾಗಿಯೂ ಸಹ ನಾಮ ನಿರ್ದೇಶನಗೊಂಡಿರುತ್ತಾರೆ.
- ಡಾ. ಎಂ.ಎಸ್. ಗಣಪತಿ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಹಾಗೂ ಕೃ.ವಿ.ವಿ. ಮುಖ್ಯಸ್ಥರು, ಕೃಷಿ ವ್ಯವಹಾರ ನಿರ್ವಹಣೆ ಸಂಸ್ಥೆ, ಜಿಕೆವಿಕೆ, ಬೆಂಗಳೂರು, ಇವರು ಬೆಂಗಳೂರಿನ ನಿಟ್ಟೆ ಸ್ಕೂಲ್ ಆಫ್ ಮೇನೇಜ್ಮೆಂಟ್‌ನಲ್ಲಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬೋರ್ಡ್ ಆಫ್ ಸ್ಟಡೀಸನ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದಾರೆ.
- ಡಾ. ಸಿದ್ದಯ್ಯ, ಪ್ರಾಧ್ಯಾಪಕರು, ಕೃಷಿ ವ್ಯವಹಾರ ನಿರ್ವಹಣೆ ಸಂಸ್ಥೆ, ಜಿಕೆವಿಕೆ, ಬೆಂಗಳೂರು, ಇವರು ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯ ಎಫ್.ಪಿ.ಓ. ಕಾರ್ಯಪಡೆ ಸಮಿತಿಗೆ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದಾರೆ.
- ಡಾ. ಎಂ. ಎಸ್. ಗಣಪತಿ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಹಾಗೂ ಕೃ.ವಿ.ವಿ. ಮುಖ್ಯಸ್ಥರು ಮತ್ತು ಡಾ. ಸಿದ್ದಯ್ಯ, ಪ್ರಾಧ್ಯಾಪಕರು, ಕೃಷಿ ವ್ಯವಹಾರ ನಿರ್ವಹಣೆ ಸಂಸ್ಥೆ, ಜಿಕೆವಿಕೆ, ಬೆಂಗಳೂರು ಅವರನ್ನು ಮಾಧ್ಯಮಿಕ ಕೃಷಿ ನಿರ್ದೇಶನಾಲಯದ ಸದಸ್ಯರಾಗಿ ಕರ್ನಾಟಕ ಸರ್ಕಾರಕ್ಕೆ ನಾಮನಿರ್ದೇಶನಗೊಂಡಿದ್ದಾರೆ.
- ಡಾ. ಎಂ. ಆರ್. ಗಿರೀಶ್, ಪ್ರಾಧ್ಯಾಪಕರು, ಕೃಷಿ ವ್ಯವಹಾರ ನಿರ್ವಹಣೆ ಸಂಸ್ಥೆ, ಟಿ.ಸಿ.ಎಸ್. ಐಆನ್‌ಗಾಗಿ ಕೃಷಿ ವ್ಯವಹಾರದಲ್ಲಿ ವಿಷಯ ತಜ್ಞರಾಗಿ ಸೇವೆ ಸಲ್ಲಿಸುತ್ತಿದ್ದಾರೆ
- ಡಾ. ಕೆ.ಎಸ್. ಜಗದೀಶ್, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು & ಡಾ. ಬಿ.ವಿ. ಶ್ವೇತಾ ಸಹಾಯಕ ಪ್ರಾಧ್ಯಾಪಕರು, ಜೇನು ಕೃಷಿ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ, ಬೆಂಗಳೂರುರವರು ತಾಂತ್ರಿಕ ತಜ್ಞರ ಸಮಿತಿ, ಸಮಗ್ರ ಜೈವಿಕ ವಿಜ್ಞಾನ, ಎಸ್ಇಆರ್‌ಬಿ, ಡಿಎಸ್‌ಟಿ, ಭಾರತ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಸಮಿತಿ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದಾರೆ.
- ಡಾ. ನಟರಾಜ ಕರಬ, ಎನ್., ಪ್ರಾಧ್ಯಾಪಕರು, ಬೆಳೆ ಶರೀರ ಕ್ರಿಯಾಶಾಸ್ತ್ರ ವಿಭಾಗ, ಕೃವಿವಿ, ಜಿಕೆವಿಕೆ, ಇವರನ್ನು ಆರ್ಗನಿಸ್ಮಲ್ ಮತ್ತು ಎವಲ್ಯೂಷನರಿ ಬಯಾಲಜಿ – ಸಸ್ಯ ವಿಜ್ಞಾನ, ಡಿ.ಎಸ್.ಟಿ. ವಿಜ್ಞಾನ ಮತ್ತು ಇಂಜಿನಿಯರಿಂಗ್ ಸಂಶೋಧನಾ ಮಂಡಳಿ,

UAS-B students. He is coordinator of the student exchange programme of UAS-B & IMRD, Belgium. Served as external examiner for setting the question paper, Karnataka State Rural Development and Panchayat Raj University, Gadag.

- Dr. S.S. Prakash, Dean (Agri.), College of Agriculture, Mandya has been nominated as Chairman of Institutional Ethical Committee, Mandya Institute of Medical Sciences (MIMS), Mandya from 2015 till date. He is also nominated as subject expert for the board of studies of Annamalai University, Tamil Nadu
- Dr. M.S. Ganapathy, Professor & Head and University Head, Institute of Agri-Business Management, CoA, GKVK, Bengaluru is nominated as Member of Board of Studies at NITTE School of Management, Bangalore and Board of Studies at Mysore University.
- Dr. Siddayya, Professor, Institute of Agri-Business Management, CoA, GKVK, Bengaluru is nominated as Member of FPOs Taskforce Committee, Dept. of Horticulture, GoK.
- Dr. M.S. Ganapathy, Professor & Head and University Head and Dr. Siddayya Professor, Institute of Agri-Business Management, CoA, GKVK, Bengaluru have been nominated as the members of Directorate of Secondary Agriculture to the Govt. of Karnataka.
- Dr. M.R. Girish, Professor, Institute of Agri-Business Management is serving as Subject Matter Expert in Agribusiness for TCS iON.
- Dr. K.S. Jagadish, Professor and Head & Dr. B.V. Shwetha, Assistant Professor, Dept. of Apiculture, CoA, GKVK, Bengaluru is nominated as member of BIS (Bureau of Indian Standards), Govt of India.
- Dr. Nataraja Karaba, N., Professor, Department of Crop Physiology, College of Agriculture, GKVK was nominated for the Core Member, Organismal and Evolutionary Biology (OEB) –

ಭಾರತ ಸರ್ಕಾರದ ಅಡಿಯಲ್ಲಿ ಕೋರ್ ಸದಸ್ಯ ಮತ್ತು ಪ್ರಸ್ತುತ ವಿಜ್ಞಾನ ಸಂಪಾದಕೀಯ ಮಂಡಳಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

- ಡಾ. ಬಿ. ಮೋಹನ್ ರಾಜು, ಪ್ರಾಧ್ಯಾಪಕರು, ಬೆಳೆ ಶರೀರಕ್ರಿಯಾಶಾಸ್ತ್ರ ವಿಭಾಗ, ಕೃವಿವಿ, ಜಿಕೆವಿಕೆ, ಇವರನ್ನು ಸಸ್ಯ ವಿಜ್ಞಾನ ಪತ್ರಿಕೆಯ ಸಂಪಾದಕೀಯ ಮಂಡಳಿಯ ಸದಸ್ಯರನ್ನಾಗಿ ಮತ್ತು ಸಸ್ಯ ವಿಜ್ಞಾನ ಫ್ರಾಂಟೀಯರ್ಸ್‌ನಲ್ಲಿ ವಿಮರ್ಶೆ ಸಂಪಾದಕರಾಗಿ ನಾಮನಿರ್ದೇಶನಗೊಂಡಿದ್ದಾರೆ.
- ಡಾ. ಎಂ. ಮಹದೇವಮೂರ್ತಿ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಅರಣ್ಯ ಮತ್ತು ಪರಿಸರ ವಿಜ್ಞಾನ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ, ಬೆಂಗಳೂರು ಇವರು ಬೆಂಗಳೂರಿನ ಕೃಷಿ ಅರಣ್ಯ ರೈತರು ಮತ್ತು ತಂತ್ರಜ್ಞ ಸಂಸ್ಥೆಯಲ್ಲಿ ಜಂಟಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮರದ ತಜ್ಞರ ಸಮಿತಿಯಲ್ಲಿ ಸದಸ್ಯರಾಗಿ ಕರ್ನಾಟಕ ಹೈಕೋರ್ಟ್‌ನಿಂದ ಹಾಗೂ ತೆಲಂಗಾಣ ಲೋಕಸೇವಾ ಆಯೋಗದಲ್ಲಿ ಆಯ್ಕೆ ಸಮಿತಿಯ ಸದಸ್ಯರಾಗಿ ಗುರುತಿಸಲ್ಪಟ್ಟಿದ್ದಾರೆ.
- ಡಾ. ಬಾಬುಸಾಹೇಬ್ ತಾಂಬಟ್, ಪ್ರಾಧ್ಯಾಪಕರು, ಅರಣ್ಯ ಮತ್ತು ಪರಿಸರ ವಿಜ್ಞಾನ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ, ಬೆಂಗಳೂರು ಇವರು ಭಾರತೀಯ ಪರಿಸರ ವಿಜ್ಞಾನ (ಭಾರತ) ದ ಕಾರ್ಯಕಾರಿ ಮಂಡಳಿಯಿಂದ ಇಂಡಿಯನ್ ಜರ್ನಲ್ ಪರಿಸರ ವಿಜ್ಞಾನಕ್ಕಾಗಿ ಸಂಪಾದಕೀಯ ಮಂಡಳಿಯ ಕಾರ್ಯಕಾರಿ ಸದಸ್ಯರಾಗಿ ಆಯ್ಕೆ ಮಾಡಲಾಗಿದೆ.
- ಕೃಷಿ ಮಹಾವಿದ್ಯಾಲಯ, ಜಿಕೆವಿಕೆ, ಬೆಂಗಳೂರಿನ ಸಸ್ಯ ಜೈವಿಕ ತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಡಾ. ಅನಿತಾ ಪೀಟರ್ ಇವರು ಐ.ಬಿ.ಎಸ್.ಸಿಯ ಸದಸ್ಯ ಕಾರ್ಯದರ್ಶಿಯಾಗಿ ಹಾಗೂ ಯುರೋಫಿನ್ಸ್‌ನ ಐ.ಬಿ.ಎಸ್.ಸಿ ಗಾಗಿ ಡಿಬಿಟಿಯಿಂದ ನಾಮನಿರ್ದೇಶನಗೊಂಡಿದ್ದಾರೆ.
- ಕೃಷಿ ಮಹಾವಿದ್ಯಾಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ರೇಷ್ಮೆಕೃಷಿ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾಗಿರುವ ಡಾ. ಮಂಜುನಾಥ್‌ಗೌಡ ರವರು ಕ್ರೇಂದ್ರ ರೇಷ್ಮೆ ಜೆರ್ಮ್‌ಪ್ಲಸ್ಮ್ ಸಂಪನ್ಮೂಲ ಸಂಸ್ಥೆ, ಕೇಂದ್ರ ರೇಷ್ಮೆ ಮಂಡಳಿ ಹೊಸೂರು ಇಲ್ಲಿನ ಸಂಶೋಧನಾ ಸಲಹಾ ಸಮಿತಿ ಹಾಗೂ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆಯ ಸಂಶೋಧನ ವಿಮರ್ಶೆ ಸಮಿತಿ ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ. ದಿನಾಂಕ 31.01.2023 ರಂದು ಕೇಂದ್ರ ರೇಷ್ಮೆ ಮಂಡಳಿಯ ವಿವಿಧ ಸಂಶೋಧನ ಸಂಸ್ಥೆಗಳ ನಿರ್ದೇಶಕರ ಆಯ್ಕೆಗಾಗಿ ರಾಷ್ಟ್ರೀಯ ಜವಳಿ ನಿಗಮ ನವದೆಹಲಿ ಇಲ್ಲಿ ಜರುಗಿದ ಆಯ್ಕೆ ಸಮಿತಿ ಸಭೆಯಲ್ಲಿ ಸದ್ಯಸರಾಗಿ ಭಾಗವಹಿಸಿದ್ದರು.
- ಕೃಷಿ ಮಹಾವಿದ್ಯಾಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ರೇಷ್ಮೆಕೃಷಿ ವಿಭಾಗದ ಪ್ರಾಧ್ಯಾಪಕರಾಗಿರುವ ಡಾ. ಎಸ್. ಚಂದ್ರಶೇಖರ್‌ರವರನ್ನು ಆರನೇ ಡೀನ್ಸ್ ಸಮಿತಿಯ ಸದಸ್ಯರಾಗಿ ನಾಮನಿರ್ದೇಶನಗೊಂಡಿರುತ್ತಾರೆ. ಡಿಪಾಟ್‌ಮೆಂಟ್ ಆಫ್ ಬಯೋಟೆಕ್‌ನಾಲಜಿ ಯಲ್ಲಿ ಪ್ಲಾನ್ಟ್ ಬಯೋಟೆಕ್‌ನಾಲಜಿ ಮತ್ತು ಬಯೋ ರಿಸೊರ್ಸ್ಸ್ ಡಿಶಿಷನ್ ಘಟಕದ ತಂತ್ರಜ್ಞಾನ ತಜ್ಞರ ಸಮಿತಿ ಸದಸ್ಯರಾಗಿ ನಾಮನಿರ್ದೇಶನಗೊಂಡಿರುತ್ತಾರೆ

Plant Sciences under DST-Science & Engineering Research Board (SERB), Government of India & member of Editorial Board of *Current Science.*

- Dr. B. Mohan Raju, Professor, Department of Crop Physiology, UAS, GKVK has been nominated as Editorial Board Member of Journal of Plant Sciences and the Review Editor in Frontiers in Plant science.
- Dr. M. Mahadeva Murthy, Professor & Head Department of Forestry and Environmental Science, College of Agriculture is serving as joint secretary in the Institute of Agroforestry Farmers and Technologist (IAFT), Bangalore. He is recognized by the High Court of Karnataka as member in the Tree Expert Committee and selection committee member in the Telangana Public Service Commission.
- Dr. Babusaheb Tambat, Professor, Department of Forestry and Environmental Science, College of Agriculture is selected as executive member of editorial board for *Indian Journal Ecology* by the executive council of Indian Ecological Society (India).
- Dr. Anitha Peter, Professor, Department of Plant Biotechnology, CoA, UASB, is nominated as Member Secretary of IBSC for UASB, GKVK, Bangalore and DBT nominee for IBSC of Eurofins, Bengaluru
- Dr. Manjunatha Gowda, Professor & Head, Dept. of Sericulture, CoA, GKVK, has been nominated as RAC member of CSGRC, CSB, Hosur and as member RCC of KSSRDI, Bangalore. He has been nominated as a member of selection committee for the Directors posts in the various Institutes of Central Silk Board at National Textile Corporation, New Delhi.
- Dr. S. Chandrashekhar, Professor, CoA, GKVK has been nominted as a member in 6th Dean's Committee, ICAR. He has been nominated as a member of Technical Expert Committee (TEC) of Microbial and Natural Sciences Program in Dept. of Biotech-nology, GoI, Ministry of Science & Technology

- ಡಾ. ಬಿ. ಕಲ್ಪನ, ಪ್ರಾಧ್ಯಾಪಕರು ಮತ್ತು ರಾಜ್ಯ ನೋಡಲ್ ಅಧಿಕಾರಿ (ದೇಸಿ) ರವರು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ, ಬೆಂಗಳೂರಿನ ವಿಜ್ಞಾನದ ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳ ಅಧ್ಯಯನ ಮಂಡಳಿಯ ಸದಸ್ಯರಾಗಿ ನಾಮನಿರ್ದೇಶನ ಗೊಂಡಿದ್ದಾರೆ
- ಡಾ. ವೆಂಕಟೇಗೌಡ, ಜೆ., ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಭಾ.ಕೃ.ಸಂ.ಪ– ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ, ಕೃಷಿ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕರ್ನಾಟಕ ಸರ್ಕಾರ ಮತ್ತು ಗ್ರಾಮೀಣ ಕೃಷಿ ಪ್ರಶಸ್ತಿ ಆಯ್ಕೆ ಸಮಿತಿ ಹಾಗೂ ಕೃಷಿ ಪಂಡಿತ ಪ್ರಶಸ್ತಿ ಆಯ್ಕೆ ಸಮಿತಿ, ಕೃಷಿ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಸದಸ್ಯರಾಗಿ ನಾಮನಿರ್ದೇಶನ ಗೊಂಡಿದ್ದಾರೆ.
- ಡಾ. ಎಂ.ಎಸ್. ಶೇಷಶಾಯಿ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಬೆಳೆ ವಿಜ್ಞಾನಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ, ಬೆಂಗಳೂರು ರವರು ತಾಂತ್ರಿಕ ತಜ್ಞರ ಸಮಿತಿ, ಸಮಗ್ರ ಜೈವಿಕ ವಿಜ್ಞಾನ, ಎಸ್ಇಆರ್‌ಬಿ, ಡಿಎಸ್‌ಟಿ, ಭಾರತ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಸಮಿತಿ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದಾರೆ
- ಡಾ. ರಾಜೇಗೌಡ ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು, ಕೆವಿಕೆ, ಹಾಸನ ಇವರು ಹಾಸನ ಜಿಲ್ಲೆಯ ಆತ್ಮ ಯೋಜನೆಯ ಅಡಿಯಲ್ಲಿ ಬರುವ ಆತ್ಮ ಚಾಲನಾ ಸಮಿತಿಯ ಸದಸ್ಯರಾಗಿ, ಆತ್ಮ ಕಾರ್ಯಕ್ಷಮತೆ ವರದಿ ಸಮಿತಿಯ ಸದಸ್ಯರಾಗಿ ಹಾಗೂ ಆತ್ಮ ಯೋಜನೆಯ ಅಡಿಯಲ್ಲಿ ಆಯ್ಕೆ ಮಾಡುವ ಜಿಲ್ಲಾಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿ ಸಮಿತಿಯ ಸದಸ್ಯರಾಗಿ ನಾಮನಿರ್ದೇಶನ ಗೊಂಡಿರುತ್ತಾರೆ. ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಮಿತಿಯ ಸದಸ್ಯರಾಗಿ, ಹಾಸನ ಜಿಲ್ಲೆಯ ರೈತ ಸಿರಿ ಯೋಜನಾ ಸಮಿತಿಯ ಸದಸ್ಯರಾಗಿ, ಹಾಸನ ಜಿಲ್ಲೆಯ ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರ ಸಮಿತಿಯ ಸದಸ್ಯರಾಗಿ, ಹಾಸನ ಜಿಲ್ಲೆಯ ರಾಷ್ಟ್ರೀಯ ಆಹಾರ ಭದ್ರತಾ ಸಮಿತಿಯ ಸದಸ್ಯರಾಗಿ, ಹಾಸನ ಜಿಲ್ಲೆಯ ಕೃಷಿಕ ಸಮಾಜದ ಸಮಿತಿಯ ಸದಸ್ಯರಾಗಿ, ಹಾಸನ ಜಿಲ್ಲೆಯ ಆಕಾಶವಾಣಿ ಕೇಂದ್ರದ ಕಿಸಾನ ವಾಣಿ ಕಾರ್ಯಕ್ರಮ ಸಮಿತಿಯ ಸದಸ್ಯರಾಗಿ ಹಾಗೂ ಇವರು ಹಾಸನ ಜಿಲ್ಲೆಯ ಜಿಲ್ಲಾ ಕೌಶಲ್ಯಾಭಿವೃದ್ಧಿ ಸಮಿತಿಯ ಸದಸ್ಯರಾಗಿ ನಾಮನಿರ್ದೇಶನಗೊಂಡಿರುತ್ತಾರೆ
- ಡಾ. ಮೋಹನ್ ಕುಮಾರ್, ಎ. ಬಿ. ವಿಜ್ಞಾನಿ (ತೋಟಗಾರಿಕೆ ವಿಭಾಗ), ಕೃಷಿ ವಿಜ್ಞಾನ ಕೇಂದ್ರ, ಚಾಮರಾಜನಗರ ರವರು ತೋಟಗಾರಿಕೆ ಇಲಾಖೆ, ಚಾಮರಾಜನಗರದ ಜಿಲ್ಲಾ ಮಟ್ಟದ ಬಿತ್ತನೆ ತುಂಡುಗಳ ಪ್ರಮಾಣೀಕರಣ ಸಮಿತಿಗೆ ನಾಮನಿರ್ದೇಶನ ಗೊಂಡಿರುತ್ತಾರೆ
- ಡಾ. ವಿ. ಪಳನಿಮುತ್ತು, ವಿಶೇಷಾಧಿಕಾರಿಗಳು, ಇವರನ್ನು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಕೃಷಿ ವಿಶ್ವವಿದ್ಯಾನಿಲಯ ರಾಯಚೂರು, ಕೆಎಸ್‌ಎನ್‌ಯುಎಹೆಚ್ಎಸ್, ಶಿವಮೊಗ್ಗ, ಎಎನ್‌ಜಿಆರ್‌ಯು–ಗುಂಟೂರು ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯ, ಬಾಗಲಕೋಟೆ ಇಲ್ಲಿನ ಅಧ್ಯಾಪಕರುಗಳ ಆಯ್ಕೆ ಸಮಿತಿ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

- Dr.Kalpana, B, Professor and State Nodal Officer (DAESI) is nominated as member Board of studies for UG and PG examinations for Home-Science examinations by Maharani Cluster University, Bengaluru.
- Dr. Venkate Gowda, J., Senior Scientist & Head, ICAR – KVK, Bengaluru Rural District is nominated as member of Technical Committee of Meteorological based Crop Insurance Project, Bengaluru Rural District and nominated as member for Rural Krishi Prashasti and Krishi Pandith Award of Committee of Bengaluru Rural District
- Dr. M.S. Sheshshayee, Professor and Head, Dept. of Crop Physiology, CoA, GKVK, Bengaluru is nominated as member of Technical Expert Committee, Integrated Biological Sciences, SERB, DST, Govt of India.
- Dr. Rajegowda, Sr.. Scientist & Head, KVK, Hassan is nominated as a member for the Hassan district ATMA Chalana Committee, ATMA programme performance reporting committee, Krishi Pandith Best Farmer Award selection committee under ATMA programme. He is nominated as member for the district agriculture training center committee, member for the Hassan district Raitha Siri Yojana Committee, Custom Hiring Service Center Committee, Hassan district National Food Security Mission Committee, member of Hassan district Krishika Samaja, member for the Kisan Vani Programme Committee in Akashavani, Hassan and member for the district Skill Development Committee of Hassan district.
- Dr. Mohan Kumar A. B., Scientist (Horticulture), ICAR KVK, Chamrajanagara, is nominated as member of District level Certification of Planting Material Committee, Department of Horticulture, Chamarajanagara
- Dr. V. Palanimuthu, Special Officer has served as Faculty Selection Committee Member in UAS, Raichur, KSNUAHS, Shimoga, ANGRAU, Guntur and UHS, Bagalkot. He is member of State Level Technical Committee for Farm Machinery Subsidy Programme under SMAM of KSDA & DoH. He is also member of State Level Technical

ಇವರು ಎಸ್ಎಂಎಎಂ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಇವರ ಅಡಿಯಲ್ಲಿ ಬರುವ ಕೃಷಿ ಯಂತ್ರೋಪಕರಣಗಳ ಸಬ್ಸಿಡಿ ಕಾರ್ಯಕ್ರಮದ ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಇವರು ಕರ್ನಾಟಕ ರಾಜ್ಯ ಕೃಷಿ ಇಲಾಖೆಯ ಸಾವಯವ ಕೃಷಿ ಕಾರ್ಯಕ್ರಮದ ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಡಾ. ವಿ. ಪಳನಿಮುತ್ತು, ರವರು ಬೆಂಗಳೂರಿನ ಐ.ಐ.ಎಚ್.ಆರ್.ನ ಪ್ರಿ–ಐ.ಆರ್.ಸಿ ಇದರಲ್ಲಿ ಬಾಹ್ಯ ತಜ್ಞರಾಗಿ ಕಾರ್ಯ ನಿರ್ವಹಿಸಿರುತ್ತಾರೆ.

- ಡಾ. ವಿ. ಕುಮಾರ್‌ಗೌಡ, ಸಹಾಯಕ ಪ್ರಾಧ್ಯಾಪಕರು ಇವರನ್ನು ಜೈವಿಕ ಅನಿಲ ಸ್ಲರಿ ಮೌಲ್ಯಮಾಪನ ಮಾಡಲು ಮೇ 2022 ರಲ್ಲಿ ಎಂ.ಎನ್.ಆರ್.ಇ. ಯಿಂದ ಅಧ್ಯಕ್ಷಕರಾಗಿ ನೇಮಿಸಲಾಗಿದೆ. ಇವರನ್ನು ಜೈವಿಕ ಅನಿಲ ಸ್ಥಾವರಗಳಲ್ಲಿ ಬಿಐಎಸ್ ಸ್ಟ್ಯಾಂಡರ್ಡೈಸೇಶನ್‌ಗಾಗಿ ಸಮಿತಿ ವಿಷಯ ತಜ್ಞ ಸದಸ್ಯರನ್ನಾಗಿ ನೇಮಿಸಲಾಗಿದೆ.
- ಡಾ. ಮಧುಸೂದನ್, ಕೆ., ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ರಾಷ್ಟ್ರೀಯ ಬೀಜ ಯೋಜನೆ, ಜಿಕೆವಿಕೆ, ಬೆಂಗಳೂರು ರವರು ಕರ್ನಾಟಕ ರಾಜ್ಯ ಬೀಜಗಳು ಮತ್ತು ಸಾವಯವ ಪ್ರಮಾಣೀಕರಣ ಸಂಸ್ಥೆ, ಕರ್ನಾಟಕ ಸರ್ಕಾರ, ಹೆಬ್ಬಾಳ, ಬೆಂಗಳೂರು ಇದರ ಮಂಡಳಿಯ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದಾರೆ
- ಡಾ. ಮೋಹನ್ ರಾವ್, ಪ್ರಾಧ್ಯಾಪಕರು ಮತ್ತು ಯೋಜನಾ ಮುಖ್ಯಸ್ಥರು, ಅಖಿಲ ಭಾರತ ಸುಸಂಘಟಿತ ಸಮರ್ಥ ಬೆಳೆಗಳ ಸಂಶೋಧನಾ ಪ್ರಾಯೋಜನೆ, ಜಿಕೆವಿಕೆ, ಬೆಂಗಳೂರು ರವರು ಚಿಕ್ಕಮಗಳೂರಿನಲ್ಲಿರುವ ಭಾರತದ ಕಾಫಿ ಮಂಡಳಿಯಲ್ಲಿ ಬೆಳೆ ಸುಧಾರಣೆಯ ಪರಿಣಿತ ಸದಸ್ಯರಾಗಿ, ಕರ್ನಾಟಕ ರಾಜ್ಯ ಕೃಷಿ ಇಲಾಖೆಯ ಮುಂಗಾರು ಮತ್ತು ಹಿಂಗಾರಿನ ಬೀಜಗಳ ಬೆಲೆ ನಿಗದಿಯ ಸಂಧಾನ ಸಮಿತಿಯ ಸದಸ್ಯರಾಗಿ, ಹೊಸದೆಹಲಿಯ ಕೃಷಿ ವಿಜ್ಞಾನಿಗಳ ನೇಮಕಾತಿ ಮಂಡಳಿಯವರು ನಡೆಸಿದ ಅನುವಂಶೀಯತೆ ಮತ್ತು ಸಸ್ಯ ತಳಿ ಅಭಿವೃದ್ಧಿ ವಿಷಯದ ಕೃಷಿ ವಿಜ್ಞಾನಿಗಳ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ರಚಿಸುವ ಸಮಿತಿಯಲ್ಲಿ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದರು.
- ಡಾ. ಟಿ. ಇ. ನಾಗರಾಜ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪ್ರಾಯೋಜನಾ ಸಂಯೋಜನೆ ಘಟಕ, ಅಖಿಲ ಭಾರತ ಸುಸಂಘಟಿತ ಸಿರಿಧಾನ್ಯ ಸಂಶೋಧನಾ ಪ್ರಾಯೋಜನೆ, ಜಿಕೆವಿಕೆ ಇವರು 2023 & 2024ನೇ ಸಾಲಿಗೆ ಭಾರತೀಯ ಅನುವಂಶೀಯತೆ ಮತ್ತು ಸಸ್ಯತಳಿ ಸಂವರ್ಧನೆ ಸಮಾಜ, ನವದೆಹಲಿ ಇದರ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ.
- ಡಾ. ಲೋಹಿತಾಶ್ವ, ಎಚ್.ಸಿ., ಮುಖ್ಯಸ್ಥರು, ಅಖಿಲ ಭಾರತ ಸುಸಂಘಟಿತ ತೊಗರಿ ಬೆಳೆಯ ಸಂಶೋಧನಾ ಪ್ರಾಯೋಜನೆ, ಜಿಕೆವಿಕೆ ಇವರು ಫ್ರಾಂಟಿಯರ್ಸ್ ಇನ್ ಪ್ಲಾಂಟ್ ಸೈನ್ಸ್ ಜರ್ನಲ್‌ನ ವಿಮರ್ಶೆ ಸಂಪಾದಕರಾಗಿ ನಾಮನಿರ್ದೇಶನರಾಗಿದ್ದಾರೆ
- ಡಾ. ಮೂಡಲಗಿರಿಯಪ್ಪ, ಮುಖ್ಯ ವಿಜ್ಞಾನಿ, ಅಖಿಲ ಭಾರತ ಸುಸಂಘಟಿತ ಖುಷ್ಕಿ ಬೇಸಾಯ ಪ್ರಾಯೋಜನೆ, ಜಿ.ಕೆ.ವಿ.ಕೆ., ಬೆಂಗಳೂರು ರವರು ಕೇಂದ್ರ ರೇಷ್ಮೆ ಮಂಡಳಿ, ಬೆಂಗಳೂರು,

Committee for Organic Agriculture Programme of KSDA. He has also served as External Expert for Pre IRC, IIHR, Bangalore.

- Dr. V. Kumargouda, Assistant Professor, College of Agricultural Engineering is nominated as Chairman by MNRE, GoI for Evaluation of Biogas Slurry Filter during May, 2022. He is nominated as member of expert panel of BIS for Standardization in Biogas Plants.
- Dr. Madhusudhan, K., Professor and Head, NSP, GKVK, Bengaluru is nominated as member on the board of Karnataka State Seeds and Organic Certification Agency, GoK, Hebbal, Bengaluru
- Dr. Mohan Rao, Professor and Scheme Head, AICRP on Potential crops, GKVK, Bengaluru is nominated as Expert Member (Crop Improvement) in the Coffee Board, Chikkamagaluru; Member in Kharif and Rabi Seeds Price Negotiation Committee of Karnataka State Department of Agriculture and Expert member for setting and moderating question paper of ARS Exam in Genetics and Plant breeding subject conducted by ASRB, New Delhi
- Dr. T. E. Nagaraja, Professor (Plant Breeding) & Head, Project Coordinating Unit, AICRP (Small Millets), GKVK, Bengaluru is elected as Vice-President of Indian Society of Genetics and Plant Breeding, Pusa Campus, New-Delhi for the year 2023 and 2024
- Dr. H.C. Lohithaswa, Professor and Scheme Head, AICRP (Pigeonpea), GKVK, Bengaluru is nominated as review editor of Frontiers in Plant Science
- Dr. Mudalagiriyappa, Chief Scientist, AICRP for Dryland Agriculture, GKVK, Bengaluru is nominated as member of Mulberry Variety

ಇದರ ಹಿಪ್ಪುನೇರಳೆಯ ತಳಿಗಳ ದೃಢೀಕರಣ ಸಮಿತಿಯ ಸದಸ್ಯರಾಗಿ, ಹೈದರಾಬಾದ್‌ನ ಭಾರತೀಯ ಖುಷ್ಕಿ ಬೇಸಾಯ ಸಮಾಜ ಹಾಗೂ ಉತ್ತರ ಪ್ರದೇಶದ ಕಾನ್ಪೂರಿನ ಭಾರತೀಯ ದ್ವಿದಳದಾನ್ಯ ಸಂಶೋಧನೆ ಮತ್ತು ಅಭಿವೃದ್ಧಿ ಸಮಾಜದ ದಕ್ಷಿಣ ವಲಯದ ಕೌನ್ಸಲರ್ ಆಗಿ ನಾಮನಿರ್ದೇಶನಗೊಂಡಿದ್ದಾರೆ.

Authorization committee of Central Silk Board, Bengaluru, as Counselor for South Zone in Indian Society of Dryland Agriculture, Hyderabad and Councilor for South Zone of Indian Society of Pulses Research & Development, Kanpur, UP.

## 5.6 ಆಯೋಜಿಸಿದ/ ಭಾಗವಹಿಸಿದ ಇತರ ಕಾರ್ಯಕ್ರಮಗಳು, ಕೈಗೊಂಡ ವಿಸ್ತರಣಾ ಚಟುವಟಿಕೆಗಳು ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಯ ಪ್ರಕಟಣೆಗಳು

ಭಾಗವಹಿಸಿದ ಮತ್ತು ಆಯೋಜಿಸಿದ ಸಮಾವೇಶಗಳು, ವಿಚಾರ ಸಂಕಿರಣಗಳು, ತರಬೇತಿ ಕಾರ್ಯಕ್ರಮಗಳು; ಆಯೋಜಿಸಿದ ವಿಸ್ತರಣಾ ಚಟುವಟಿಕೆಗಳು ಮತ್ತು ವಿವಿಧ ಮಹಾವಿದ್ಯಾಲಯಗಳ/ ನಿರ್ದೇಶನಾಲಯಗಳ ಸಿಬ್ಬಂದಿಯ ಹೊರತಂದಿರುವ ಪ್ರಕಟಣೆಗಳನ್ನು ಮುಂದಿನ ಕೋಷ್ಟಕಗಳಲ್ಲಿ ನೀಡಲಾಗಿದೆ

## 5.6 Abstract of different Programmes Organised/ Participated, Extension Activities Carriedout and Number of Publications broughtout by the Faculty

Details of number of conferences /seminars / workshops /training programmes, etc. attended and organised; Extension activities organised and Number of Publications brought out by the faculty of all the Directorates and Colleges are presented in the below tables :

**ಕೋಷ್ಟಕ 37 : ಬೋಧಕರು ವಿಚಾರ ಸಂಕಿರಣ/ಸಮಾವೇಶಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಿದ ವಿವರಗಳು**
**Table 37 : Presentation of papers by the teachers in Seminar / Conference**

| ಕ್ರಸಂ. / Sl. No. | ಕಾಲೇಜುಗಳು ಮತ್ತು ಇತರ ನಿರ್ದೇಶನಾಲಯಗಳು / Colleges and other Directorates | ಪ್ರಬಂಧ ಮಂಡಿಸಿದ ಸಂಖ್ಯೆ / Number of Papers | | ಒಟ್ಟು / Total |
|---|---|---|---|---|
| | | ವಿಚಾರ ಸಂಕಿರಣ ಸಮಾವೇಶಗಳು / In Seminars | ಸಮಾವೇಶಗಳು / In Conferences/ Symposium | |
| 1. | ಕೃಷಿ ಮಹಾವಿದ್ಯಾಲಯ, ಬೆಂಗಳೂರು<br>College of Agriculture, Bangalore | 05 | 42 | 47 |
| 2. | ಕೃಷಿ ಮಹಾವಿದ್ಯಾಲಯ, ಮಂಡ್ಯ<br>College of Agriculture, Mandya | 04 | – | 04 |
| 3. | ಕೃಷಿ ಮಹಾವಿದ್ಯಾಲಯ, ಹಾಸನ<br>College of Agriculture, Hassan | 01 | 34 | 35 |
| 4. | ರೇಷ್ಮೆಕೃಷಿ ಮಹಾವಿದ್ಯಾಲಯ, ಚಿಂತಾಮಣಿ<br>College of Sericulture, Chintamani | – | 48 | 48 |
| 5. | ಕೃಷಿ ಮಹಾವಿದ್ಯಾಲಯ, ಚಾಮರಾಜನಗರ<br>College of Agriculture, Chamarajanagara | 02 | – | 02 |
| 6. | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು<br>College of al Engineering, Bangalore | 07 | 01 | 08 |
| 7. | ಸಂಶೋಧನಾ ನಿರ್ದೇಶನಾಲಯ<br>Directorate of Research | 04 | 99 | 103 |
| 8. | ವಿಸ್ತರಣಾ ನಿರ್ದೇಶನಾಲಯ<br>Directorate of Extension | 03 | 05 | 08 |
| 9. | ಶಿಕ್ಷಣ ನಿರ್ದೇಶನಾಲಯ/ಪಿ.ಪಿ.ಎಂ.ಸಿ.<br>Directorate of Education & PPMC | 05 | 07 | 12 |
| | **ಒಟ್ಟು / Total** | **31** | **236** | **267** |

**ಕೋಷ್ಟಕ 38 : ಪ್ರಸ್ತುತ ವರ್ಷದಲ್ಲಿ ಆಯೋಜಿಸಿದ್ದ ಸಮಾವೇಶಗಳು/ ವಿಚಾರ ಸಂಕಿರಣಗಳು /ಕಾರ್ಯಾಗಾರಗಳು/ ಬೇಸಿಗೆ ಶಾಲೆಗಳು / ತರಬೇತಿ ಕಾರ್ಯಕ್ರಮಗಳು**

**Table 38 : Conferences / Seminars / Workshops / Summer schools / Training Programmes organised during the year 2022-23**

| ಕ್ರ.ಸಂ. /Sl. No. | ಕಾಲೇಜುಗಳು ಮತ್ತು ಇತರ ನಿರ್ದೇಶನಾಲಯಗಳು / Colleges and other Directorates | ಆಯೋಜಿಸಿದ ಕಾರ್ಯಕ್ರಮಗಳ ಸಂಖ್ಯೆ / Number of Programmes organised | | | |
|---|---|---|---|---|---|
| | | ವಿಚಾರ ಸಂಕಿರಣಗಳು/ ಕಾರ್ಯಗಾರಗಳು / Seminars/ Workshops | ತರಬೇತಿ ಕಾರ್ಯಕ್ರಮಗಳು/ Training Programmes | ಸಮ್ಮೇಳನಗಳು / Conferences | ಇತರೆ / Others |
| 1. | ಕೃಷಿ ಮಹಾವಿದ್ಯಾಲಯ, ಬೆಂಗಳೂರು College of Agriculture, Bangalore | 18 | 49 | 03 | 39 |
| 2. | ಕೃಷಿ ಮಹಾವಿದ್ಯಾಲಯ, ಮಂಡ್ಯ College of Agriculture, Mandya | 02 | 09 | – | – |
| 3. | ಕೃಷಿ ಮಹಾವಿದ್ಯಾಲಯ, ಹಾಸನ College of Agriculture, Hassan | – | 45 | 01 | – |
| 4. | ರೇಷ್ಮೆಕೃಷಿ ಮಹಾವಿದ್ಯಾಲಯ, ಚಿಂತಾಮಣಿ College of Sericulture, Chintamani | – | 18 | 01 | – |
| 5. | ಕೃಷಿ ಮಹಾವಿದ್ಯಾಲಯ, ಚಾಮರಾಜನಗರ College of Agriculture, Chamarajanagara | – | 01 | – | – |
| 6. | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು College of al Engineering, Bangalore | – | 14 | – | 08 |
| 7. | ಸಂಶೋಧನಾ ನಿರ್ದೇಶನಾಲಯ Directorate of Research | 02 | 30 | 01 | 26 (TSP/SCSP) |
| 8. | ವಿಸ್ತರಣಾ ನಿರ್ದೇಶನಾಲಯ Directorate of Extension | 15 | 755 | – | 07 |
| 9. | ಶಿಕ್ಷಣ ನಿರ್ದೇಶನಾಲಯ/ಪಿ.ಪಿ.ಎಂ.ಸಿ. Directorate of Education & PPMC | – | 05 | – | 06 |
| | **ಒಟ್ಟು / Total** | **37** | **926** | **6** | **86** |

**ಕೋಷ್ಟಕ 39 : ಪ್ರಸ್ತುತ ವರ್ಷದಲ್ಲಿ ಬೋಧಕ ಸಿಬ್ಬಂದಿಗಳು ಭಾಗವಹಿಸಿದ್ದ ಸಮಾವೇಶ/ವಿಚಾರ ಸಂಕಿರಣ/ಕಾರ್ಯಾಗಾರ/ಬೇಸಿಗೆ ಶಾಲೆಗಳು/ತರಬೇತಿ ಕಾರ್ಯಕ್ರಮಗಳು**

**Table 39 : Conferences / Seminars / Workshops / Summer schools / Training Programmes attended by the faculty during the year 2022-23**

| ಕ್ರಸಂ. / Sl. No. | ಕಾಲೇಜುಗಳು ಮತ್ತು ಇತರ ನಿರ್ದೇಶನಾಲಯಗಳು / Colleges and other Directorates | ಭಾಗವಹಿಸಿದ ಕಾರ್ಯಕ್ರಮಗಳ ಸಂಖ್ಯೆ / Number of programmes attended | | | | | | | |
|---|---|---|---|---|---|---|---|---|---|
| | | ವಿಚಾರ ಸಂಕಿರಣಗಳು/ ಕಾರ್ಯಾಗಾರಗಳು / Seminars/Workshops | | ತರಬೇತಿ ಕಾರ್ಯಕ್ರಮಗಳು / Training Programmes | | ಸಮ್ಮೇಳನಗಳು / Conferences | | ಬೇಸಿಗೆ/ಚಳಿಗಾಲದ ಶಾಲೆಗಳು / Summer / Winter Schools | |
| | | ರಾಷ್ಟ್ರೀಯ / National | ಅಂತರಾಷ್ಟ್ರೀಯ / International | ರಾಷ್ಟ್ರೀಯ / National | ಅಂತರಾಷ್ಟ್ರೀಯ / International | ರಾಷ್ಟ್ರೀಯ / National | ಅಂತರಾಷ್ಟ್ರೀಯ / International | ರಾಷ್ಟ್ರೀಯ / National | ಅಂತರಾಷ್ಟ್ರೀಯ / International |
| 1. | ಕೃಷಿ ಮಹಾವಿದ್ಯಾಲಯ, ಬೆಂಗಳೂರು College of Agriculture, Bangalore | 52 | 7 | 43 | 1 | 12 | 16 | 2 | – |
| 2. | ಕೃಷಿ ಮಹಾವಿದ್ಯಾಲಯ, ಮಂಡ್ಯ College of Agriculture, Mandya | 12 | – | 13 | – | 01 | 11 | – | – |
| 3. | ಕೃಷಿ ಮಹಾವಿದ್ಯಾಲಯ, ಹಾಸನ College of Agriculture, Hassan | 06 | 21 | 34 | 04 | 03 | 20 | 02 | 21 |
| 4. | ರೇಷ್ಮೆಕೃಷಿ ಮಹಾವಿದ್ಯಾಲಯ, ಚಿಂತಾಮಣಿ College of Sericulture, Chintamani | 02 | – | 05 | – | 23 | – | – | – |
| 5. | ಕೃಷಿ ಮಹಾವಿದ್ಯಾಲಯ, ಚಾಮರಾಜನಗರ College of Agriculture, Chamarajanagar | 01 | – | 02 | – | – | – | – | – |
| 6. | ಸಂಶೋಧನಾ ನಿರ್ದೇಶನಾಲಯ Directorate of Research | 22 | 03 | 20 | – | 10 | 51 | 01 | – |
| 7. | ವಿಸ್ತರಣಾ ನಿರ್ದೇಶನಾಲಯ Directorate of Extension | 08 | – | 26 | 1 | 03 | 11 | – | – |
| 8. | ಶಿಕ್ಷಣ ನಿರ್ದೇಶನಾಲಯ/ಪಿ.ಪಿ.ಎಂ.ಸಿ. Directorate of Education & PPMC | 07 | 01 | 26 | – | 04 | 05 | 01 | – |
| | **ಒಟ್ಟು / Total** | **110** | **32** | **169** | **06** | **56** | **114** | **06** | **21** |

**ಕೋಷ್ಟಕ 40 : ಪ್ರಸ್ತುತ ವರ್ಷದಲ್ಲಿ ಬೋಧಕ ಸಿಬ್ಬಂದಿ ನಿರ್ವಹಿಸಿದ ವಿಸ್ತರಣಾ ಚಟುವಟಿಕೆಗಳು**
**Table 40 : Extension Activities carried out by the faculty during the year 2022-23**

| ಕ್ರ.ಸಂ. / Sl. No. | ಕಾಲೇಜುಗಳು ಮತ್ತು ಇತರೆ ನಿರ್ದೇಶನಾಲಯಗಳು / Colleges and other Directorates | ವಿಸ್ತರಣಾ ಚಟುವಟಿಕೆಗಳ ಸಂಖ್ಯೆ / Number of Extension carried out | | | | | | | |
|---|---|---|---|---|---|---|---|---|---|
| | | ರೇಡಿಯೋ ಉಪನ್ಯಾಸ/ Radio Talks | ದೂರದರ್ಶನ ಕಾರ್ಯ ಕ್ರಮಗಳು/ TV Programs | ಕ್ಷೇತ್ರ ತಪಾಸಣಾ ಭೇಟಿಗಳು/ Diagnostic Field Visits | ಕ್ಷೇತ್ರೋತ್ಸವ ಗಳು/ Field Days | ಕ್ಷೇತ್ರೋತ್ಸವ ಗಳು/ FLDs/ Demos | ಕ್ಷೇತ್ರ ಪ್ರಯೋಗ ಗಳು/ Fram Trails | ಕ್ಷೇತ್ರ ಪರೀಕ್ಷೆ/ OFTs | ಇತರ / Others (As Resource Persons/Farm queries etc.) |
| 1. | ಕೃಷಿ ಮಹಾವಿದ್ಯಾಲಯ, ಬೆಂಗಳೂರು<br>College of Agriculture, Bangalore | 05 | 10 | 126 | 48 | 01 | 06 | - | 270 |
| 2. | ಕೃಷಿ ಮಹಾವಿದ್ಯಾಲಯ, ಮಂಡ್ಯ<br>College of Agriculture, Mandya | 02 | – | 107 | – | – | – | – | 228 |
| 3. | ಕೃಷಿ ಮಹಾವಿದ್ಯಾಲಯ, ಹಾಸನ<br>College of Agriculture, Hassan | 16 | – | 52 | 18 | – | 4 | – | 227 |
| 4. | ರೇಷ್ಮೆಕೃಷಿ ಮಹಾವಿದ್ಯಾಲಯ, ಚಿಂತಾಮಣಿ<br>College of Sericulture, Chintamani | 03 | 02 | 27 | 05 | – | – | – | 118 |
| 5. | ಕೃಷಿ ಮಹಾವಿದ್ಯಾಲಯ, ಚಾಮರಾಜನಗರ<br>College of Sericulture, Chamarajanagara | – | – | 32 | 12 | – | – | – | 22 |
| 6. | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು<br>College of Agril. Engineering, Bangalore | – | – | 21 | – | – | – | – | 22 |
| 7. | ಸಂಶೋಧನಾ ನಿರ್ದೇಶನಾಲಯ<br>Directorate of Research | 05 | 20 | 01 | 10 | 919 | 28 | – | 188 |
| 8. | ವಿಸ್ತರಣಾ ನಿರ್ದೇಶನಾಲಯ<br>Directorate of Extension | 27 | 14 | 319 | 95 | 144 | 67 | 24 | 659 |
| 9. | ಶಿಕ್ಷಣ ನಿರ್ದೇಶನಾಲಯ/ಪಿ.ಪಿ.ಎಂ.ಸಿ.<br>Directorate of Education & PPMC | – | 02 | 13 | 01 | – | – | – | 27 |
| | **ಒಟ್ಟು / Total** | **58** | **48** | **698** | **189** | **1064** | **105** | **24** | **1761** |

**ಕೋಷ್ಟಕ 41 : ಬೋಧಕ ಸಿಬ್ಬಂದಿಯು ಹೊರತಂದ ಮುಖ್ಯ ಪ್ರಕಟಣೆಗಳು**
**Table 41 : Important publications brought out by the faculty during 2022-23**

**ಅ) ನಾಸ್ ಅಂಕಗಳೊಂದಿಗೆ ಪ್ರಕಟವಾದ ಸಂಶೋಧನಾ ಪ್ರಬಂಧಗಳು**
**a) Full Length Research Papers published with NAAS Scores**

| ಕ್ರಸಂ. / Sl. No. | ಕಾಲೇಜುಗಳು ಮತ್ತು ಇತರ ನಿರ್ದೇಶನಾಲಯಗಳು / Colleges and other Directorates | ನಾಸ್ ಅಂಕಗಳೊಂದಿಗೆ ಪ್ರಕಟವಾದ ಸಂಶೋಧನಾ ಪ್ರಬಂಧಗಳು / Number of Full length papers published — ನಾಸ್ ರೇಟಿಂಗ್ / NAAS Rating | | | | ಒಟ್ಟು / Total |
|---|---|---|---|---|---|---|
| | | < 5 .00 | 5.00–6.00 | 6.00–9.00 | >9.00 | |
| 1. | ಕೃಷಿ ಮಹಾವಿದ್ಯಾಲಯ, ಬೆಂಗಳೂರು College of Agriculture, Bangalore | 107 | 126 | 46 | 21 | 300 |
| 2. | ಕೃಷಿ ಮಹಾವಿದ್ಯಾಲಯ, ಮಂಡ್ಯ College of Agriculture, Mandya | 12 | 17 | 08 | 02 | 39 |
| 3. | ಕೃಷಿ ಮಹಾವಿದ್ಯಾಲಯ, ಹಾಸನ College of Agriculture, Hassan | 07 | 20 | 03 | 03 | 33 |
| 4. | ರೇಷ್ಮೆಕೃಷಿ ಮಹಾವಿದ್ಯಾಲಯ, ಚಿಂತಾಮಣಿ College of Sericulture, Chintamani | 11 | 11 | 03 | 01 | 26 |
| 5. | ಕೃಷಿ ಮಹಾವಿದ್ಯಾಲಯ, ಚಾಮರಾಜನಗರ College of Agriculture, Chamarajanagara | 02 | 01 | 02 | 01 | 06 |
| 6. | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು College of al Engineering, Bangalore | 08 | 08 | – | – | 16 |
| 7. | ಸಂಶೋಧನಾ ನಿರ್ದೇಶನಾಲಯ Directorate of Research) | 215 | 104 | 32 | 22 | 373 |
| 8. | ವಿಸ್ತರಣಾ ನಿರ್ದೇಶನಾಲಯ Directorate of Extension | 17 | 14 | 02 | 01 | 34 |
| 9. | ಶಿಕ್ಷಣ ನಿರ್ದೇಶನಾಲಯ/ಪಿ.ಪಿ.ಎಂ.ಸಿ. Directorate of Education & PPMC | 10 | 02 | – | – | – |
| | **ಒಟ್ಟು / Total** | **389** | **303** | **96** | **51** | **827** |

ಆ) ಇತರೆ ಪ್ರಕಟಣೆಗಳು

**b) Other Publication during 2022-23**

| ಕ್ರಸಂ. / Sl. No. | ಕಾಲೇಜುಗಳು ಮತ್ತು ಇತರ ನಿರ್ದೇಶನಾಲಯಗಳು / Colleges and other Directorates | ಪ್ರಕಟಣೆಗಳ ಸಂಖ್ಯೆ / Nunber of Publications | | | | ಒಟ್ಟು / Total |
|---|---|---|---|---|---|---|
| | | ಮಡಿಚಿಕೆ / ಕರಪತ್ರಗಳು/ ಬುಲೆಟಿನ್ಸ್ / Folders/Leaflets/ Brochures/ Bulletins | ಜನಪ್ರಿಯ ಲೇಖನಗಳು / Popular Articles | ಪುಸ್ತಕಗಳು/ ಮ್ಯಾಗಜೈನ್ಸ್/ ವರದಿಗಳು/ಜರ್ನಲ್ಸ್ / Books/Magazines/ Reports/Journals | ಇತರೆ / Other Abstrcts/ Chapter in Books/ Souvenir etc. | |
| 1. | ಕೃಷಿ ಮಹಾವಿದ್ಯಾಲಯ, ಬೆಂಗಳೂರು College of Agriculture, Bangalore | 26 | 22 | 10 | 33 | 91 |
| 2. | ಕೃಷಿ ಮಹಾವಿದ್ಯಾಲಯ, ಮಂಡ್ಯ College of Agriculture, Mandya | 02 | 11 | – | 53 | 66 |
| 3. | ಕೃಷಿ ಮಹಾವಿದ್ಯಾಲಯ, ಹಾಸನ College of Agriculture, Hassan | 01 | 17 | 08 | 39 | 65 |
| 4. | ರೇಷ್ಮೆಕೃಷಿ ಮಹಾವಿದ್ಯಾಲಯ, ಚಿಂತಾಮಣಿ College of Sericulture, Chintamani | 02 | 04 | 08 | 41 | 55 |
| 5. | ಕೃಷಿ ಮಹಾವಿದ್ಯಾಲಯ, ಚಾಮರಾಜನಗರ College of Agriculture, Chamarajanagara | – | 02 | – | 09 | 11 |
| 6. | ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು College of al Engineering, Bangalore | 19 | 01 | – | 09 | 29 |
| 7. | ಸಂಶೋಧನಾ ನಿರ್ದೇಶನಾಲಯ Directorate of Research) | 44 | 45 | 28 | 22 | 139 |
| 8. | ವಿಸ್ತರಣಾ ನಿರ್ದೇಶನಾಲಯ Directorate of Extension | 77 | 88 | 04 | 27 | 196 |
| 9. | ಶಿಕ್ಷಣ ನಿರ್ದೇಶನಾಲಯ/ಪಿ.ಪಿ.ಎಂ.ಸಿ. Directorate of Education & PPMC | 13 | 01 | 09 | 10 | – |
| | **ಒಟ್ಟು / Total** | **184** | **191** | **67** | **243** | **652** |

ಅಧ್ಯಾಯ VI / Chapter VI

# 6. ಆರ್ಥಿಕ ಸಂಪನ್ಮೂಲ, ಹಂಚಿಕೆ, ಲೆಕ್ಕಪತ್ರ ಮತ್ತು ನಿರ್ವಹಣೆ
# Financial Resources, Allocation, Accounting and Management

## 6.1 ಆರ್ಥಿಕ ಸಂಪನ್ಮೂಲ

ರಾಜ್ಯ ಸರ್ಕಾರವು ಚಾಲ್ತಿಯಲ್ಲಿರುವ ಕಾರ್ಯಗಳನ್ನು ಮುಂದುವರೆಸಲು, ವೇತನ ಅನುದಾನದ ಅಡಿಯಲ್ಲಿ ನಿರ್ವಹಣಾ ಆರ್ಥಿಕ ನೆರವನ್ನು ಒದಗಿಸಿದೆ. ಸಾಮಾನ್ಯ ಅನುದಾನದಡಿಯಲ್ಲಿ ಅಸ್ತಿತ್ವದಲ್ಲಿರುವ ಕಾರ್ಯಕ್ರಮಗಳನ್ನು ಬಲಪಡಿಸಲು ಹಾಗೂ ಆಡಳಿತವನ್ನೊಳಗೊಂಡಂತೆ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶೈಕ್ಷಣಿಕ ಕಾರ್ಯಕ್ರಮಗಳ ನವೀನ ಚಟುವಟಿಕೆಗಳನ್ನು ಕೈಗೊಳ್ಳಲು ಸಾಮಾನ್ಯ ಅನುದಾನವನ್ನು ಒದಗಿಸಿದೆ. ವಿಸ್ತರಣಾ ಶಿಕ್ಷಣ ತರಬೇತಿ ಕಾರ್ಯಕ್ರಮಗಳು ಮತ್ತು ತಾತ್ಕಾಲಿಕ ಸಂಶೋಧನಾ ಪ್ರಾಯೋಜನೆಗಳನ್ನು ಕೈಗೊಳ್ಳಲು ರಾಜ್ಯ ಅಭಿವೃದ್ಧಿ ಇಲಾಖೆಗಳು ಆರ್ಥಿಕ ನೆರವನ್ನು ಒದಗಿಸಿವೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಚಾಲ್ತಿಯಲ್ಲಿರುವ ಯೋಜನೆಗಳನ್ನು ಮುಂದುವರಿಸಲು ಮತ್ತು ನವೀನ ಬೋಧನಾ ಹಾಗೂ ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ಅಳವಡಿಸಲು ಧನ ಸಹಾಯ ಒದಗಿಸಿದೆ. ಅಖಿಲ ಭಾರತ ಸಹಯೋಜಿತ ಸಂಶೋಧನಾ ಯೋಜನೆಗಳಿಗೆ ಹಾಗೂ ತಾತ್ಕಾಲಿಕ ಸಂಶೋಧನಾ ಪ್ರಾಯೋಜನೆಗಳಿಗೂ ಸಹ ಅನುದಾನವನ್ನು ಒದಗಿಸಿದೆ. ಕೃಷಿಯಲ್ಲಿ ನಿರ್ದಿಷ್ಟ ಸಂಶೋಧನೆಗಳನ್ನು ಕೈಗೊಳ್ಳಲು ಭಾರತ ಸರ್ಕಾರದ ವಿವಿಧ ಇಲಾಖೆಗಳು ಧನ ಸಹಾಯವನ್ನು ಒದಗಿಸಿವೆ. ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳನ್ನು ಆಯೋಜಿಸಲು ವಿವಿಧ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳು/ಏಜೆನ್ಸಿಗಳು ಆಗಾಗ್ಗೆ ಸಹ ಅನುದಾನ ಒದಗಿಸುತ್ತವೆ. ಬೇಸಾಯ, ಬೀಜ ಮತ್ತು ಸಸಿಮಡಿ ಚಟುವಟಿಕೆ, ವಿದ್ಯಾರ್ಥಿ ಶುಲ್ಕ ಸಂಗ್ರಹಣೆ ಮುಂತಾದ ಆಂತರಿಕ ಸಂಪನ್ಮೂಲವನ್ನು ಸಮರ್ಥವಾಗಿ ಬಳಸಿಕೊಳ್ಳುವ ಮೂಲಕ ಆದಾಯವನ್ನು ರೂಪಿಸಿಕೊಳ್ಳಲಾಗುತ್ತಿದೆ.

## 6.1 Source of Finance

The State Government provided grants under Grant-in-aid salaries to continue the ongoing commitments under establishment. Further, the grants under Grant-in-aid general were provided for strengthening the existing programmes and to establish new activities under teaching, research and extension education programmes including general administration. The State Government departments provided certain grants to undertake Ad-hoc research schemes and extension educational activities. Indian Council of Agricultural Research provided funds for the continuation of the existing schemes and establishment of new Teaching, Research and Extension Education Programmes. Grants were also provided under All India Co-ordinated Research Schemes and Ad-hoc Research programmes. Several Departments of Govt. of India also provided financial assistance to conduct specific research in agriculture. Grants are also being provided quite often by several National and International Organizations/Agencies to conduct Research & Extension programmes in the University. Revenue is also generated by effectively utilizing the internal resources through crop cultivation, sale of seeds, nursery activities, collection of student's fees etc.

## 6.2 ಅನುದಾನಗಳ ಸ್ವೀಕೃತಿ 2022-23

### 6.2.1 ರಾಜ್ಯ ಸರ್ಕಾರದ ಅನುದಾನ

#### 6.2.1.1 ವೇತನದ ಅನುದಾನ

ರಾಜ್ಯ ಸರ್ಕಾರವು 2022-23ನೇ ಸಾಲಿನಲ್ಲಿ ವೇತನದ ಅನುದಾನವಾಗಿ ರೂ. 11188.88 ಲಕ್ಷಗಳನ್ನು ಬಿಡುಗಡೆ ಮಾಡಿದೆ.

#### 6.2.1.2 ವಿಶ್ರಾಂತಿ ವೇತನ ಅನುದಾನ

ರಾಜ್ಯ ಸರ್ಕಾರವು 2022-23ನೇ ಸಾಲಿನಲ್ಲಿ ವಿಶ್ರಾಂತಿ ವೇತನ ಅನುದಾನವಾಗಿ ರೂ. 13148.45 ಲಕ್ಷಗಳನ್ನು ಬಿಡುಗಡೆ ಮಾಡಿದೆ

#### 6.2.1.3 ಗುತ್ತಿಗೆ/ಹೊರಗುತ್ತಿಗೆ ಅನುದಾನ

ರಾಜ್ಯ ಸರ್ಕಾರವು 2022-23 ನೇ ಸಾಲಿನಲ್ಲಿ ಗುತ್ತಿಗೆ/ಹೊರಗುತ್ತಿಗೆ ಅನುದಾನವಾಗಿ ರೂ. 835.62 ಲಕ್ಷಗಳನ್ನು ಬಿಡುಗಡೆ ಮಾಡಿದೆ.

## 6.2 Receipts 2022-23

### 6.2.1 Grants from State Government

#### 6.2.1.1 Grant-in-Aid Salary

The State Government has released Rs. 11188.88 lakhs during the year 2022-23 as Grant-in-Aid salaries.

#### 6.2.1.2 Grant-in-Aid Pension

The State Government has released Rs. 13148.45 lakhs during the year 2022-23 as Grant-in-Aid Pension.

#### 6.2.1.3 Grant-in-Aid Contract/outsource

The State Government has released Rs. 835.62 lakhs during the year 2022-23 as Grant-in-Aid contract / outsource.

#### 6.2.1.4 ದಿನಗೂಲಿ ಅನುದಾನ

ರಾಜ್ಯ ಸರ್ಕಾರವು 2022–23 ನೇ ಸಾಲಿನಲ್ಲಿ ದಿನಗೂಲಿ ಅನುದಾನವಾಗಿ ರೂ. 342.95 ಲಕ್ಷಗಳನ್ನು ಬಿಡುಗಡೆ ಮಾಡಿದೆ.

#### 6.2.1.5 ಸಾಮಾನ್ಯ ಅನುದಾನ

ರಾಜ್ಯ ಸರ್ಕಾರವು 2022–23 ನೇ ಸಾಲಿನಲ್ಲಿ ಕೃಷಿ ಸಂಶೋಧನೆಗಾಗಿ ರೂ. 982.84 ಲಕ್ಷಗಳನ್ನು ಚಾಲ್ತಿಯಲ್ಲಿರುವ ಚಟುವಟಿಕೆಗಳ ಅಡಿಯಲ್ಲಿ ನಿರಂತರವಾಗಿ ನಡೆಯುತ್ತಿರುವ ಬೋಧನೆ, ಸಂಶೋಧನೆ, ವಿಸ್ತರಣಾ ಶಿಕ್ಷಣ ಹಾಗೂ ಸಾಮಾನ್ಯ ಆಡಳಿತಗಳಿಗೆ ಬಿಡುಗಡೆ ಮಾಡಿದೆ.

#### 6.2.1.6 ಪರಿಶಿಷ್ಟ ಜಾತಿ ಉಪಯೋಜನೆ ಅನುದಾನ (ಸಂಶೋಧನೆ)

ರಾಜ್ಯ ಸರ್ಕಾರವು 2022–23ನೇ ಸಾಲಿನಲ್ಲಿ ಸಂಶೋಧನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಗೆ ಅನುದಾನವಾಗಿ ರೂ. 156.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

#### 6.2.1.7 ಗಿರಿಜನ ಉಪಯೋಜನೆ ಅನುದಾನ–ಸಂಶೋಧನೆ

ರಾಜ್ಯ ಸರ್ಕಾರವು 2022–23 ನೇ ಸಾಲಿನಲ್ಲಿ ಸಂಶೋಧನೆ ಅಡಿಯಲ್ಲಿ ಗಿರಿಜನ ಉಪಯೋಜನೆಗೆ ಅನುದಾನವಾಗಿ ರೂ. 65.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

#### 6.2.1.8 ನಬಾರ್ಡ್ ಅನುದಾನ

2022–23 ನೇ ಸಾಲಿನಲ್ಲಿ ನಬಾರ್ಡ್ ಅನುದಾನದಡಿಯಲ್ಲಿ ರೂ. 3066.98 ಲಕ್ಷ ಬಿಡುಗಡೆ ಮಾಡಿದೆ.

#### 6.2.1.9 ರಾಜ್ಯ ಸರ್ಕಾರದ ಇಲಾಖೆಗಳ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗಳು

2022–23 ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ಸರ್ಕಾರದ ಇಲಾಖೆಗಳಿಂದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯ ಪ್ರಾಯೋಜನೆಗಳಿಗೆ ರೂ. 18.99 ಲಕ್ಷ ರೂ.ಗಳನ್ನು ಸ್ವೀಕರಿಸಿದೆ.

2022–23 ನೇ ಸಾಲಿನಲ್ಲಿ ಕೃಷಿ ವಿಶ್ವವಿದ್ಯಾನಿಲಯಕ್ಕೆ ಒಟ್ಟು ಸ್ವೀಕೃತಿಯಾದ ಆಂತರಿಕ ಮೊತ್ತ ರೂ. 5321.66 ಲಕ್ಷಗಳು. (ತಾತ್ಕಾಲಿಕ)

#### 6.2.1.10 ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅನುದಾನಗಳು

ಭಾರತೀಯ ಕೃಷಿ ಅನುಸಂಧಾನ ಪರಿಷತ್ 2022–23 ನೇ ಸಾಲಿನಲ್ಲಿ ಅನುದಾನವನ್ನು ಬಿಡುಗಡೆ ಮಾಡಿದ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ

#### 6.2.1.11 ಭಾರತ ಸರ್ಕಾರದ ಅನುದಾನ

2022–23 ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ಭಾರತ ಸರ್ಕಾರದ ವಿವಿಧ ಇಲಾಖೆಗಳಾದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಜೈವಿಕ ತಂತ್ರಜ್ಞಾನ ಇಲಾಖೆ, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್, ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆಗಳಿಂದ ನಿರ್ದಿಷ್ಟ ಸಂಶೋಧನಾ ಕಾರ್ಯಕ್ರಮಗಳಿಗೆ 2221.62 ಲಕ್ಷ ರೂ.ಗಳ ಅನುದಾನವನ್ನು ಸ್ವೀಕರಿಸಿದೆ.

#### 6.2.1.4 Grant-in-aid Daily wages

The State Government has released Rs. 342.95 lakhs during the year 2022-23 as Grant-in-aid daily wages.

#### 6.2.1.5 Grant-in-Aid General

The State Government has released Rs. 982.84 lakhs for Agricultural Research during the year 2022-23 towards the continuation of ongoing activities under Teaching, Research, Extension Education and General Administration.

#### 6.2.1.6 Grant-in-aid Schedules Cast sub Plan (Research)

The State Government has released Rs. 156.00 lakhs under Research head during the year 2022-23 as Grant-in-Aid Schedules Caste sub Plan.

#### 6.2.1.7 Grant-in-aid Tribal Sub Plan-Research

